**ಕರ್ನಾಟಕ ಸರ್ಕಾರ**
**ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,**
**ನೃಪತುಂಗ ರಸ್ತೆ, ಬೆಂಗಳೂರು – 560 001**
**ಮತ್ತು**
**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**
**ನೃಪತುಂಗ ರಸ್ತೆ, ಬೆಂಗಳೂರು.**
***ಸಹಯೋಗ***
**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,**
**ಮಲ್ಲೇಶ್ವರಂ, ಬೆಂಗಳೂರು.**

# ಪ್ರಗತಿ

**ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ**
**ಪ್ರಶ್ನೋತ್ತರ ಮಾಲಿಕೆ**

## ದ್ವಿತೀಯ ಭಾಷೆ ಕನ್ನಡ

**ಆಯೋಜಕರು**

**ಶ್ರೀ ಮೊಹಮ್ಮದ್ ಮೊಹಸಿನ್,**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560 001.**

**ಪರಿಕಲ್ಪನೆ**

**ಶ್ರೀಮತಿ ಜ್ಹೋಹರಾ ಜಬೀನ್ ಎಂ.**
**ನಿರ್ದೇಶಕರು,**
**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

## ಸಂಯೋಜಕರು

**ಶ್ರೀಮತಿ ಮಂಜುಳ ಆರ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,

**ಶ್ರೀ ಮರಿಗೌಡ ಬಿ.ಎನ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ನಾಗರತ್ನ ಎಚ್.**
ಉಪನ್ಯಾಸಕರು
ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ,
ಮಂಗಳೂರು.

## ಸಂಪನ್ಮೂಲ ಶಿಕ್ಷಕರು

**ಶ್ರೀ ಸಿದ್ದರಾಜಪ್ಪ ಎಸ್. ಎಂ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ನಿಜಾಮಿಯಾ
ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ,
ಮೈಸೂರು.

**ಶ್ರೀಮತಿ ಅನಿತ ಕುಮಾರಿ ಎಲ್.**
ಕನ್ನಡ ಭಾಷಾ ಶಿಕ್ಷಕರು
ಫಾರೂಖಿಯಾ ಬಾಲಕರ ಪ್ರೌಢಶಾಲೆ.
ತಿಲಕ್ ನಗರ, ಮೈಸೂರು.

# ಆಶಯ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014–15 ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಮುನ್ನುಡಿ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ.ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ.ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಜ಼ೋಹರಾ ಜಬೀನ್ ಎಂ.**

**ನಿರ್ದೇಶಕರು,**

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಅದಕ್ಕಾಗಿ ನೀಡಿರುವ **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಎಂಬ ಹೊತ್ತಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.

- ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು
  ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.

- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಪ್ರೇರಣೆ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುಂತೆ ಮಾಡುವುದು.

- ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು **'ಪ್ರೇರಣೆ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರಗತಿ'** ಹಾಗೂ ಕೊನೆಯಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು **'ಪ್ರೇರಣೆ'** ಹಾಗೂ **'ಪ್ರಗತಿ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.

- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.

- ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.

- **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.

## ಕವಿ/ಲೇಖಕರ ಪರಿಚಯ

**ಗದ್ಯ –1** **ಒಣಮರದ ಗಿಳಿ**

**ಅ.ರಾ. ಮಿತ್ರ:** ಇವರು ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ 1935ರಲ್ಲಿ ಜನಿಸಿದರು. ಇವರು ಸಾಹಿತ್ಯ ಕ್ಷೇತ್ರದಲ್ಲಿ ಅಸಮಾನ್ಯ ಸಾಧನೆ ಮಾಡಿದ್ದಾರೆ.'ಆರತಕ್ಷತೆ', ಭಾಮಿನಿಷಟ್ಪದಿಯಲ್ಲಿ ಕನ್ನಡ ಮೇಘದೂತ, ಬದುಕು–ಬರಹ, ಮಹಾಭಾರತ ಪಾತ್ರ ಸಂಗತಿಗಳು ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಉಪನ್ಯಾಸಕರಾಗಿ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ್ದಾರೆ.

**ಗದ್ಯ– 4** **ಪಶ್ಚಿಮ ಘಟ್ಟಗಳ ಪತನ**

**ನಾಗೇಶ ಹೆಗಡೆ:** ಇವರು ಉತ್ತರ ಕನ್ನಡ ಜಿಲ್ಲೆಯ ಬಕ್ಕಮನೆಯಲ್ಲಿ 1948ರ ಫೆಬ್ರವರಿ 14ರಲ್ಲಿ ಜನಿಸಿದರು.'ಇರುವುದೊಂದೇ ಭೂಮಿ', ಸುರಿಹೊಂಡ' ಭರತಖಂಡ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಯು ದೊರಕಿದೆ.

**ಗದ್ಯ –5** **ಎಲ್ಲಿ ಹೋಗ್ಯಾವೊ ಆಕಾಲ**

**ಡಾ॥ ಗುರುರಾಜ ಕರಜಗಿ :** ಇವರು ಕ್ರಿ.ಶ. 1952 ರಲ್ಲಿ ಧಾರವಾಡದಲ್ಲಿ ಜನಿಸಿದರು. **'ಕರುಣಾಳು ಬಾ ಬೆಳಕೆ'** ಇಪ್ಪತ್ತಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ.ಡಾಕ್ಟರೇಟ್ ಪದವಿ ಪಡೆದ ಇವರು ಪ್ರಾಧ್ಯಾಪಕರಾಗಿದ್ದರು.

**ಗದ್ಯ– 6** **ಶಿಷ್ಯ ವತ್ಸಲ ರಾಮನ್**

**ಬಿ.ಪಿ. ರಾಧಾಕೃಷ್ಣ:**ಬಿ. ಪುಟ್ಟಯ್ಯ ರಾಧಾಕೃಷ್ಣರವರು ಕ್ರಿ.ಶ. 1918ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು.ಸಿ.ವಿ. ರಾಮನ್, ಚಾರ್ಲ್ಸ್ ಡಾರ್ವಿನ್, ಐನ್‌ಸ್ಟೀನ್, ರಾಮಾನುಜಂ, ಮೇರಿಕ್ಯೂರಿ ಮುಂತಾದವರ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ.1954ರಲ್ಲಿ ಡಾಕ್ಟರೇಟ್ ಪಡೆದಿರುವರು.2 ಬಾರಿ ಸಾಹಿತ್ಯ ಅಕಾಡಮಿ ಪ್ರಶಸ್ತಿ, 1991ರಲ್ಲಿ ಪದ್ಮಶ್ರೀ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.2012ರಲ್ಲಿ ಕಾಲವಾದರು.

**ಗದ್ಯ–7** **ನನ್ನ ಗೋಪಾಲ**

**ಕುವೆಂಪು :**ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪರವರು ಕ್ರಿ.ಶ. 1904 ರಲ್ಲಿ ಕುಪ್ಪಳ್ಳಿಯಲ್ಲಿ ಹುಟ್ಟಿದರು. ಕನ್ನಡದ ವರ್ಡ್ಸ್‌ವರ್ತ್ ಎಂದು ಹೆಸರಾಗಿದ್ದಾರೆ.'ಶ್ರೀ ರಾಮಾಯಣ ದರ್ಶನಂ**"**, ನನ್ನ ಗೋಪಾಲ, ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ ಕೃತಿಗಳನ್ನು ರಚಿಸಿದ್ದಾರೆ.1964ರಲ್ಲಿ ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿಗಳ ಪುರಸ್ಕೃತರು.ಕ್ರಿ.ಶ. 1994ರಲ್ಲಿ ದೈವಾಧೀನರಾದರು.

**ಪದ್ಯ – 1** **ಅರಿವು**

**ಸುಕನ್ಯಾ ಮಾರುತಿ :** ಬಳ್ಳಾರಿ ಜಿಲ್ಲೆಯ ಕೊಟ್ಟೂರಲ್ಲಿ 1956ರಲ್ಲಿ ಜನಿಸಿದರು. **'**ನಾನೆಂಬ ಮಾಯೆ**'** ಬಿಂಬದೊಳಗಣ ಮಾತು, ಪಂಚಾಗ್ನಿ ಮಧ್ಯ, ನಾನು ನನ್ನವರು, ತಾಜಮಹಲಿನ ಹಾಡು**'** ಕವನ ಸಂಕಲನಗಳನ್ನು ಬರೆದಿದ್ದಾರೆ.

**ಪದ್ಯ –2** **ನನ್ನ ಹಾಗೆಯೆ**

**ಸು.ರಂ.ಎಕ್ಕುಂಡಿ :** ಕ್ರಿ.ಶ. 1923 ರಲ್ಲಿ ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನಲ್ಲಿ ಜನಿಸಿದರು. ಮತ್ಸ್ಯಗಂಧಿ, ಬೆಳ್ಳಕ್ಕಿಗಳು, ಹಾವಾಡಿಗರ ಹುಡುಗ, ಬಕುಳದ ಹೂವುಗಳು ಕೃತಿಗಳನ್ನು ರಚಿಸಿದ್ದಾರೆ.ಇವರಿಗೆಸಾಹಿತ್ಯ ಅಕಾಡಮಿ ಪ್ರಶಸ್ತಿ, ಸೋವಿಯತ್ ಲ್ಯಾಂಡ್ ಪ್ರಶಸ್ತಿ, ರಾಜ್ಯ ಶಿಕ್ಷಕ ಪ್ರಶಸ್ತಿಯನ್ನು ನೀಡಲಾಗಿದೆ.

**ಪದ್ಯ –3** **ಸವಿಚೈತ್ರ**

**ಬಸವರಾಜ ಸಾದರ :** ಕ್ರಿ.ಶ. 1955 ರಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ ಜನಿಸಿದರು.ಸಿಸಿಫಸರ ಸುತ್ತು(ಕವನ ಸಂಕಲನ) ತಪ್ಪಂಡ (ಕಥಾಸಂಕಲನ) ಅನುಮತಿ (ವಿಮರ್ಶಾಲೇಖನ) ಮೊದಲಾದ 12 ಪುಸ್ತಕಗಳನ್ನು ಬರೆದಿದ್ದಾರೆ.ಇವರು ಬೆಂಗಳೂರು ಆಕಾಶವಾಣಿ ಕೇಂದ್ರದ ವಿವಿಧ ಭಾರತೀಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಪದ್ಯ – 4** **ಸದ್ದು ಮಾಡದಿರು**

ಸಿ.ಪಿ. **ಕೃಷ್ಣಕುಮಾರ್ :**ಡಾ ॥ ಚಿಕ್ಕನಾಯಕನ ಹಳ್ಳಿ ಪುಟ್ಟೇಗೌಡ ಕೃಷ್ಣಕುಮಾರ್‌ರವರು ಕ್ರಿ.ಶ. 1939ರಲ್ಲಿ ಕೃಷ್ಣರಾಜನಗರ ತಾಲೂಕಿನ ಚಿಕ್ಕನಾಯಕನ ಹಳ್ಳಿಯಲ್ಲಿ ಜನಿಸಿದರು. 'ಅನಂತಪೃಥ್ವಿ, ಪ್ರಕೃತಿ, ಬೊಗಸೆ, ಕನ್ನಡ ನಾಗಾನಂದ ಸಿ.ಪಿ.ಕೆಯವರು ರಚಿಸಿರುವ ಕೆಲವು ಕೃತಿಗಳು.ಇವರು ಎಪ್ಪತ್ತೆಂಟನೇ ಕನ್ನಡ ಸಾಹಿತ್ಯ ಸಮ್ಮೇಳನದ ಆದ್ಯಕ್ಷರಾಗಿದ್ದರು ಮತ್ತು ಪಿ.ಎಚ್.ಡಿ. ಪದವಿ ಪಡೆದಿದ್ದಾರೆ.ಇವರಿಗೆ ನೃಪತುಂಗ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ಪದ್ಯ –5** **ಗುರಿ**

**ಎಂ.ಗೋಪಾಲಕೃಷ್ಣ ಅಡಿಗ :** 1918 ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿಯಲ್ಲಿ ಜನಿಸಿದರು. 'ಸಮಗ್ರಕಾವ್ಯ', ಅನಾಥೆ, ಭೂಮಿಗೀತ, ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡಮಿ ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್, ಪ್ರಶಸ್ತಿ ದೊರಕಿದೆ  ಧರ್ಮಸ್ಥಳದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಪದ್ಯ –7** **ವಚನಗಳು**

**ಬಸವಣ್ಣ :**ಹನ್ನೆರಡನೆಯ ಶತಮಾನದಲ್ಲಿ ಮಧ್ಯಭಾಗದಲ್ಲಿದ್ದರು ಇವರು ವಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದರು. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಬಿಜ್ಜಳನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿದ್ದರು.'ಕಾಯಕವೇ ಕೈಲಾಸ' ಎಂದು ನಂಬಿದ ಕ್ರಾಂತಿಕಾರಿ.ಸಾವಿರಾರು ವಚನಗಳ ಕರ್ತೃ.ಇವರ ವಚನಗಳ ಅಂಕಿತ ಅಂಕಿತ **'ಕೂಡಲ ಸಂಗಮದೇವ.'**

**ಅಕ್ಕಮಹಾದೇವಿ :** ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿದ್ದ ಶಿವಶರಣೆ ಕನ್ನಡ ಸಾಹಿತ್ಯದ ಮೊದಲನೆಯ ಕವಯಿತ್ರಿ. ಶಿವಮೊಗ್ಗ ಜಿಲ್ಲೆಯ 'ಉಡುತಡಿ'ಯಲ್ಲಿ ಜನಿಸಿದರು.**'ಚೆನ್ನಮಲ್ಲಿಕಾರ್ಜುನ'** ಎಂಬುದು ಇವರ ವಚನಗಳ ಅಂಕಿತ.ಈಕೆಯ ವಚನಗಳು ಭಕ್ತಿ, ವೈರಾಗ್ಯ ಜ್ಞಾನ ಸಂಪನ್ನವಾಗಿವೆ.

**ಸೊನ್ನಲಿಗೆಯ ಸಿದ್ಧರಾಮ :** ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿದ್ದರು.ಇವರ ಸ್ಥಳ ಸೊನ್ನಲಿಗೆ, ಬಸವಣ್ಣನವರ ಸಮಕಾಲೀನ, ತಂದೆ ಮುದ್ದಗೌಡ ತಾಯಿ ಸುಗ್ಗವ್ವೆ.ಕರ್ಮದಲ್ಲಿ ನಂಬುಗೆಯಿರಿಸಿದವರು.ಇವರ ವಚನಗಳು ಶಿವಭಕ್ತಿ ಪ್ರಧಾನವಾಗಿವೆ. ಇವರ ವಚನಗಳ ಅಂಕಿತ **'ಕಪಿಲ ಸಿದ್ದಮಲ್ಲಿಕಾರ್ಜುನ.'**

**ಪದ್ಯ – 8** **ಗದುಗಿನ ನಾರಣಪ್ಪ**

**ಗದುಗಿನ ನಾರಣಪ್ಪ** :ಇವರು ಗದುಗಿನ ಕೋಳಿವಾಡದಲ್ಲಿ ಜನಿಸಿದರು. ಇವರ ಕಾಲ ಸುಮಾರು 1430.ಇವರು ರಚಿಸಿದ ಜನಪ್ರಿಯ ಕೃತಿ 'ಕರ್ನಾಟ ಭಾರತ ಕಥಾಂಜರಿ'.ಇದಕ್ಕೆ 'ಗದುಗಿನ ಭಾರತ' ಎಂಬ ಹೆಸರೂ ಇದೆ.ಇವರ ಕಾವ್ಯನಾಮ **'ಕುಮಾರ ವ್ಯಾಸ'** ಎಂಬುದಾಗಿದೆ. 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಇವರು ಜನಪ್ರಿಯರಾಗಿದ್ದಾರೆ.

## ಪತ್ರಲೇಖನ

ನಿಮ್ಮ ಶಾಲೆಯಲ್ಲಿ ಆಚರಿಸಿದ 'ಪರಿಸರ ದಿನಾಚರಣೆ'ಯನ್ನು ಕುರಿತು ಮೈಸೂರು ಮಿತ್ರ ಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

ಇಂದ,

ಸೈಯದ ಕೌಸರ್
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ನಿಜಾಮಿಯ
ಮೈಸೂರು.

ಗೆ,
ಸಂಪಾದಕರು,
ಮೈಸೂರು ಮಿತ್ರ ದಿನಪತ್ರಿಕೆ
ಮೈಸೂರು.

ಮಾನ್ಯರೇ,

ವಿಷಯ : ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ವರದಿ ಮಾಡುವಂತೆ ಕೋರಿ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ಜೂನ್ 5ರಂದು 'ಪರಿಸರ ದಿನವನ್ನು' ಆಚರಿಸಲಾಯಿತು.ಈ ದಿನದ ಮಹತ್ವವನ್ನು ಕುರಿತು ಮತ್ತು ಪರಿಸರ ಸಂರಕ್ಷಣೆಯ ಆವಶ್ಯಕತೆ ಹಾಗೂ ಪರಿಸರ ಮಲಿನತೆಯಿಂದ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಸಯ್ಯೂದರ್‌ರವರು ತುಂಬಾ ಚೆನ್ನಾಗಿ ಮಾತನಾಡಿದರು.ವಿದ್ಯಾರ್ಥಿಗಳು ಸಹ ಪರಿಸರ ಸಂರಕ್ಷಣೆಯ ಬಗ್ಗೆ ಮಾತನಾಡಿದರು.ನಮ್ಮ ಶಾಲೆಯ ಮುಖ್ಯ ಶಿಕ್ಷಕಿಯವರು ಪರಿಸರದ ಬಗ್ಗೆ ತಿಳಿಸಿದರು.ನಂತರ ನಾವೆಲ್ಲರೂ ಸೇರಿ ಶಾಲೆಯ ಆವರಣದಲ್ಲಿ ಹಲವು ಬಗೆಯ ಗಿಡಗಳನ್ನು ನೆಟ್ಟಿದ್ದೇವೆ.ಅಲ್ಲದೆ ಆ ಎಲ್ಲಾ ಗಿಡಗಳನ್ನು ಸಂರಕ್ಷಿಸಿ ಬೆಳೆಸುವ ಪಣವನ್ನು ತೊಟ್ಟಿದ್ದೇವೆ.ಈ ವಿಚಾರವನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಡನೆ

ಸ್ಥಳ : ಮೈಸೂರು

ಇತಿ ತಮ್ಮ ವಿಧೇಯ ವಿದ್ಯಾರ್ಥಿನಿ

ದಿನಾಂಕ :

ಸೈಯದ ಕೌಸರ್

ಹಣ ಕಳುಹಿಸುವಂತೆ ಕೋರಿ ತಂದೆಗೆ ಪತ್ರ

ಕ್ಷೇಮ                                                    ಶ್ರೀ

ದಿನಾಂಕ :
ಕೀರ್ತಿಕುಮಾರ
ಹತ್ತನೆಯ ತರಗತಿ
ಸರ್ಕಾರಿ ಪ್ರೌಢಶಾಲೆ
ಶ್ರೀರಂಗಪಟ್ಟಣ

ತೀರ್ಥರೂಪರವರಿಗೆ ನಿಮ್ಮ ಮಗನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ.ಅಲ್ಲಿ ನಿಮ್ಮ ಮತ್ತು ಅಮ್ಮನ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಕೋರುತ್ತೇನೆ.

ಇಲ್ಲಿ ನಾನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ.ನಿಮ್ಮ ಅಪೇಕ್ಷೆಯಂತೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ.ಈಗ ವಾರ್ಷಿಕ ಪರೀಕ್ಷೆ ಹತ್ತಿರವಿರುವುದರಿಂದ ಪರೀಕ್ಷೆಗೆ ಹಣಕಟ್ಟಲು ಒಂದು ನೂರ ಐವತ್ತು ರೂಪಾಯಿಗಳನ್ನು ತಕ್ಷಣವೇ ಅಂಚೆ ಮೂಲಕ ಕಳುಹಿಸಲು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಉಳಿದ ವಿಷಯವನ್ನು ಊರಿಗೆ ಬಂದಾಗ ಮಾತನಾಡುತ್ತೇನೆ.

ನಮಸ್ಕಾರಗಳೊಂದಿಗೆ                                        ನಿಮ್ಮ ಪ್ರೀತಿಯ ಮಗ
ಕೀರ್ತಿಕುಮಾರ

ಇವರಿಗೆ,
ಸಿದ್ದಪ್ಪ
ಮನೆ ಸಂಖ್ಯೆ 54
2ನೆಯ ಅಡ್ಡರಸ್ತೆ
1ನೆಯ ಮುಖ್ಯರಸ್ತೆ
ಕುವೆಂಪುನಗರ, ಹಾಸನ
ಹಾಸನ ಜಿಲ್ಲೆ 573201

ನಿಮ್ಮ ಊರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ.

ಇವರಿಂದ,
ಸಂಗಮೇಶ
ಕೋಟೆ ಬೀದಿ
ಬಿಜಾಪುರ–582101
ದಿನಾಂಕ

ಇವರಿಗೆ,
ಜಿಲ್ಲಾಧಿಕಾರಿಗಳು,
ಬಿಜಾಪುರ – 582101
ಬಿಜಾಪುರ ಜಿಲ್ಲೆ

ಮಾನ್ಯರೇ,

ವಿಷಯ : ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಬೀದಿಯಲ್ಲಿ ಕೊಳಾಯಿಯ ವ್ಯವಸ್ಥೆ ಇಲ್ಲದೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ.ದಯಮಾಡಿ ಕೋಟೆ ಬೀದಿಗೆ ಬೋರ್‌ವೆಲ್ ಹಾಕಿಸಿ ನಳದ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸಿ ಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.

ವಂದನೆಗಳೊಂದಿಗೆ

ದಿನಾಂಕ :
ಸ್ಥಳ : ಬಿಜಾಪುರ

ತಮ್ಮ ವಿಶ್ವಾಸಿ,
ಸಂಗಮೇಶ

ನಿಮ್ಮ ಬಡಾವಣೆಯಲ್ಲಿ ಒಂದು ಗ್ರಂಥಾಲಯವನ್ನು ಸ್ಥಾಪಿಸುವಂತೆ ಕೋರಿ ಗ್ರಂಥಾಲಯ ನಿರ್ದೇಶಕರಿಗೆ ಒಂದು ಪತ್ರ ಬರೆಯಿರಿ.

ಇಂದ

ವಚನಶ್ರೀ
10ನೇ ತರಗತಿ
ಲಷ್ಕರ್ ಮೊಹಲ್ಲ
ಮೈಸೂರು.

ಗೆ,
ನಿರ್ದೇಶಕರು,
ಗ್ರಂಥಾಲಯ ಇಲಾಖೆ,
ಬೆಂಗಳೂರು

ಮಾನ್ಯರೇ,

ವಿಷಯ : ಗ್ರಂಥಾಲಯವನ್ನು ಸ್ಥಾಪಿಸುವಂತಗೆ ಕೋರಿ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಂತೆ ನಮ್ಮ ಬಡಾವಣೆಯಲ್ಲಿ ಸುಮಾರು ಒಂದು ಸಾವಿರ ಜನಸಂಖ್ಯೆ ಇದೆ.ಇದಕ್ಕೆ ಪೂರಕವಾಗಿ ಸಮಯದ ಸದುಪಯೋಗಕ್ಕಾಗಿ ಒಂದು ಗ್ರಂಥಾಲಯವಿರುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು ಯುವಕರು ಹಿರಿಯರು ಬಿಡುವಿನ ಸಮಯದಲ್ಲಿ ಅಲ್ಲಿ ಇಲ್ಲಿ ಕುಳಿತು ಹರಟೆ ಹೊಡೆಯುತ್ತಿದ್ದಾರೆ.ಇದನ್ನು ತಪ್ಪಿಸಲು ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ಬಡಾವಣೆಯಲ್ಲಿ ಗ್ರಂಥಾಲಯದ ಶಾಖೆಯನ್ನು ಪ್ರಾರಂಭಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಡನೆ

ಸ್ಥಳ : ಮೈಸೂರು
ದಿನಾಂಕ :

ತಮ್ಮ ವಿಧೇಯ ವಿದ್ಯಾರ್ಥಿನಿ
ವಚನಶ್ರೀ

ನಿಮ್ಮ ಮುಂದಿನ ವ್ಯಾಸಂಗಕ್ಕಾಗಿ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಕೋರಿ ತಹಶೀಲ್ದಾರ್‌ರವರಿಗೆ ಒಂದು ಅರ್ಜಿ ಬರೆಯಿರಿ.

ಇಂದ

ಫಾತಿಮಾ ಕೌಸರ್
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ನಿಜಾಮಿಯ
ಮೈಸೂರು

ಗೆ,
ತಹಶೀಲ್ದಾರ್‌ರವರು
ಮೈಸೂರು ತಾಲ್ಲೂಕು
ಮೈಸೂರು

ಮಾನ್ಯರೇ,

ವಿಷಯ : ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಕೋರಿ ಮನವಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾನು 10ನೇ ತರಗತಿ ತೇರ್ಗಡೆಯಾಗಿದ್ದೇನೆ.ಮುಂದಿನ ವ್ಯಾಸಂಗಕ್ಕಾಗಿ ಕಾಲೇಜಿಗೆ ಸೇರಲು ಜಾತಿ ಹಾಗೂ ಆದಾಯ ಪ್ರಮಾಣ ಪತ್ರದ ಅವಶ್ಯಕತೆ ಇದೆ.ನಾನು ಇಸ್ಲಂ ಧರ್ಮಕ್ಕೆ ಸೇರಿರುತ್ತೇನೆ.ನಮ್ಮ ಪೋಷಕರ ವಾರ್ಷಿಕ ಆದಾಯ 5000/– ರೂಗಳಾಗಿರುತ್ತದೆ.ನನ್ನ ಜಾತಿಗೆ ಸಂಬಂಧಿಸಿದಂತೆ ವರ್ಗಾವಣೆ ಪತ್ರದ ನಕಲನ್ನು ಲಗತ್ತಿಸಿರುತ್ತೇನೆ.ತಾವು ಇದನ್ನು ಪರಿಶೀಲಿಸಿ ನನಗೆ ಜಾತಿ ಹಾಗೂ ಆದಾಯ ಪತ್ರವನ್ನು ನೀಡಬೇಕೆಂಧು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಡನೆ

ಸ್ಥಳ : ಮೈಸೂರು
ದಿನಾಂಕ:

ಇತಿ ತಮ್ಮ ವಿಧೇಯ ವಿದ್ಯಾರ್ಥಿನಿ
ಫಾತಿಮಾ ಕೌಸರ್

## ಗಾದೆಗಳು

## 1. "ತಾ ಕಳ್ಳ ಪರರ ನಂಬ"

ನಮ್ಮ ಹಿರಿಯರ ಅನುಭವದ ಸಿರಿನುಡಿಗಳೇ ಗಾದೆಗಳು.ಗಾದೆಗಳು ವೇದಗಳಿಗೆ ಸಮನಾಗಿವೆ."ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ಮಾತು ಗಾದೆಗಳ ಮಹತ್ವವನ್ನು ತಿಳಿಸುತ್ತದೆ.ನಮ್ಮ ಜನಪದರು ತಮ್ಮ ಅನುಭವದ ಸಾರವನ್ನು ಕಿರಿದಾದ ಸಾಲಿನಲ್ಲಿ ಹಿರಿದಾದ ಅರ್ಥ ಬರುವಂತೆ ಹೇಳಿದ್ದಾರೆ.ಗಾದೆಗಳು ನಮ್ಮ ಬದುಕಿಗೆ ಮಾರ್ಗದರ್ಶಿಯಾಗಿವೆ.ಇವು ನಮ್ಮ ಬಾಳನ್ನು ಬೆಳಗುವ "ಬೆಳ್ಳಿಚುಕ್ಕೆ"ಗಳಾಗಿವೆ.

ಇದು ಒಂದು ಜನಪ್ರಿಯ ಗಾದೆಯಾಗಿದೆ.ತನ್ನಂತೆಯೇ ಇತರರು ಇರುತ್ತಾರೆ ಇಂದು ಭಾವಿಸುವುದು ಮನುಷ್ಯನ ಸಹಜವಾದ ಗುಣ. ಆದರೆ ಹಾಗೆ ಒಳ್ಳೆಯದಾಗಿ ಭಾವಿಸುವವರು ತುಂಬಾ ಕಡಿಮೆ.ತನ್ನದೇ ದುರ್ಗುಣಗಳನ್ನು ಪರರಲ್ಲೂ ಕಾಣುವ ಮನೋಭಾವ ಕೆಲವರದು. ಕಳ್ಳನಾದವನಿಗೆ ಇನ್ನೊಬ್ಬರಲ್ಲಿ ತನ್ನದೆ ವರ್ತನೆ ಕಾಣುತ್ತದೆ ಆತನೂ ಕಳ್ಳನೆಂದೇ ಭಾವಿಸುತ್ತಾನೆ.ಕಳ್ಳನಿಗೆ ಸಂಶಯ ಪ್ರವೃತ್ತಿ ಸಹಜವಾಗಿರುತ್ತದೆ.ಅಂತೆಯೇ ಒಬ್ಬ ಸಜ್ಜನನಿಗೆ ಇನ್ನೊಬ್ಬ ಕಳ್ಳನೇ ಆಗಿದ್ದರೂ ಸಜ್ಜನನೆಂದೇ ಭಾವಿಸುತ್ತಾನೆ.ಆದ್ದರಿಂದ ನಕಾರಾತ್ಮಕ ಮನೋಭಾವ ಬದಲಾಗಿ ಸಕಾರಾತ್ಮಕ ಧೋರಣೆ ಬರಲೆಂಬುದು ಈ ಗಾದೆಯ ಆಶಯವಾಗಿದೆ.

## 2. ಕೈ ಕೆಸರಾದರೆ ಬಾಯಿ ಮೊಸರು

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಈ ಗಾದೆಯು ಕಷ್ಟಪಡದೇ ಸುಖ ಸಿಗುವುದಿಲ್ಲ ಎಂಬುದನ್ನು ಧ್ವನಿಪೂರ್ಣವಾಗಿ ಹೇಳುತ್ತದೆ.ಕೈ ಕೆಸರಾಗುವುದು ದುಡಿಮೆಯನ್ನು ಸಂಕೇತಿಸಿದರೆ ಮೊಸರು ಎಂಬುದು ಅದರ ಪ್ರತಿಫಲವನ್ನು ಬಿಂಬಿಸುತ್ತದೆ.ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತು ಮೇಲಿನ ಗಾದೆಯನ್ನು ಪುಷ್ಟಿಕರೀಸುತ್ತದೆ.

## 3. ಬೆಳೆಯುವ ಸಿರಿ ಮೊಳಕೆಯಲ್ಲಿ

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಬೆಳೆಯುವ ಸಸಿಯನ್ನು ನೋಡಿದಾಗಲೇ ಅದು ಮುಂದೆ ಎಂತಹ ಬೆಳೆಯನ್ನು ಕೊಡುತ್ತದೆ ಎಂಬುದು ತಿಳಿಯುತ್ತದೆ. ಹಾಗೆಯೇ ಬಾಲ್ಯದಲ್ಲಿ ಮಕ್ಕಳ ನಡೆನುಡಿಗಳನ್ನು ಗಮನಿಸಿದರೆ ಮುಂದೆ ಅವರು ಏನಾಗುತ್ತಾರೆ ಎಂಬುದನ್ನು ಅರಿಯಬಹುದು. ಕ್ರಿಕೆಟ್ ಆಟಗಾರ ಸಚಿನ್ ಜೀವನವೇ ಇದಕ್ಕೊಂದು ಉತ್ತಮ ಉದಾಹರಣೆ.ಮೊಳಕೆ ಚೆನ್ನಾಗಿದ್ದರೆ ಬೆಳೆ ಚೆನ್ನಾಗಿರುತ್ತದೆ.ಅದೇ ರೀತಿ ಮಕ್ಕಳು ಬಾಲ್ಯದಲ್ಲಿ ಉತ್ತಮ ಗುಣಗಳನ್ನು ಬೆಳೆಸಿಕೊಂಡರೆ ಮುಂದೆ ಅವರು ಉತ್ತಮ ವ್ಯಕ್ತಿಗಳಾಗುತ್ತಾರೆ ಎಂಬುದೇ ಈ ಗಾದೆಯ ಅರ್ಥವಾಗಿದೆ.

## 4. ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಪ್ರಸ್ತುತ ಗಾದೆ 'ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು' ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ.ತಾಯಿ ನಮ್ಮನ್ನು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ಹೆತ್ತತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದಿಲ್ಲ. ಅದೇ ರೀತಿ ಜನ್ಮಭೂಮಿಯ ಸಂಬಂಧವು ಸಹ ಬಿಡಿಸಲಾಗದಂತಹುದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತೆ ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಾದುದು.ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

## 5. ಶಕ್ತಿಗಿಂತ ಯುಕ್ತಿ ಮೇಲು

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಪ್ರಸ್ತುತ ಗಾದೆ 'ಶಕ್ತಿಗಿಂತ ಯುಕ್ತಿ ಮೇಲು' ಎಂಬುದು ಒಂದು ಜನಪ್ರಿಯ ಗಾದೆ.ಶಕ್ತಿ ದೈಹಿಕವಾದದ್ದು.ಯುಕ್ತಿ ಬುದ್ಧಿಚಾತುರ್ಯವನ್ನು ಅವಲಂಬಿಸಿದೆ.ಶಕ್ತಿಯಿಂದ ಗೆಲ್ಲಲಾಗದ ಸಂದರ್ಭದಲ್ಲಿ ಯುಕ್ತಿಯನ್ನು ಪ್ರಯೋಗಿಸಬೇಕು.ತನ್ನ ಜೀವ ಉಳಿಸಿಕೊಳ್ಳಲು ಮೊಲವೊಂದು ಸಿಂಹದಿಂದ ತನ್ನನ್ನು ತಾನು ಯುಕ್ತಿಯಿಂದ ಕಾಪಾಡಿಕೊಂಡ ಪಂಚತಂತ್ರದ ಕಥೆ ಎಲ್ಲರಿಗೂ ತಿಳಿದಿದೆ. ಈ ಹಿನ್ನೆಲೆಯಲ್ಲಿ ದೈಹಿಕ ಶಕ್ತಿಗಿಂತ ಮನಸ್ಸಿನ ಯುಕ್ತಿಯೇ ಶ್ರೇಷ್ಠ ಎಂಬುದೇ ಈ ಗಾದೆಯ ಅರ್ಥವಾಗಿದೆ.

### ಪಠ್ಯದಲ್ಲಿ ಬರುವ ವ್ಯಾಕರಣಾಂಶಗಳ ಪಟ್ಟಿ

## ವ್ಯಾಕರಣಾಂಶಗಳು

## 1. ಕನ್ನಡ ವರ್ಣಮಾಲೆ

| ಕನ್ನಡ ವರ್ಣಮಾಲೆ – 49 | | | | | | | | |
|---|---|---|---|---|---|---|---|---|
| ಸ್ವರಗಳು – 13 | | | ವ್ಯಂಜನಗಳು – 34 | | | | ಯೋಗವಾಹಗಳು –2 | |
| ಹ್ರಸ್ವ ಸ್ವರಗಳು | ದೀರ್ಘ ಸ್ವರಗಳು | ಪ್ಲುತ ಸ್ವರಗಳು | ವರ್ಗೀಯ ವ್ಯಂಜನಗಳು 25 | | | ಅವರ್ಗೀಯ ವ್ಯಂಜನಗಳು | ಅನುಸ್ವಾರ | ವಿಸರ್ಗ |
| | | | ಅಲ್ಪ ಪ್ರಾಣಗಳು | ಮಹಾ ಪ್ರಾಣಗಳು | ಅನುನಾಸಿಕಗಳು | | | |
| 6 | 7 | | 10 | 10 | 5 | 9 | 1 | 1 |
| ಅ | ಆ | | ಕ್ ಗ್ | ಖ್ ಘ್ | ಙ್ | ಯ್ | ಂ | ಃ |
| ಇ | ಈ | | ಚ್ ಜ್ | ಛ್ ಝ್ | ಞ್ | ರ್ | | |
| ಉ | ಊ | | ಟ್ ಡ್ | ಠ್ ಢ್ | ಣ್ | ಲ್ | | |
| ಋ | ಏ | | ತ್ ದ್ | ಥ್ ಧ್ | ನ್ | ವ್ | | |
| ಎ | ಐ | | ಪ್ ಬ್ | ಫ್ ಭ್ | ಮ್ | ಶ್ | | |
| ಒ | ಓ | | | | | ಷ್ | | |
| | ಔ | | | | | ಸ್ | | |
| | | | | | | ಹ್ | | |
| | | | | | | ಳ್ | | |

## ಸಂಯುಕ್ತಾಕ್ಷರಗಳು

| ಸಜಾತಿ ಸಂಯುಕ್ತಾಕ್ಷರಗಳು | | ವಿಜಾತಿ ಸಂಯುಕ್ತಾಕ್ಷರಗಳು | |
|---|---|---|---|
| ತಮ್ಮ | ಎನ್ನ | ಸೂರ್ಯ | ಶ್ರಮಣಿ |
| ಹಣ್ಣು | ಮೆಚ್ಚು | ಲಕ್ಷ್ಮಣ | ಪುತ್ರ |
| | | ಪ್ರವೇಶ | ಹೊಗಳ್ವೆ |
| | | ಸದ್ಗುಣ | ಅಗ್ನಿ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ವ್ಯಂಜನಾಕ್ಷರಗಳಲ್ಲಿ ಅಲ್ಪಪ್ರಾಣಾಕ್ಷರಗಳ ಸಂಖ್ಯೆ :
   (ಎ) 6 (ಬಿ) 10
   (ಸಿ) 5 (ಡಿ) 9
2. ಙ್, ಞ್, ಣ್, ನ್, ಮ್– ಈ ಅಕ್ಷರಗಳು ವರ್ಣಮಾಲೆಯ ಈ ಗುಂಪಿಗೆ ಸೇರಿವೆ :
   (ಎ) ಅಲ್ಪಪ್ರಾಣಗಳು (ಬಿ) ಮಹಾಪ್ರಾಣಗಳು
   ಸಿ) ಅನುನಾಸಿಕಗಳು (ಡಿ) ಸ್ವರಗಳು

## ನಾಮಪದಗಳು

| ರೂಢನಾಮಗಳು | | | | |
|---|---|---|---|---|
| ನದಿ | ಪರ್ವತ | ಊರು | ದೇಶ | ಮನುಷ್ಯ |

*****

| ಅಂಕಿತನಾಮಗಳು | | | |
|---|---|---|---|
| ಸಹದೇವ | ಧರ್ಮರಾಯ | ರಾಹುಲ | ಕಮಲಾಕ್ಷ |

*****

| ಅನ್ವರ್ಥನಾಮಗಳು | | | |
|---|---|---|---|
| ವ್ಯಾಪಾರಿ | ವಿದ್ವಾಂಸ | ವಿಜ್ಞಾನಿ | ಪೂಜಾರಿ |

*****

| ಗುಣವಾಚಕಗಳು | | | |
|---|---|---|---|
| ಒಳ್ಳೆಯ | ಕೆಟ್ಟ | ದೊಡ್ಡದು | ಹಳತು |

*****

| ಸಂಖ್ಯಾವಾಚಕಗಳು | | | |
|---|---|---|---|
| ಹನ್ನೆರಡು | ಐವತ್ತು | ಎಂಬತ್ತು | ನೂರು |

*****

| ಭಾವನಾಮಗಳು | | | | |
|---|---|---|---|---|
| ಕೆಂಪು | ಹಿರಿಮೆ | ನೋಟ | ಮಾಟ | ಆಟ |

*****

| ಪರಿಮಾಣವಾಚಕಗಳು | | | | |
|---|---|---|---|---|
| ಅಷ್ಟು | ಎಷ್ಟು | ಹಲವು | ಇನಿತು | ಅನಿತು |

*****

| ದಿಗ್ವಾಚಕಗಳು | | | | |
|---|---|---|---|---|
| ಮೂಡಣ | ತೆಂಕಣ | ಪಡುವಣ | ಈಶಾನ್ಯ | ಆಗ್ನೇಯ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಈ ಕೆಳಗಿನ ಪದಗಳಲ್ಲಿ ರೂಢನಾಮ ಪದ ಗುರುತಿಸಿ ಬರೆಯಿರಿ :
   (ಎ) ವ್ಯಾಪಾರಿ (ಬಿ) ಧರ್ಮರಾಯ
   (ಸಿ) ನದಿ (ಡಿ) ಕೆಟ್ಟ
2. 'ಒಳ್ಳೆಯ' ಈ ಪದವು ನಾಮಪದದ ಈ ಗುಂಪಿಗೆ ಸೇರಿದೆ :
   (ಎ) ಸಂಖ್ಯೇಯವಾಚಕ (ಬಿ) ಗುಣವಾಚಕ
   (ಸಿ) ದಿಗ್ವಾಚಕ (ಡಿ) ಪರಿಮಾಣವಾಚಕ
3. ಅರ್ಥಕ್ಕೆ ಅನುಗುಣವಾದ ಹೆಸರನ್ನು ಹೀಗೆ ಕರೆಯುತ್ತಾರೆ :
   (ಎ) ರೂಢನಾಮ (ಬಿ) ಅಂಕಿತನಾಮ
   (ಸಿ) ಅನ್ವರ್ಥನಾಮ (ಡಿ) ಭಾವನಾಮ
4. ವಿಶ್ವೇಶ್ವರಯ್ಯನವರು 'ಶಿಕ್ಷಣವು ಸಂಜೀವಿನಿ' ಎಂದು ಅರಿತಿದ್ದರು.
   ಈ ವಾಕ್ಯದಲ್ಲಿರುವ ಅಂಕಿತನಾಮ :
   (ಎ) ಶಿಕ್ಷಣ (ಬಿ) ವಿಶ್ವೇಶ್ವರಯ್ಯ
   (ಸಿ) ಸಂಜೀವಿನಿ (ಡಿ) ಅರಿತಿದ್ದರು

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ನದಿ : ರೂಢನಾಮ :: ವಿದ್ವಾಂಸ : ___________
2. ಹನ್ನೆರಡು : ಸಂಖ್ಯಾವಾಚಕ :: ಹತ್ತನೆಯ : ______
3. ಹಿರಿಮೆ : ಭಾವನಾಮ :: ಎಷ್ಟು : _______
4. ವಿಜ್ಞಾನಿ : ಅನ್ವರ್ಥನಾಮ :: ಮೈಸೂರು : _________
5. ದಕ್ಷಿಣ : ದಿಗ್ವಾಚಕ :: ವ್ಯಾಪಾರಿ : ____________

| ಸರ್ವನಾಮಗಳು | | |
|---|---|---|
| ಉತ್ತಮ ಪುರುಷ | ನಾನು | ನಾವು |
| ಮಧ್ಯಮ ಪುರುಷ | ನೀನು | ನೀವು |
| ಪ್ರಥಮ ಪುರುಷ ಪುಲ್ಲಿಂಗ<br>ಸ್ತ್ರೀ ಲಿಂಗ<br>ನಪುಂಸಕ ಲಿಂಗ | ಅವನು/ಇವನು<br>ಅವಳು/ಇವಳು<br>ಅದು/ಇದು | ಅವರು/ಇವರು<br>ಅವರು/ಇವರು<br>ಅವು/ಇವು |

*****

| ಆತ್ಮಾರ್ಥಕ ಸರ್ವನಾಮಗಳು | | | |
|---|---|---|---|
| ತಾನು | ತಾವು | ತನ್ನ | ತಮ್ಮ |

*****

| ಪ್ರಶ್ನಾರ್ಥಕ ಸರ್ವನಾಮಗಳು | | | |
|---|---|---|---|
| ಯಾರು? | ಏನು? | ಯಾವುದು? | |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಅವನು ಶಾಲೆಗೆ ದಿನವೂ ಬರುತ್ತಾನೆ. ಈ ವಾಕ್ಯದಲ್ಲಿರುವ ಸರ್ವನಾಮ :
   (ಎ) ದಿನವೂ (ಬಿ) ಶಾಲೆಗೆ
   (ಸಿ) ಬರುತ್ತಾನೆ (ಡಿ) ಅವನು
2. **'ತಾನು'** ಎಂಬುದು ಈ ಸರ್ವನಾಮಪದವಾಗಿದೆ :
   (ಎ) ಪ್ರಶ್ನಾರ್ಥಕ (ಬಿ) ಆತ್ಮಾರ್ಥಕ
   (ಸಿ) ಪುರುಷಾರ್ಥಕ (ಡಿ) ದಿಗ್ವಾಚಕ
3. ಇವುಗಳಲ್ಲಿ ಮಧ್ಯಮ ಪುರುಷ ಸರ್ವನಾಮವನ್ನು ಗುರುತಿಸಿ ಬರೆಯಿರಿ.
   (ಎ) ನಾನು (ಬಿ) ನೀನು
   (ಸಿ) ತಾನು (ಡಿ) ಅವನು
4. **'ಅವರು'** ಪದವು ಈ ಸರ್ವನಾಮಕ್ಕೆ ಉದಾಹರಣೆಯಾಗಿದೆ :
   (ಎ) ಉತ್ತಮ ಪುರುಷ (ಬಿ) ಮಧ್ಯಮ ಪುರುಷ
   (ಸಿ) ಪ್ರಥಮ ಪುರುಷ (ಡಿ) ಆತ್ಮಾರ್ಥಕ ಸರ್ವನಾಮ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ನನ್ನ : ಉತ್ತಮಪುರುಷ :: ನಿನ್ನ : ____________
2. ತಾನು : ಆತ್ಮಾರ್ಥಕ :: ಅವನು : ______________
3. ಯಾರು : ಪ್ರಶ್ನಾರ್ಥಕ :: ತಾವು : ______________
4. ರಾಮ : ಅಂಕಿತನಾಮ :: ಅವಳು : ____________

**ವಿರುದ್ಧಾರ್ಥಕ ಪದಗಳು**

ಸಹನೆ X ಅಸಹನೆ ದೂರ X ಹತ್ತಿರ ಅತಿವೃಷ್ಟಿ X ಅನಾವೃಷ್ಟಿ ಕತ್ತಲು X ಬೆಳಕು

ಕೃತಜ್ಞ X ಕೃತಘ್ನ ಬಡತನ X ಸಿರಿತನ ಅಪರಾಧಿ X ನಿರಪರಾಧಿ ಪ್ರಾಮಾಣಿಕ X ಅಪ್ರಮಾಣಿಕ

ಮಾನ X ಅವಮಾನ ಕೆಳಗೆ X ಮೇಲೆ ಕರುಣೆ X ನಿಷ್ಕರುಣೆ ತುದಿ X ಬುಡ

ಮುದುಡು X ಅರಳು ಸ್ವೀಕರಿಸು X ತಿರಸ್ಕರಿಸು ಬೈಗು X ಬೆಳಗು ಜ್ಞಾನ X ಅಜ್ಞಾನ

ಭಯ X ನಿರ್ಭಯ ಕೀರ್ತಿ X ಅಪಕೀರ್ತಿ ಹತ್ತು X ಇಳಿ ಒಣಗಿದ X ಹಸಿಯಾದ

ಬೀಗು X ಬಾಗು ಪರಹಿತ X ಸ್ವಹಿತ ನಿರಾಶ್ರಯ X ಆಶ್ರಯ ಪರ X ವಿರೋಧ

ಹಗಲು X ಇರುಳು ಸೋಲು X ಗೆಲುವು ಹುಟ್ಟು X ಸಾವು ಆಸೆ X ನಿರಾಸೆ

ಉಂಟು X ಇಲ್ಲ ಫಲ X ನಿಷ್ಫಲ ಸುಗುಣ X ದುರ್ಗುಣ ಪುಣ್ಯ X ಪಾಪ

## ತತ್ಸಮ – ತದ್ಭವಗಳ ಪಟ್ಟಿ

| | | | |
|---|---|---|---|
| ದೃಷ್ಟಿ – ದಿಟ್ಟಿ | ಸ್ಥಾನ – ತಾಣ | ಸಂಸ್ಕೃತ – ಸಕ್ಕದ | ಯೋಗಿ – ಜೋಗಿ |
| ಮೌನ – ಮವುನ | ವಿಧಿ – ಬಿದಿ | ವರ್ಣನೆ – ಬಣ್ಣನೆ | ಉದ್ದಿಮೆ – ಉದ್ಯಮ |
| ವನ – ಬನ | ಆಶ್ರಯ – ಆಸರೆ | ವಿಸ್ತಾರ – ಬಿತ್ತರ | ಆಕಾಶ – ಆಗಸ |
| ಸೂಜಿ – ಸೂಚಿ | ಬೇಸಗೆ – ವೈಶಾಖ | ಮೃಗ – ಮಿಗ | ಆಶ್ಚರ್ಯ – ಅಚ್ಚರಿ |
| ಸಕ್ಕರೆ – ಶರ್ಕರ | ಅಜ್ಜ – ಆರ್ಯ | ಋಣ – ರಿಣ | ಧ್ವನಿ – ದನಿ |
| ವಶ – ಬಸ | ವ್ಯಸನ – ಬೆಸನ | ಸ್ಥಿರ – ತಿರೆ | ಘಟಿಕಾ– ಗಳಿಗೆ |
| ಸಂತೋಷ – ಸಂತಸ | ಶ್ರೀ – ಸಿರಿ | ಪೃಥ್ವಿ – ಪೊಡವಿ | ಗೊಟ್ಟಿ – ಗೋಷ್ಠಿ |
| ಬಿನ್ನಣ – ವಿಜ್ಞಾನ | ಸಂತೆ – ಸಂಸ್ಥೆ | ಬಿಜ್ಜೆ – ವಿದ್ಯೆ | ಮೊಗ – ಮುಖ |
| ಮಲ್ಲಿಗೆ – ಮಲ್ಲಿಕಾ | ಸಂಪಿಗೆ – ಚಂಪಕ | ಹಕ್ಕಿ – ಪಕ್ಷಿ | ಸಂಜೆ – ಸಂಧ್ಯಾ |
| ಜನುಮ – ಜನ್ಮ | ಭಕ್ತಿ – ಭಕುತಿ | ಮಜ್ಜನ – ಮಾರ್ಜನ | ಮೂರುತಿ – ಮೂರ್ತಿ |
| ಮುಗುದ – ಮುಗ್ಧ | ಬೊಮ್ಮ – ಬ್ರಹ್ಮ | ಬೆತ್ತ – ವೇತ್ರ | |

## ಸಂಧಿಗಳು

ದೇಹದೊಳಾತ್ಮ – ದೇಹದೊಳು + ಆತ್ಮ = ಲೋಪಸಂಧಿ
ಜೀವನಕೇಕೆ – ಜೀವನಕೆ + ಏಕೆ = ಲೋಪಸಂಧಿ
ಶರಣೆಂಬೆ – ಶರಣು + ಎಂಬೆ = ಲೋಪಸಂಧಿ
ಬಿರುದಿರದೆ – ಬಿರುದು + ಇರದೆ = ಲೋಪಸಂಧಿ
ದೀಪದೆದುರಿಗೆ – ದೀಪದ + ಎದುರಿಗೆ = ಲೋಪಸಂಧಿ
ಸಿಡಿದಬ್ಬರಿಸುವುದು – ಸಿಡಿದು + ಅಬ್ಬರಿಸುವುದು= ಲೋಪಸಂಧಿ
ಅಂತಿರದೆ – ಅಂತು + ಇರದೆ = ಲೋಪಸಂಧಿ
ಮುತ್ತಿಟ್ಟು – ಮುತ್ತು + ಇಟ್ಟು = ಲೋಪಸಂಧಿ
ತಾರಕಕೇರಿ– ತಾರಕಕೆ + ಏರಿ = ಲೋಪಸಂಧಿ
ಜಗಕೆಲ್ಲ – ಜಗಕೆ + ಎಲ್ಲ = ಲೋಪಸಂಧಿ
ತುಂಬಿತೆಂತು – ತುಂಬಿತು + ಎಂತು = ಲೋಪಸಂಧಿ
ನೆಲದಮ್ಮ – ನೆಲದ + ಅಮ್ಮ = ಲೋಪಸಂಧಿ
ಕೇಳಿತೊಂದು – ಕೇಳಿತು + ಒಂದು = ಲೋಪಸಂಧಿ
ಸೂರ್ಯನೊಮ್ಮೆ – ಸೂರ್ಯನು + ಒಮ್ಮೆ = ಲೋಪಸಂಧಿ
ಸಾವಿನಾಚೆ – ಸಾವಿನ + ಆಚೆ = ಲೋಪಸಂಧಿ
ಯಾವುದುಂಟು – ಯಾವುದು + ಉಂಟು = ಲೋಪಸಂಧಿ
ಕೊಳಲೂದಿ – ಕೊಳಲು + ಊದಿ = ಲೋಪಸಂಧಿ
ಗೋಳಿಡು = ಗೋಳು + ಇಡು = ಲೋಪಸಂಧಿ
ಶಿಷ್ಯನೇನಾದರೂ – ಶಿಷ್ಯನು + ಏನಾದರೂ = ಲೋಪಸಂಧಿ
ಸಿದ್ಧನಾಗಿದ್ದ – ಸಿದ್ಧನಾಗಿ + ಇದ್ದ = ಲೋಪಸಂಧಿ
ಕಳಕಳಿಸು – ಕಳಕಳಿ + ಇಸು = ಲೋಪಸಂಧಿ
ಅದನ್ನೊಂದು – ಅದನ್ನು + ಒಂದು = ಲೋಪಸಂಧಿ
ಗಾಬರಿಯಿಂದ – ಗಾಬರಿ + ಇಂದ = ಆಗಮಸಂಧಿ
ಇಚ್ಛೆಯಾಗಿತ್ತು – ಇಚ್ಛೆ + ಆಗಿತ್ತು = ಆಗಮಸಂಧಿ
ಬೇಟೆಯಾಡು – ಬೇಟೆ + ಆಡು = ಆಗಮಸಂಧಿ
ಹಾದಿಯಲ್ಲಿ – ಹಾದಿ + ಅಲ್ಲಿ = ಆಗಮಸಂಧಿ
ಆಶ್ಚರ್ಯವಾಯಿತು – ಆಶ್ಚರ್ಯ + ಆಯಿತು = ಆಗಮಸಂಧಿ
ಅಳಿಯಾಸೆ = ಅಳಿ + ಆಸೆ = ಆಗಮಸಂಧಿ

ನೆಲೆಯಿರದೆ – ನೆಲೆ + ಇರದೆ = ಆಗಮಸಂಧಿ

ಧೈರ್ಯವಾಗಿ – ಧೈರ್ಯ + ಆಗಿ = ಆಗಮಸಂಧಿ

ಹೆದರಿಕೆಯಾದರೆ – ಹೆದರಿಕೆ + ಆದರೆ = ಆಗಮಸಂಧಿ

ಭಯವಾಗದೆ – ಭಯ + ಆಗದೆ = ಆಗಮಸಂಧಿ

ಮೈಯೆಲ್ಲಾ – ಮೈ + ಎಲ್ಲಾ = ಆಗಮಸಂದಿ

ಮೌನಿಯಾಗು – ಮೌನಿ + ಆಗು = ಆಗಮಸಂಧಿ

ಬಾಂದಳ – ಬಾನ್ + ತಳ = ಆದೇಶಸಂಧಿ

ಬಲಗೈ – ಬಲ + ಕೈ = ಆದೇಶಸಂಧಿ

ಮನದಟ್ಟು – ಮನ + ತಟ್ಟು = ಆದೇಶಸಂಧಿ

ಹೊರಗೆಡಹು – ಹೊರ + ಕೆಡವು = ಆದೇಶಸಂಧಿ

ಕಂಬನಿ – ಕಣ್ + ಪನಿ = ಆದೇಶಸಂದಿ

ಹೊಸಗನ್ನಡ – ಹೊಸ + ಕನ್ನಡ = ಆದೇಶಸಂಧಿ

ಮಹಾನುಭಾವ – ಮಹಾ + ಅನುಭಾವ = ಸವರ್ಣದೀರ್ಘಸಂಧಿ

ಗುರೂಪದೇಶ – ಗುರು + ಉಪದೇಶ = ಸವರ್ಣದೀರ್ಘಸಂಧಿ

ಲಕ್ಷಾಂತರ – ಲಕ್ಷ + ಅಂತರ = ಸವರ್ಣದೀರ್ಘಸಂಧಿ

ಸಂಗ್ರಹಾಲಯ – ಸಂಗ್ರಹ + ಆಲಯ = ಸವರ್ಣದೀರ್ಘಸಂಧಿ

ಸಹ್ಯಾದ್ರಿ – ಸಹ್ಯ + ಆದ್ರಿ = ಸವರ್ಣದೀರ್ಘಸಂಧಿ

ಪರಹಿತಾಕಾಂಕ್ಷೆ – ಪರಹಿತ + ಆಕಾಂಕ್ಷೆ = ಸವರ್ಣದೀರ್ಘಸಂದಿ

ಪ್ರಯೋಗಾಲಯ – ಪ್ರಯಾಗ + ಆಲಯ = ಸವರ್ಣದೀರ್ಘಸಂಧಿ

ಲಕ್ಷ್ಮೀಶ – ಲಕ್ಷ್ಮೀ + ಈಶ = ಸವರ್ಣದೀರ್ಘಸಂಧಿ

ಗಿರೀಶ –ಗಿರಿ + ಈಶ = ಸವರ್ಣದೀರ್ಘಸಂಧಿ

ವೀರೇಶ್ವರ – ವೀರ + ಈಶ್ವರ = ಗುಣಸಂಧಿ

ಮಹೋತ್ಸವ – ಮಹಾ + ಉತ್ಸವ = ಗುಣಸಂಧಿ

ಗೊಮ್ಮಟೇಶ – ಗೊಮ್ಮಟ + ಈಶ = ಗುಣಸಂಧಿ

ಜೀವೋಲ್ಲಾಸ – ಜೀವ + ಉಲ್ಲಾಸ = ಗುಣಸಂಧಿ

ರಾಜರ್ಷಿ – ರಾಜ + ಋಷಿ = ಗುಣಸಂಧಿ

ಭಾವೈಕ್ಯ – ಭಾವ + ಐಕ್ಯ = ವೃದ್ಧಿಸಂಧಿ

ಏಕೈಕ – ಏಕ + ಏಕ = ವೃದ್ಧಿಸಂಧಿ

ದಿವ್ಯೌಷಧಿ – ದಿವ್ಯ + ಔಷಧಿ = ವೃದ್ಧಿಸಂಧಿ

ಅತ್ಯುಕ್ತಿ – ಅತಿ + ಉಕ್ತಿ = ಯಣ್‌ಸಂದಿ

ಮನ್ವಂತರ – ಮನು + ಅಂತರ = ಯಣ್‌ಸಂಧಿ

ಪಿತ್ರಾರ್ಜಿತ – ಪಿತ್ರ + ಆರ್ಜಿತ = ಯಣ್‌ಸಂಧಿ

ಅತ್ಯುತ್ತಮ – ಅತಿ + ಉತ್ತಮ = ಯಣ್‌ಸಂಧಿ

ಕೋಟ್ಯಂತರ – ಕೋಟಿ + ಅಂತರ = ಯಣ್‌ಸಂಧಿ

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. **'ಮಹಾನುಭಾವ'** ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   (ಎ) ಸವರ್ಣದೀರ್ಘ ಸಂಧಿ (ಬಿ) ಗುಣಸಂಧಿ
   (ಸಿ) ವೃದ್ಧಿ ಸಂಧಿ (ಡಿ) ಯಣ್ ಸಂಧಿ
2. **'ಹಾದಿಯಲ್ಲಿ'** ಪದವನ್ನು ಬಿಡಿಸಿ ಬರೆದಾಗ ಆಗುವ ರೂಪ.
   (ಎ) ಹಾದಿ + ಅಲ್ಲಿ (ಬಿ) ಹಾದಿಯ + ಅಲ್ಲಿ
   (ಸಿ) ಹಾದು + ಅಲ್ಲಿ (ಡಿ) ಹಾದಿ + ಯಲ್ಲಿ
3. ಈ ಕೆಳಗಿನ ಪದಗಳಲ್ಲಿ ಗುಣ ಸಂಧಿಯಾಗಿರುವ ಪದ;
   (ಎ) ಲಕ್ಷಾಂತರ (ಬಿ) ವೀರೇಶ್ವರ
   (ಸಿ) ಬಲಗೈ (ಡಿ) ಅದನ್ನೊಂದು

## ಗ್ರಾಂಥಿಕ ರೂಪಗಳು

| | | | | | |
|---|---|---|---|---|---|
| ಭೆಟ್ಟಿ ಆಗ್ರಿ | = ಭೇಟಿ ಆಗಿರಿ | ತಪ್ಪಾತರೀ | = ತಪ್ಪಾಯಿತು | ಮನಶ್ಯ | = ಮನುಷ್ಯಾ |
| ಸಾಲಿಕಲಿಸಿ | = ಶಾಲೆಗೆ ಕಳಿಸಿ/ಶಾಲೆಯಲ್ಲಿ ಕಲಿಸಿ | ಮನ್ಯಾಗಿದ್ದು | = ಮನೆಯಲ್ಲಿದ್ದು | ಯಾತಕ್ಕ | = ಏತಕ್ಕೆ |
| ಹೋಗ್ಯಾವೋ | = ಹೋಗಿವೆಯೋ | ಅತ್ತಾರೆ | = ಅತ್ತರೆ | ಹಾಂಗ | = ಹಾಗೆ |
| ಕಂಡ್ಹಸಿವು | = ಕಂಡ ಹಸಿವು | ಮಕ್ಕಳ್ಗೆ | = ಮಕ್ಕಳಿಗೆ | ಮನೀಗೆ | = ಮನೆಗೆ |
| ಚಿಗತಾವು | = ಚಿಗುರುತ್ತವೆ. | ಬಾಗಿಲಾಗಾಡು | = ಬಾಗಿಲ ಬಳಿ ಆಡುವ | | |
| ನೀವ್ಯಾರು | = ನೀವು ಯಾರು | ಮೈಮ್ಯಾಲಿನ | = ಮೈಮೇಲಿನ | ಹೊಡೆದ್ರೆ | = ಹೊಡೆದರೆ |
| ಮಾಡದಿದ್ರ | = ಮಾಡದಿದ್ದರೆ | ಗುಡಿಸ್ತಾನೆ | = ಗುಡಿಸುತ್ತಾನೆ | ಇರತಿದ್ದೆ | = ಇರುತ್ತಿದೆ |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. **'ಮನಶ್ಯಾ'** ಪದದ ಗ್ರಾಂಥಿಕ ರೂಪ:
   (ಎ) ಮನುಷ್ಯ (ಬಿ) ಮಾನವ (ಸಿ) ಮಾನುಷ (ಡಿ) ಮನಸ
2. **'ಚಿಗಿತಾವು'** ಪದದ ಗ್ರಾಂಥಿಕ ರೂಪ:
   (ಎ) ಚಿಗುರೀತು (ಬಿ) ಚಿಗುರುತ್ತದೆ (ಸಿ) ಚಿಗಿಯುತ್ತದೆ (ಡಿ) ಚಿಗುರು
3. **'ಮಕ್ಕಳ್ಗೆ'** ಪದದ ಗ್ರಾಂಥಿಕ ರೂಪ:
   (ಎ) ಮಕ್ಕಳಿಗೆ (ಬಿ) ಮಗಳಿಗೆ (ಸಿ) ಮಗುವಿಗೆ (ಡಿ) ಮಕ್ಕಳು

## ಅನುಕರಣಾವ್ಯಯಗಳು

| | | | |
|---|---|---|---|
| ಒಯ್ಯನೊಯ್ಯನೆ | ಧಗಧಗ | ಪಟಪಟನೆ | ಕಲಕಲ |
| ಸರಸರ | ಢಣಢಣ | ಝುಳುಝುಳು | ದಬದಬನೆ |
| ನಿಗಿನಿಗಿ | ಗಡಗಡ | ಫಳಫಳ | ದರದರನೆ |
| ಬರಬರನೆ | ಥರಥರನೆ | ಕರಕರ | ಝಣಝಣ |
| ಗರಗರ | ಬಡಬಡನೆ | | |

## ದ್ವಿರುಕ್ತಿಗಳು

| | | | |
|---|---|---|---|
| ಹೌದುಹೌದು | ಮನೆಮನೆ | ನಿಲ್ಲುನಿಲ್ಲು | ಬೇಡಬೇಡ |
| ಓಡುಓಡು | ಕಟ್ಟಕಡೆಗೆ | ಮೊತ್ತಮೊದಲು | ಕೆಳಕೆಳಗೆ |
| ಹೊಚ್ಚಹೊಸದು | ಕಣಕಣ | ಕೂಗಿದಾಕೂಗಿದಾ | ಅಳುಅಳುತ್ತಾ |
| ನಗು ನಗುತ್ತಾ | ನಡೆದು ನಡೆದು | ತಿನ್ನು ತಿನ್ನು | ಬೇಗಬೇಗ |
| ತುತ್ತ ತುದಿ | ಮೊದಮೊದಲು | ಹಣ್ಣುಹಂಪಲು | |

## ಜೋಡಿಪದಗಳು / ಜೋಡುನುಡಿಗಳು

| | | | |
|---|---|---|---|
| ಉಡಿಗೆ ತೊಡಿಗೆ | ಅವಳಿ ಜವಳಿ | ನೆರೆಹೊರೆ | ಕಾಳುಕಡ್ಡಿ |
| ಮಕ್ಕಳುಮರಿ | ರೀತಿನೀತಿ | ಆಚಾರ ವಿಚಾರ | ಕಟ್ಟು ಕಟ್ಟಳೆ |
| ಗಿಡಗಂಟೆ | ನಡೆನುಡಿ | ನೋವುನಲಿವು | ಆದಿಅಂತ್ಯ |
| ಕನಸು ನನಸು | ಪಂಡಿತ ಪಾಮರ | ಸಿಹಿ ಕಹಿ | ಅಡ್ಡಾ ದಿಡ್ಡಿ |
| ಕೂಲಿನಾಲಿ | ಹುಳುಹುಪ್ಪಟೆ | ಸಿಡುಕು ಮಿಡುಕು | ತಳಕು ಬಳಕು |

## ಪಡೆನುಡಿ/ನುಡಿಗಟ್ಟುಗಳು

| | | | |
|---|---|---|---|
| ಕತ್ತಿಮಸೆ | ಕೈಕೊಡು | ರಾಮಬಾಣ | ಹೊಂಚುಹಾಕು |
| ಒರೆ ಹಚ್ಚು | ಬಯಲಿಗೆ ತರು | ಹೊಗಳಿ ಅಟ್ಟಕ್ಕೇರಿಸು | ಆಕಾಶ ಪಾತಾಳ ಒಂದು ಮಾಡು |
| ಬೆನ್ನು ತಟ್ಟು | ಮೈಯೆಲ್ಲ ಕಿವಿಯಾಗಿ | ಒಲುಮೆಗೆ ಸೆರೆಯಾಗು | ಕರುಣೆಯ ಮಳೆಯನ್ನು ಕರೆ |
| ಹಿಂದೆ ಬೀಳು | ನೀರೆರೆದು ಪೋಷಿಸು | ಕಕ್ಕಾಬಿಕ್ಕಿಯಾಗು | ಕರತಲಾಮಲಕ |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. 'ಕಟ್ಟಕಡೆಗೆ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ;
   (ಎ) ಜೋಡುನುಡಿ (ಬಿ) ದ್ವಿರುಕ್ತಿ
   (ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು
2. ಈ ಪದಗಳಲ್ಲಿ ದ್ವಿರುಕ್ತಿ ಪದವನ್ನು ಗುರುತಿಸಿ ಬರೆಯಿರಿ.
   (ಎ) ಹೊಚ್ಚಹೊಸದು (ಬಿ) ಗಿಡಗಂಟೆ
   (ಸಿ) ಕನಸುನನಸು (ಡಿ) ಸಿಹಿಕಹಿ
3. 'ಬನ್ನಿಬನ್ನಿ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.
   (ಎ) ನುಡಿಗಟ್ಟು (ಬಿ) ಜೋಡುನುಡಿ
   (ಸಿ) ದ್ವಿರುಕ್ತಿ (ಡಿ) ಅನುಕರಣಾವ್ಯಯ
4. 'ಹೊಂಚುಹಾಕು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.
   (ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ
   (ಸಿ) ಜೋಡುನುಡಿ (ಡಿ) ನುಡಿಗಟ್ಟು
5. ಈ ಪದವು ನುಡಿಗಟ್ಟಿಗೆ ಉದಾಹರಣೆಯಾಗಿದೆ.
   (ಎ) ಕೈಕೊಡು (ಬಿ) ಮೊತ್ತಮೊದಲು
   (ಸಿ) ರೀತಿನೀತಿ (ಡಿ) ಆಚಾರವಿಚಾರ
6. 'ಉಡಿಗೆತೊಡಿಗೆ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.
   (ಎ) ಜೋಡುನುಡಿ (ಬಿ) ಅನುಕರಣಾವ್ಯಯ
   (ಸಿ) ದ್ವಿರುಕ್ತಿ (ಡಿ) ನುಡಿಗಟ್ಟು
7. ಈ ಪದಗಳಲ್ಲಿ ಜೋಡುನುಡಿಯನ್ನು ಗುರುತಿಸಿ ಬರೆಯಿರಿ.
   (ಎ) ಕೂಲಿನಾಲಿ (ಬಿ) ಸರಸರ
   (ಸಿ) ಚಿಲಿಪಿಲಿ (ಡಿ) ಕಿಲಕಿಲ
8. 'ಪಟಪಟನೆ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.
   (ಎ) ಅನುಕರಣಾವ್ಯಯ (ಬಿ) ದ್ವಿರುಕ್ತಿ
   (ಸಿ) ಜೋಡುನುಡಿ (ಡಿ) ನುಡಿಗಟ್ಟು
9. ಇವುಗಳಲ್ಲಿ ಅನುಕರಣಾವ್ಯಯವನ್ನು ಗುರುತಿಸಿ ಬರೆಯಿರಿ.
   (ಎ) ಧಗಧಗ (ಬಿ) ಮೆಲ್ಲಗೆ
   (ಸಿ) ಹೌದು (ಡಿ) ನೆಟ್ಟಗೆ

**ವಿಭಕ್ತಿ ಪ್ರತ್ಯಯಗಳು**

| ವಿಭಕ್ತಿ | ಪ್ರತ್ಯಯ | ಕಾರಕಾರ್ಥ | ನಾಮಪದ |
|---|---|---|---|
| 1. ಪ್ರಥಮಾ | ಉ | ಕರ್ತೃ | ಮನೆಯು |
| 2. ದ್ವಿತೀಯಾ | ಅನ್ನು | ಕರ್ಮ | ಮನೆಯನ್ನು |
| 3. ತೃತೀಯಾ | ಇಂದ | ಕರಣ (ಸಾಧನ) | ಮನೆಯಿಂದ |
| 4. ಚತುರ್ಥೀ | ಕೆ,ಗೆ,ಇಕೆ | ಸಂಪ್ರದಾನ (ಕೊಡುವಿಕೆ) | ಮನೆಗೆ |
| 5. ಪಂಚಮೀ | ದೆಸೆಯಿಂದ | ಅಪಾದಾನ (ಅಗಲುವಿಕೆ) | ಮನೆಯ ದೆಸೆಯಿಂದ |
| 6. ಷಷ್ಠೀ | ಅ | ಸಂಬಂಧ | ಮನೆಯ |
| 7. ಸಪ್ತಮೀ | ಅಲ್ಲಿ | ಅಧಿಕರಣ (ಆಧಾರ) | ಮನೆಯಲ್ಲಿ |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. 'ಕೋಟೆಯಲ್ಲಿ' ಪದದಲ್ಲಿ ಇರುವ ವಿಭಕ್ತಿಯ ಹೆಸರು.
   (ಎ) ಪ್ರಥಮ (ಬಿ) ದ್ವಿತೀಯ
   (ಸಿ) ಪಂಚಮಿ (ಡಿ) ಸಪ್ತಮಿ
2. ಚತುರ್ಥಿ ವಿಭಕ್ತಿಯ ಕಾರಕಾರ್ಥ.
   (ಎ) ಕರ್ತೃಕಾರಕ (ಬಿ) ಕರ್ಮಕಾರಕ
   (ಸಿ) ಕರಣಕಾರಕ (ಡಿ) ಸಂಪ್ರಧಾನಕಾರಕ

3. ಇವುಗಳಲ್ಲಿ ಷಷ್ಠಿ ವಿಭಕ್ತಿ ಸೇರಿದ ಪದ.

(ಎ) ಮನೆಯನ್ನು (ಬಿ) ಬಂಗಲೆಯ

(ಸಿ) ಶಾಲೆಯಿಂದ (ಡಿ) ಮನೆಗೆ

## ಸಮಾಸಗಳು

ಪ್ರಯೋಗಾಲಯ = ಪ್ರಯೋಗದ + ಆಲಯ ತತ್ಪುರುಷ ಸಮಾಸ
ಯಂತ್ರೋಪಕರಣ = ಯಂತ್ರಗಳ + ಉಪಕರಣ ತತ್ಪುರುಷ ಸಮಾಸ
ಪ್ರಶಸ್ತಿ ಪತ್ರ = ಪ್ರಶಸ್ತಿಯ + ಪತ್ರ ತತ್ಪುರುಷ ಸಮಾಸ
ಹಿಮಮಣಿ = ಹಿಮದ + ಮಣಿ ತತ್ಪುರುಷ ಸಮಾಸ
ಭಾವವಿಲಾಸ = ಭಾವದ + ವಿಲಾಸ ತತ್ಪುರುಷ ಸಮಾಸ
ಅನ್ವೇಷಣಕಾರ್ಯ = ಅನ್ವೇಷಣೆಯ + ಕಾರ್ಯ – ತತ್ಪುರುಷ ಸಮಾಸ
ಅರಮನೆ = ಅರಸನ + ಮನೆ ತತ್ಪುರುಷ ಸಮಾಸ
ಇಂದ್ರಪದವಿ = ಇಂದ್ರನ + ಪದವಿ ತತ್ಪುರುಷ ಸಮಾಸ
ಭೂಸರರು = ಭೂಮಿಯ + ಸುರರು ತತ್ಪುರುಷ ಸಮಾಸ

ಬಲಗಡಲು = ಬಲವಾದ + ಕಡಲು ಕರ್ಮಧಾರಯ ಸಮಾಸ
ಸವಿಚೈತ್ರ = ಸವಿಯಾದ + ಚೈತ್ರ ಕರ್ಮಧಾರಯ ಸಮಾಸ
ಮುಗುಳುನಗೆ = ಮುಗುಳಿನಂತ+ ನಗೆ ಕರ್ಮಧಾರಯ ಸಮಾಸ
ಕಠಿಣ ಪರೀಕ್ಷೆ = ಕಠಿಣವಾದ + ಪರೀಕ್ಷೆ ಕರ್ಮಧಾರಯ ಸಮಾಸ
ತಂಗಾಳಿ = ತಣ್ಣನೆಯ + ಗಾಳಿ ಕರ್ಮಧಾರಯಸಮಾಸ
ದೃಢನಿಶ್ಚಯ = ದೃಢವಾದ + ನಿಶ್ಚಯ – ಕರ್ಮಧಾರಯ ಸಮಾಸ
ಹೆಗ್ಗುರಿ = ಹಿರಿದಾದ + ಗುರಿ ಕರ್ಮಧಾರಯ ಸಮಾಸ
ನಿಟ್ಟೋಟ = ನಿಡಿದು + ಓಟ ಕರ್ಮಧಾರಯ ಸಮಾಸ
ಇಬ್ಬನಿ = ಇನಿದು + ಪನಿ ಕರ್ಮಧಾರಯ ಸಮಾಸ
ಹೆಗ್ಗುರುತು = ಹಿರಿದು + ಗುರುತು ಕರ್ಮಧಾರಯ ಸಮಾಸ

ಕೊರಡಕೊನರಿಸಿ = ಕೊರಡನ್ನು + ಕೊನರಿಸಿ ಕ್ರಿಯಾಸಮಾಸ
ಗಂಜಿಯುಂಡು = ಗಂಜಿಯನ್ನು + ಉಂಡು ಕ್ರಿಯಾಸಮಾಸ
ಹಲುಗಿರಿ = ಹಲ್ಲನ್ನು + ಕಿರಿ ಕ್ರಿಯಾಸಮಾಸ
ನೆಲಮಗಿಲು = ನೆಲವೂ + ಮುಗಿಲು ದ್ವಂದ್ವ ಸಮಾಸ
ಮುಂಜೆರಗು = ಸೆರಗಿನ + ಮುಂದು ಅಂಶಿ ಸಮಾಸ

ಲಕ್ಷ್ಮೀಶ = ಲಕ್ಷ್ಮಿಯ ಒಡೆಯ ಯಾವನೋ ಅವನು (ವಿಷ್ಣು) – ಬಹುವ್ರೀಹಿ ಸಮಾಸ
ವನಜಮುಖಿ = ವನಜದಂತಹ ಮುಖವುಳ್ಳವಳು – ಬಹುವ್ರೀಹಿ ಸಮಾಸ

## ಅನ್ಯದೇಶೀಯ ಪದಗಳು

| | | | | | |
|---|---|---|---|---|---|
| ಪೆನ್ | ಇಂಗ್ಲಿಷ್ | ಕಾಗಜ್ | ಹಿಂದಿ | ಸ್ವಷ್ಟ | ಸಂಸ್ಕೃತ |
| ಬುಲ್‌ಡೋಜರ್ | ಇಂಗ್ಲಿಷ್ | ರೇಶನ್ | ಇಂಗ್ಲಿಷ್ | ಬಸ್ಸು | ಇಂಗ್ಲಿಷ್ |
| ಖಜಾನೆ | ಹಿಂದಿ | ವಾಪಸ್ಸು | ಹಿಂದಿ | ಇನಾಂದಾರ | ಪರ್ಷಿಯನ್ |
| ಬಟಾಟೆ | ಪೋರ್ಚ್‌ಗೀಸ್ | ದಾಖಲೆ | ಹಿಂದಿ | ಅಮುಲ್ದಾರ | ಪರ್ಷಿಯನ್ |
| ಪೋಲೀಸು | ಇಂಗ್ಲಿಷ್ | ಡಾಕ್ಟ್ರು | ಇಂಗ್ಲಿಷ್ | ಮೇಷ್ಟ್ರು | ಇಂಗ್ಲಿಷ್ |
| ಚೆಕ್ | ಇಂಗ್ಲಿಷ್ | ಕ್ಯೂ | ಇಂಗ್ಲಿಷ್ | ರೈನ್‌ಸೆಂಟರ್ | ಇಂಗ್ಲಿಷ್ |
| ಪೇಪರ್ | ಇಂಗ್ಲಿಷ್ | ಕಾರ್ | ಇಂಗ್ಲಿಷ್ | | |

**ನಾಮಪದ**

1. ವಸ್ತುವಾಚಕ :– ರೂಢ ಉದಾ : ಪರ್ವತ
ಅಂಕಿತ ಉದಾ : ಹಿಮಾಲಯ
ಅನ್ವರ್ಥ ಉದಾ: ಕುರುಡ, ವ್ಯಾಪಾರಿ
2. ಗುಣವಾಚಕ : – ಗುಣ, ಬಣ್ಣ, ಸ್ವಭಾವವನ್ನು ತಿಳಿಸಿಕೊಡುತ್ತದೆ
ಒಳ್ಳೆಯ, ಬಿಳಿಯ, ತಳ್ಳನೆ, ಮೆಲ್ಲನೆ, ತಣ್ಣಗೆ, ಇತ್ಯಾದಿ
3. ಭಾವನಾಮ: –ಹಿರಿಮೆ, ಮಾಟ,
4. ಪರಿಮಾಣವಾಚಕ : – ಎಷ್ಟು, ಇಷ್ಟು, ಅಷ್ಟು
5. ದಿಗ್ವಾಚಕ : – ಮೂಡು, ಪಡು, ತೆಂಕು, ಮೇಲೆ, ಕೆಳಗೆ, ಒಳಗೆ, ಹೊರಗೆ ಇತ್ಯಾದಿ
6. ಸರ್ವನಾಮ : – ಅವನು/ಳು, ನೀನು, ನೀವು, ನಾನು, ಅವರು ಇವರು, ತಾವು ಅದು, ಇದು ಇತ್ಯಾದಿ.

## ಲೇಖನ ಚಿಹ್ನೆಗಳು

**ಪೂರ್ಣವಿರಾಮ : –** ( . ) ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ 'ಪೂರ್ಣವಿರಾಮ ಚಿಹ್ನೆ'ಯನ್ನು ಬಳಸಬೇಕು.

**ಅರ್ಧವಿರಾಮ ಚಿಹ್ನೆ :–** ( ; )ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ 'ಅರ್ಧವಿರಾಮ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪವಿರಾಮ ಚಿಹ್ನೆ :–** ( , )ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ 'ಅಲ್ಪವಿರಾಮ ಚಿಹ್ನೆ'ಯನ್ನು ಬಳಸಬೇಕು.

**ಉದಾಹರಣೆ :** ಬಟ್ಟೆ ಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ ಚಿಹ್ನೆ :–** ( ? ) ಪ್ರಶ್ನಾರೂಪದ ಪದ ಮತ್ತು ವಾಕ್ಯಗಳ ಮುಂದೆ 'ಪ್ರಶ್ನಾರ್ಥಕ ಚಿಹ್ನೆ'ಯನ್ನು ಬಳಸಲಾಗುವುದು.

**ಭಾವಸೂಚಕ ಚಿಹ್ನೆ :–** ( ! ) ಹರ್ಷ, ಅಶ್ಚರ್ಯ, ಸಂತೋಷ, ವಿಷಾದ, ದುಃಖ, ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ 'ಭಾವಸೂಚಕ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ಅಯ್ಯೋ ! ಹೀಗಾಗಬಾರದಿತ್ತು !

**ಉದ್ಧರಣ ಚಿಹ್ನೆ :–** ( " " ) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ.ಬರೆಯುವಾಗ 'ಉದ್ಧರಣ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** "ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮ ಸಿದ್ಧ ಹಕ್ಕಾಗಬೇಕು" ಎಂದು ಸರ್. ಎಂ.ವಿಶ್ವೇಶ್ವರಯ್ಯ ಅವರು ಹೇಳಿದರು.

**ವಾಕ್ಯವೇಷ್ಟನ ಚಿಹ್ನೆ :–** ( ' ' ) ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ 'ವಾಕ್ಯವೇಷ್ಟನ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ಕನ್ನಡದಲ್ಲಿ 'ಇಂಗ್ಲೀಷ್', 'ಪರ್ಷಿಯನ್', 'ಪೋರ್ಚುಗೀಸ್ ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ :–** ( ) ಒಂದು ಪದವನ್ನೋ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ 'ಆವರಣ ಚಿಹ್ನೆ'ಯನ್ನು ಬಳಸಲಾಗುತ್ತದೆ.

**ಉದಾಹರಣೆ :**ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್), ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ :–** ( :– ) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ 'ವಿವರಣಾತ್ಮಕ'ಚಿಹ್ನೆಯನ್ನು ಬಳಸಲಾಗುತ್ತದೆ.

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ :
(ಎ) ವಿವರಣಾತ್ಮಕ ಚಿಹ್ನೆ (ಬಿ) ಉದ್ಧರಣ ಚಿಹ್ನೆ
(ಸಿ)ವಾಕ್ಯವೇಷ್ಟನ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ

2. ಬುಕ್ಕರಾಯನ ಹಿರಿಮೆ ಏನು – ಈ ವಾಕ್ಯದಲ್ಲಿ ಇರಬೇಕಾದ ಲೇಖನಚಿಹ್ನೆ :
(ಎ) ಪೂರ್ವ ವಿರಾಮ (ಬಿ) ಅಲ್ಪವಿರಾಮ
(ಸಿ) ಪ್ರಶ್ನಾರ್ಥಕ (ಡಿ) ಭಾವಸೂಚಕ

## 3. ವಾಕ್ಯ ಪ್ರಕಾರಗಳು

ವಾಕ್ಯದಲ್ಲಿ **ಮೂರು** ವಿಧಗಳಿವೆ.

1. ಸಾಮಾನ್ಯ ವಾಕ್ಯ2. ಸಂಯೋಜಿತ ವಾಕ್ಯ (ಸಂಯುಕ್ತ ವಾಕ್ಯ)3. ಮಿಶ್ರ ವಾಕ್ಯ.

**ಸಾಮಾನ್ಯ ವಾಕ್ಯ :–** ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು **'ಸಾಮಾನ್ಯ ವಾಕ್ಯ'** ಎಂದು ಕರೆಯುತ್ತಾರೆ.

**ಉದಾ:–**

1. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
2. ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
3. ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

**ಸಾಮಾನ್ಯ ವಾಕ್ಯದಲ್ಲಿ ಒಂದು ಕ್ರಿಯಾಪದ ಮಾತ್ರವಿದ್ದು, ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು.**

**ಉದಾ :–** ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.

**ಸಂಯೋಜಿತ ವಾಕ್ಯ :–** ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು **'ಸಂಯೋಜಿತ ವಾಕ್ಯ'** ಎನಿಸುವುದು.

**ಉದಾ:–**ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯಿತು ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು.

**ಮಿಶ್ರವಾಕ್ಯ :–** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು **'ಮಿಶ್ರವಾಕ್ಯ'** ಎನ್ನುತ್ತೇವೆ.

**ಉದಾ:–**ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಎರಡು ಅಥವಾ ಅನೇಕ ಸ್ವತಂತ್ರ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣಾರ್ಥವನ್ನು ಕೊಡುವ ವಾಕ್ಯವು :

(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ

(ಸಿ) ಮಿಶ್ರವಾಕ್ಯ (ಡಿ) ವಿಶೇಷವಾಕ್ಯ

2. **'**ಪ್ರವಾಸವು ಅನುಭವವನ್ನು ಹೆಚ್ಚಿಸುತ್ತದೆ**'** ಈ ವಾಕ್ಯವು :

(ಎ) ಸಾಮಾನ್ಯವಾಕ್ಯ (ಬಿ) ಮಿಶ್ರವಾಕ್ಯ

(ಸಿ)ಸಂಯೋಜಿತವಾಕ್ಯ (ಡಿ) ವಿಶೇಷವಾಕ್ಯ

## ಅಲಂಕಾರ

**ಉಪಮಾಲಂಕಾರ:** ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ಉಪಮಾಲಂಕಾರ.

1. ನನಮಗಳು ಕನ್ನಡಿಯಂತೆ ಹೊಳೆಯುವಳು
2. ಮಸಗುವಂಬುಜದಂತೆ
3. ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು
4. ದೀಪದೆದುರಿಗೆ ತಿಮಿರ ಸರಿಯುವಂತೆ
5. ರವಿಕರಕೆ ಕರಗುವ ಇಬ್ಬನಿಯವೊಲು
6. ಸಾವಿರಾರು ಮಳೆಬಿಲ್ಲುಗಳು ಸೇರಿಕುಣಿದಂತೆ

**ರೂಪಕಾಲಂಕಾರ :** ಉಪಮಾನ ಉಪಮೇಯಗಳಿಗೆ ಭೇದವಿಲ್ಲದಂತೆ ಹೇಳುವುದೇ ರೂಪಕಾಲಂಕಾರ

1. ಸೇನಾಸಾಗರ,
2. ಮುಖಚಂದ್ರ
3. ಕಾಯಕವೇ ಕೈಲಾಸ

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. 'ಕರ್ಪೂರ ಮೌನದಲಿ ಕರಗುವವೊಲು' ಈ ವಾಕ್ಯದಲ್ಲಿರುವ ಅಲಂಕಾರ:
   (ಎ) ಉಪಮಾ (ಬಿ) ರೂಪಕ (ಸಿ) ದೀಪಕ (ಡಿ) ಉತ್ಪ್ರೇಕ್ಷೆ
2. 'ಸೇನಾಸಾಗರ' ಈ ಪದದಲ್ಲಿರುವ ಅಲಂಕಾರ:
   (ಎ) ಉಪಮಾ (ಬಿ) ರೂಪಕ (ಸಿ) ದೀಪಕ (ಡಿ) ಉತ್ಪ್ರೇಕ್ಷೆ
3. 'ಮುಖಚಂದ್ರ' ಈ ಪದದಲ್ಲಿರುವ ಅಲಂಕಾರ:
   (ಎ) ಉಪಮಾ (ಬಿ) ರೂಪಕ (ಸಿ) ದೀಪಕ (ಡಿ) ಉತ್ಪ್ರೇಕ್ಷೆ

## ಛಂದಸ್ಸು

**ಎರಡು ಸಾಲಿನ ಪದ್ಯ = ದ್ವಿಪದಿ**
**ಮೂರು ಸಾಲಿನ ಪದ್ಯ = ತ್ರಿಪದಿ**
**ನಾಲ್ಕು ಸಾಲಿನ ಪದ್ಯ = ಚೌಪದಿ**
**ಆರು ಸಾಲಿನ ಪದ್ಯ = ಷಟ್ಪದಿ**

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಎರಡು ಸಾಲಿನ ಪದ್ಯಗಳು
   (ಎ) ದ್ವಿಪದಿ (ಬಿ) ತ್ರಿಪದಿ (ಸಿ) ಚೌಪದಿ (ಡಿ) ಷಟ್ಪದಿ
2. ಮೂರು ಸಾಲಿನ ಪದ್ಯಗಳು
   (ಎ) ದ್ವಿಪದಿ (ಬಿ) ತ್ರಿಪದಿ (ಸಿ) ಚೌಪದಿ (ಡಿ) ಷಟ್ಪದಿ
3. ನಾಲ್ಕು ಸಾಲಿನ ಪದ್ಯಗಳು
   (ಎ) ದ್ವಿಪದಿ (ಬಿ) ತ್ರಿಪದಿ (ಸಿ) ಚೌಪದಿ (ಡಿ) ಷಟ್ಪದಿ
4. ಆರು ಸಾಲಿನ ಪದ್ಯಗಳು
   (ಎ) ದ್ವಿಪದಿ (ಬಿ) ತ್ರಿಪದಿ (ಸಿ) ಚೌಪದಿ (ಡಿ) ಷಟ್ಪದಿ

## ಪತ್ರಗಳು

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ತಂದೆಗೆ ಪತ್ರ ಬರೆಯುವಾಗ ಬಳಸುವ ಸಂಬೋಧನೆ –
   (ಎ) ತೀರ್ಥರೂಪು (ಬಿ) ಮಾತೃಶ್ರೀ (ಸಿ) ಚಿರಂಜೀವಿ (ಡಿ) ಮಾನ್ಯರೇ
2. ತಾಯಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನೆ –
   (ಎ) ತೀರ್ಥರೂಪು (ಬಿ) ಮಾತೃಶ್ರೀ (ಸಿ) ಚಿರಂಜೀವಿ (ಡಿ) ಮಾನ್ಯರೇ
3. ಅಧಿಕಾರಿಗಳಿಗೆ ಪತ್ರ ಬರೆಯುವಾಗ ಬಳಸುವ ಸಂಬೋಧನೆ –
   (ಎ) ಮಾನ್ಯರೇ (ಬಿ) ಪ್ರೀತಿಯ (ಸಿ) ಚಿರಂಜೀವಿ (ಡಿ) ಪೂಜ್ಯರೇ

## ಲೇಖಕರ / ಕವಿಗಳಪರಿಚಯ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | **ಒಣಮರದ ಗಿಳಿ** | ಅ. ರಾ. ಮಿತ್ರ | ಕ್ರಿ. ಶ. 1935 | ಅಕ್ಕಿಹೆಬ್ಬಾಳು<br>ಮಂಡ್ಯ ಜಿಲ್ಲೆ | ಕನ್ನಡ ಮೇಘದೂತ<br>ಮಹಾಭಾರತದ ಪಾತ್ರ<br>ಸಂಗತಿಗಳು | |
| 2 | **ಪಶ್ಚಿಮ ಘಟ್ಟಗಳ ಪತನ** | ನಾಗೇಶ ಹೆಗಡೆ | ಕ್ರಿ. ಶ. 1948 | ಬಕ್ಕಮನೆ,<br>ಉತ್ತರ ಕನ್ನಡ ಜಿಲ್ಲೆ | ಇರುವುದೊಂದೇ ಭೂಮಿ,<br>ಭರತ ಖಂಡ | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 3 | **ಎಲ್ಲಿ ಹೋಗ್ಯಾವೊ ಆ ಕಾಲ** | ಡಾ॥ ಗುರುರಾಜ ಕರಜಗಿ | ಕ್ರಿ. ಶ. 1952 | ಧಾರವಾಡ | ಕರುಣಾಳು ಬಾ ಬೆಳಕೆ<br>ಸಂಶೋಧನಾ ಲೇಖನ | ಡಾಕ್ಟರೇಟ್ ಪದವಿ |
| 4 | **ಶಿಷ್ಯ ವತ್ಸಲ ರಾಮನ್** | ಬಿ. ಪಿ. ರಾಧಾಕೃಷ್ಣ | ಕ್ರಿ. ಶ. 1918 | ಬೆಂಗಳೂರು | ಸಿ. ವಿ. ರಾಮನ್ | ಪದ್ಮಶ್ರೀ, ರಾಜ್ಯೋತ್ಸವ ಪ್ರಶಸ್ತಿ,<br>ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 5 | **ನನ್ನ ಗೋಪಾಲ** | ಕುವೆಂಪು | ಕ್ರಿ. ಶ. 1904 | ಕುಪ್ಪಳ್ಳಿ<br>ತೀರ್ಥಹಳ್ಳಿ ತಾಲ್ಲೂಕು<br>ಶಿವಮೊಗ್ಗ ಜಿಲ್ಲೆ | ಶ್ರೀ ರಾಮಾಯಣ ದರ್ಶನಂ | ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ,<br>ಕರ್ನಾಟಕ ರತ್ನ ಪ್ರಶಸ್ತಿ |
| 6 | **ಅರಿವು** | ಸುಕನ್ಯಾ ಮಾರುತಿ | ಕ್ರಿ. ಶ. 1956 | ಕೊಟ್ಟೂರು,<br>ಬಳ್ಳಾರಿ ಜಿಲ್ಲೆ | ನಾನೆಂಬ ಮಾಯೆ,<br>ಬಿಂಬದೊಳಗಣ ಮಾತು | |
| 7 | **ನನ್ನ ಹಾಗೆಯೆ** | ಸು. ರಂ. ಎಕ್ಕುಂಡಿ | ಕ್ರಿ. ಶ. 1923 | ರಾಣಿಬೆನ್ನೂರು,<br>ಹಾವೇರಿ ಜಿಲ್ಲೆ | ಮತ್ಸ್ಯಗಂಧಿ<br>ಬಕುಳದ ಹೂಗಳು | ಸಾಹಿತ್ಯ ಅಕಾಡೆಮಿ ಪ್ರಶಸ್ತಿ,<br>ಸೋವಿಯತ್ ಲ್ಯಾಂಡ್ ಪ್ರಶಸ್ತಿ<br>ರಾಜ್ಯ ಶಿಕ್ಷಕ ಪ್ರಶಸ್ತಿ |
| 8 | **ಸವಿಚೈತ್ರ** | ಬಸವರಾಜ ಸಾದರ | ಕ್ರಿ. ಶ. 1955 | ಕುಂದಗೋಳ,<br>ಧಾರವಾಡ ಜಿಲ್ಲೆ | ಸಿಸಿಫಸರ ಸುತ್ತು, ತಪ್ಪಂಡ,<br>ಅನುಮತಿ | ಡಾಕ್ಟರೇಟ್ ಪದವಿ |
| 9 | **ಸದ್ದು ಮಾಡದಿರು** | ಸಿ. ಪಿ. ಕೃಷ್ಣಕುಮಾರ್ | ಕ್ರಿ. ಶ. 1939 | ಚಿಕ್ಕನಾಯಕನ ಹಳ್ಳಿ,<br>ಕೃಷ್ಣರಾಜ ನಗರ ತಾಲ್ಲೂಕು<br>ಮೈಸೂರು ಜಿಲ್ಲೆ | ಅನಂತ ಪೃಥ್ವಿ<br>ಪ್ರಕೃತಿ, ಬೊಗಸೆ. | ನೃಪತುಂಗ ಪ್ರಶಸ್ತಿ |
| 10 | **ಗುರಿ** | ಎಂ. ಗೋಪಾಲ ಕೃಷ್ಣ ಅಡಿಗ | ಕ್ರಿ. ಶ. 1918 | ಮೊಗೇರಿ<br>ಕುಂದಾಪುರ ತಾಲ್ಲೂಕು<br>ಉಡುಪಿ ಜಿಲ್ಲೆ | ಸಮಗ್ರ ಕಾವ್ಯ<br>ಅನಾಥೆ<br>ಭಾವತರಂಗ, ಭೂಮಿಗೀತ. | ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ<br>ಕೇರಳದ ಕುಮಾರ ಆಶಾನ್ ಪ್ರಶಸ್ತಿ |

| | | | | | | |
|---|---|---|---|---|---|---|
| 11 | **ವಚನಗಳು** | ಬಸವಣ್ಣ | ಹನ್ನೆರಡನೆಯ ಶತಮಾನದ ಮಧ್ಯಭಾಗ | ಬಾಗೇವಾಡಿ ವಿಜಯಪುರ ಜಿಲ್ಲೆ | ವಚನಗಳು | ಅಂಕಿತ : ಕೂಡಲಸಂಗಮ ದೇವ |
| | | ಅಕ್ಕಮಹಾದೇವಿ | ಹನ್ನೆರಡನೆಯ ಶತಮಾನದ ಮಧ್ಯಭಾಗ | ಉಡುತಡಿ, ಶಿಕಾರಿಪುರ ತಾಲ್ಲೂಕು ಶಿವಮೊಗ್ಗ ಜಿಲ್ಲೆ | ವಚನಗಳು | ಅಂಕಿತ : ಚೆನ್ನಮಲ್ಲಿಕಾರ್ಜುನ |
| | | ಸೊನ್ನಲಿಗೆ ಸಿದ್ಧರಾಮ | ಹನ್ನೆರಡನೆಯ ಶತಮಾನದ ಮಧ್ಯಭಾಗ | ಸೊನ್ನಲಿಗೆ | ವಚನಗಳು | ಅಂಕಿತ : ಕಪಿಲಸಿದ್ಧ ಮಲ್ಲಿಕಾರ್ಜುನ |
| 12 | **ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ** | ಗದುಗಿನ ನಾರಣಪ್ಪ (ಕುಮಾರವ್ಯಾಸ) | ಕ್ರಿ. ಶ. ಸುಮಾರು 1430 | ಕೋಳಿವಾಡ ಗದಗ ಜಿಲ್ಲೆ | ಕರ್ಣಾಟ ಭಾರತ ಕಥಾಮಂಜರಿ (ಗದುಗಿನ ಭಾರತ) | ರೂಪಕ ಸಾಮ್ರಾಜ್ಯ ಚಕ್ರವರ್ತಿ |

ಕರ್ನಾಟಕ ಸರ್ಕಾರ
ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು – 560 001
ಮತ್ತು
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳನಿರ್ದೇಶನಾಲಯ,
ನೃಪತುಂಗ ರಸ್ತೆ, ಬೆಂಗಳೂರು.
*ಸಹಯೋಗ*
ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,
ಮಲ್ಲೇಶ್ವರಂ, ಬೆಂಗಳೂರು.

# ಪ್ರೇರಣೆ

## ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ ಪ್ರಶ್ನೋತ್ತರ ಮಾಲಿಕೆ

# ದ್ವಿತೀಯ ಭಾಷೆ ಕನ್ನಡ

**ಆಯೋಜಕರು**

ಶ್ರೀ ಮೊಹಮ್ಮದ್ ಮೊಹಸಿನ್,
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ,ಬೆಂಗಳೂರು – 560 001.

**ಪರಿಕಲ್ಪನೆ**

ಶ್ರೀಮತಿ ಜ್ಞೋಹರಾ ಜಬೀನ್ ಎಂ.
ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,
ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.

## ಸಂಯೋಜಕರು

**ಶ್ರೀಮತಿ ಮಂಜುಳ ಆರ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,

**ಶ್ರೀ ಮರಿಗೌಡ ಬಿ.ಎನ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ನಾಗರತ್ನ ಎಚ್.**
ಉಪನ್ಯಾಸಕರು
ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ,
ಮಂಗಳೂರು.

## ಸಂಪನ್ಮೂಲ ಶಿಕ್ಷಕರು

**ಶ್ರೀ ಸಿದ್ದರಾಜಪ್ಪ ಎಸ್. ಎಂ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ನಿಜಾಮಿಯಾ
ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ,
ಮೈಸೂರು.

**ಶ್ರೀಮತಿ ಅನಿತ ಕುಮಾರಿ ಎಲ್.**
ಕನ್ನಡ ಭಾಷಾ ಶಿಕ್ಷಕರು
ಫಾರೂಖಿಯಾ ಬಾಲಕರ ಪ್ರೌಢಶಾಲೆ.
ತಿಲಕ್ ನಗರ, ಮೈಸೂರು.

# ಆಶಯ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014–15 ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಮುನ್ನುಡಿ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ.ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ.ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಜ಼ೋಹರಾ ಜಬೀನ್ ಎಂ.**
**ನಿರ್ದೇಶಕರು,**
**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಅದಕ್ಕಾಗಿ ನೀಡಿರುವ **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಎಂಬ ಹೊತ್ತಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.

- ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು
  ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.

- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಪ್ರೇರಣೆ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುಂತೆ ಮಾಡುವುದು.

- ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು **'ಪ್ರೇರಣೆ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರಗತಿ'** ಹಾಗೂ ಕೊನೆಯಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು **'ಪ್ರೇರಣೆ'** ಹಾಗೂ **'ಪ್ರಗತಿ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.

- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.

- ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.

- **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.

## ಒಂದು ವಾಕ್ಯಗಳಲ್ಲಿ ಉತ್ತರಿಸಿರಿ.

**ಗದ್ಯಪಾಠ – 1**

**ಒಣಮರದ ಗಿಳಿ** **ಅ.ರಾ. ಮಿತ್ರ**

1. **ಪ್ರಾಣಿಗಳನ್ನು ಸುಲಭವಾಗಿ ಕೊಲ್ಲಲು ಬೇಡನ ಉಪಾಯವೇನಾಗಿತ್ತು?**
   ಪ್ರಾಣಿಗಳನ್ನು ಸುಲಭವಾಗಿ ಕೊಲ್ಲಲು ಬೇಡನು ವಿಷ ಸವರಿದ ಬಾಣಗಳನ್ನು ಬಿಡುತ್ತಿದ್ದನು.
2. **ಬಾಣಕ್ಕೆ ಗುರಿಯಾಗುವಷ್ಟು ದೂರ ಎಂದರೇನು?**
   ಬಾಣಕ್ಕೆ ಗುರಿಯಾಗುವಷ್ಟು ದೂರ ಎಂದರೆ ಬಾಣವನ್ನು ಬಿಡಲು ಅನುಕೂಲವಾಗುವಷ್ಟು ಎಂದರ್ಥ.
3. **ಜಿಂಕೆಯು ಬೇಡನ ಬಾಣನ ಹೊಡೆತದಿಂದ ತಪ್ಪಿಸಿಕೊಂಡದ್ದು ಹೇಗೆ?**
   ಜಿಂಕೆಯುಹಾರಿ ಬೇಡನ ಬಾಣದ ಹೊಡೆತದಿಂದ ಹಾರಿ ತಪ್ಪಿಸಿಕೊಂಡಿತು.
4. **ವಿಷದ ಬಾಣವು ಮರವನ್ನು ಏನು ಮಾಡಿತು?**
   ವಿಷದ ಬಾಣವು ಮರವನ್ನು ಒಣಗುವಂತೆ ಮಾಡಿತು.
5. **ಗಿಳಿಯ ತತ್ವನಿಷ್ಠೆ ಯಾವುದಾಗಿತ್ತು?**
   ಗಿಳಿಯ ತತ್ವನಿಷ್ಠೆ ಉಪಕಾರಸ್ಮರಣೆ ಮಾಡಬೇಕೆಂಬುದಾಗಿತ್ತು.
6. **ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ?**
   ಮರ ಒಣಗಿ ನಿಂತರೂ ಗಿಳಿ ಆ ಮರದ ಪೊಟರೆಯನ್ನು ಬಿಟ್ಟು ಹೋಗದಿದ್ದುದ್ದನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು.
7. **ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?**
   ಗಿಳಿಯ ತತ್ವನಿಷ್ಠೆಯನ್ನು ಇಂದ್ರನು ಮೆಚ್ಚಿಕೊಂಡನು.
8. **ತನಗಾದ ಸಂತೋಷವನ್ನು ಇಂದ್ರನು ಯಾವ ರೀತಿಯಲ್ಲಿ ಪ್ರಕಟಿಸಿದನು?**
   ಇಂದ್ರನು ಗಿಳಿರಾಯನಿಗೆ ಏನಾದರೂ ವರವನ್ನು ಕೊಡಬೇಕೆಂದು ತೀರ್ಮಾನಿಸಿದ.
9. **ಗಿಳಿಯು ಕೇಳಿದ ವರ ಯಾವುದು?**
   ಗಿಳಿಯು ಮರವು ಮೊದಲಿನಂತೆ ಹಸಿರಿನಿಂದ ಕಳಕಳಿಸಬೇಕೆಂಬ ವರವನ್ನು ಕೇಳಿತು.

**ಗದ್ಯಪಾಠ – 2**

**ರಾಹುಲ್ ದ್ರಾವಿಡ್** **ಸಂಪಾದಿತ**

1. **ಸಾಧನೆಗೆ ಆವಶ್ಯಕವಾದುದ್ದು ಯಾವುದು?**
   ಸಾಧನೆಗೆ ಆವಶ್ಯಕವಾದುದ್ದು ಏಕಾಗ್ರತೆ ಮತ್ತು ಪರಿಶ್ರಮ.
2. **ಕ್ರಿಕೆಟ್ ಆಟದ ಬಗ್ಗೆ ಇರುವ ಅಪವಾದವೇನು?**
   ಐದು ದಿನಗಳ ಕಾಲ ಆಟವನ್ನು ನೋಡುವುದೆಂದರೆ ಅಷ್ಟು ಮಾನವ ಶ್ರಮ ವ್ಯರ್ಥವಾಗುತ್ತದೆ ಎಂಬ ಅಪವಾದವಿದೆ.
3. **ರಾಹುಲರ ಹೆಸರಿಗೆ ದ್ರಾವಿಡ್ ಎಂಬುದು ಸೇರಿದ್ದು ಹೇಗೆ?**
   ರಾಹುಲರ ಹೆಸರಿಗೆ ದ್ರಾವಿಡ್ ಎಂಬುದು ಸೇರಿದ್ದು ಅವರ ಮುತ್ತಜ್ಜನಿಂದ.
4. **ರಾಹುಲರು ತಮ್ಮ ಮೊದಲ ಟೆಸ್ಟ್ ಇನ್ನಿಂಗ್ಸ್‌ನಿಂದ ಗಳಿಸಿದ ಓಟಗಳೆಷ್ಟು?**
   ರಾಹುಲರು ತಮ್ಮ ಮೊದಲ ಟೆಸ್ಟ್ ಇನ್ನಿಂಗ್ಸ್‌ನಲ್ಲಿ 95 ಓಟಗಳನ್ನು ಗಳಿಸಿದರು.
5. **ಹಾವು – ಏಣಿ ಆಟ ಎಂಬುದರ ಅರ್ಥ ಸ್ವಾರಸ್ಯವೇನು?**
   ಒಂದಷ್ಟು ಕಾಲ ಮೇಲು ಮೇಲಕ್ಕೆ ಮತ್ತೊಂದು ದಿನ ಕೆಳಕ್ಕೆ ಯಾವುದು ಸ್ಥಿರವಲ್ಲವೆಂಬುದು.

## ಗದ್ಯಪಾಠ – 3

**ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ** **ಸಂಪಾದಿತ**

1. **ಪುಟ್ಟರಾಜರ ಹುಟ್ಟೂರು ಯಾವುದು?**
   ಪುಟ್ಟರಾಜರ ಹುಟ್ಟೂರು ಹಾವೇರಿ ಜಿಲ್ಲೆಯ ದೇವಗಿರಿ.
2. **ಅಂಧತ್ವವು ಪುಟ್ಟರಾಜರ ಪಾಲಿಗೆ ಏಕೆ ದುರಂತವಾಗಲಿಲ್ಲ?**
   ಅನೇಕ ಅಂಧರ, ಅನಾಥರ ಬಾಳಿಗೆ ಬೆಳಕಾಗಿದ್ದರಿಂದ ಅವರಿಗೆ ಅಂಧತ್ವ ದುರಂತವಾಗಲಿಲ್ಲ.
3. **ಪುಟ್ಟರಾಜರ ಸೋದರಮಾವನು ಇವರನ್ನು ಪಂಚಾಕ್ಷರಿ ಗವಾಯಿಗಳಿಗೆ ಏಕೆ ಒಪ್ಪಿಸಿದರು?**
   ಪುಟ್ಟರಾಜರಲ್ಲಿದ್ದ ಸೂಕ್ಷ್ಮತೆ, ಕಲಿಕೆಯಲ್ಲಿನ ಏಕಾಗ್ರತೆಯನ್ನು ಕಂಡು ಹೀಗೆ ಮಾಡಿದರು.
4. **ಭಾರತೀಯ ಸಂಗೀತದ ಎರಡು ಶೈಲಿ ಯಾವುದು?**
   ಭಾರತೀಯ ಸಂಗೀತವು ಹಿಂದೂಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತವೆಂಬ ಎರಡು ಶೈಲಿಗಳನ್ನು ಹೊಂದಿದೆ.
5. **ಪುಟ್ಟರಾಜರ ಹಿಂದಿ ಭಾಷೆಯ ಪ್ರಾವಿಣ್ಯಕ್ಕೆ ಸಾಕ್ಷಿ ಯಾವುದು?**
   ಸಂಸ್ಕೃತದ 'ಸಿದ್ಧಾಂತ ಶಿಖಾಮಣಿ', ಕನ್ನಡದ 'ಬಸವೇಶ್ವರ' ಮತ್ತು 'ಸಿದ್ದಲಿಂಗೇಶ್ವರ ವಿಜಯ' ಪುರಾಣಗಳನ್ನು ಹಿಂದಿಗೆ ಅನುವಾದಿಸಿರುವುದು ಅವರ ಹಿಂದಿ ಭಾಷಾ ಪ್ರಾವೀಣ್ಯಕ್ಕೆ ಸಾಕ್ಷಿಯಾಗಿದೆ.
6. **ಪುಟ್ಟರಾಜರಿಗೆ ಜನರಿಂದ ಸಂದ ಪುರಸ್ಕಾರ ಯಾವುದು?**
   ಪುಟ್ಟರಾಜರಿಗೆ ಜನರಿಂದ **'1635'** ಬಾರಿ ತುಲಾಭಾರ ನಡೆದಿರುವುದು ಅವರಿಗೆ ಸಂದ ಪುರಸ್ಕಾರವಾಗಿದೆ.
7. **ಶ್ರೇಷ್ಠ ಸಾಧಕರನ್ನು ಗುರುತಿಸುವ ಮದ್ಯಪ್ರದೇಶದ ಪುರಸ್ಕಾರ ಯಾವುದು?**
   ಶ್ರೇಷ್ಠ ಸಾಧಕರನ್ನು ಗುರುತಿಸುವ ಮದ್ಯಪ್ರದೇಶದ ಪುರಸ್ಕಾರ ಕಾಳಿದಾಸ ಸಂಮಾನ್ ಪ್ರಶಸ್ತಿ.
8. **ಕಲಿಕೆಗೆ ಮುಖ್ಯವಾಗಿ ಇರಬೇಕಾದುದು ಯಾವುದು?**
   ಕಲಿಕೆಗೆ ಮುಖ್ಯವಾಗಿ ಇರಬೇಕಾದುದು ಏಕಾಗ್ರತೆ.
9. **ಪುನರ್ಜನ್ಮವಿದ್ದುದೇ ಆಗಿದ್ದಲ್ಲಿ ಪುಟ್ಟರಾಜರ ಬಯಕೆ ಏನಾಗಿತ್ತು?**
   ಪುನರ್ಜನ್ಮವಿದ್ದುದೇ ಆಗಿದ್ದಲ್ಲಿ ಪುಟ್ಟರಾಜರು ಕುರುಡನಾಗಿ ಹುಟ್ಟಲು ಬಯಸುತ್ತಾರೆ.

## ಗದ್ಯಪಾಠ – 4

**ಪಶ್ಚಿಮ ಘಟ್ಟಗಳ ಪತನ** **ನಾಗೇಶ ಹೆಗಡೆ**

1. **ಕರ್ನಾಟಕದಲ್ಲಿ ಹೆಚ್ಚು ಕಾಫಿ ಬೆಳೆಯುವ ಪ್ರದೇಶ ಯಾವುದು?**
   ಕರ್ನಾಟಕದಲ್ಲಿ ಹೆಚ್ಚು ಕಾಫಿ ಬೆಳೆಯುವ ಪ್ರದೇಶ "ಪಶ್ಚಿಮ ಘಟ್ಟಗಳು"
2. **ಪಶ್ಚಿಮ ಘಟ್ಟಗಳು ಯಾವೆಲ್ಲ ಜೀವಕೋಟಿಗಳಿಗೆ ಆಶ್ರಯತಾಣವಾಗಿದೆ?**
   ಪಶ್ಚಿಮ ಘಟ್ಟಗಳು ಜೇನು, ಜೀರುಂಡೆ, ಕೀಟ, ಪತಂಗ, ಕಾಡೆಮ್ಮೆ, ಮದ್ದಾನೆಗಳವರೆಗೆ ಅಸಂಖ್ಯ ಜೀವಕೋಟಿಗಳ ಆಶ್ರಯತಾಣವಾಗಿದೆ.
3. **ಪಶ್ಚಿಮ ಘಟ್ಟಗಳ ನಿಜವಾದ ಪತನ ಯಾವಾಗ ಪ್ರಾರಂಭವಾಯಿತು?**
   ಪಶ್ಚಿಮ ಘಟ್ಟಗಳ ನಿಜವಾದ ಪತನ ಸ್ವಾತಂತ್ರ್ಯ ಬಂದ ಮೇಲೆ ಪ್ರಾರಂಭವಾಯಿತು.
4. **ರೈತರು ಅತಿಕ್ರಮಣ ಸಾಗುವಳಿ ಪ್ರಾರಂಭಿಸಲು ಕಾರಣವೇನು?**
   ರೈತರು ಅತಿಕ್ರಮಣ ಸಾಗುವಳಿ ಪ್ರಾರಂಭಿಸಲು ಕಾರಣ ಕೃಷಿ ಭೂಮಿಯ ವಿಸ್ತರಣೆಯಾಗಿರುವುದು.
5. **ಸರಕಾರವು ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕಿದ್ದು ಏಕೆ?**
   ದೇಶದ ಅಭಿವೃದ್ಧಿಗಾಗಿ ಉದ್ದಿಮೆಗಳನ್ನು ಸ್ಥಾಪಿಸಿ, ಖನಿಜ, ವಿದ್ಯುತ್ತಿಗೆಂದು ಸರಕಾರವೇ ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕಿದೆ.
6. **ಪಶ್ಚಿಮಘಟ್ಟಗಳು ಯಾವುದರಿಂದ ತತ್ತರಿಸುತ್ತಿವೆ?**
   ಪಶ್ಚಿಮಘಟ್ಟಗಳು ಕೊಡಲಿ ಸಿಡಿಮದ್ದುಗಳಿಂದ ತತ್ತರಿಸುತ್ತಿವೆ.
7. **ಪ್ರವಾಹದ ಹಾವಳಿ ಹೆಚ್ಚಾಗಲು ಕಾರಣವೇನು?**
   ಮಳೆಯ ರಭಸವನ್ನು ತಡೆದು ನೀರನ್ನು ನಿಧಾನವಾಗಿ ಭೂಮಿಯೊಳಕ್ಕೆ ಇಂಗಿಸಬೇಕಿದ್ದ ಮರಗಳು ಕಡಿಮೆಯಾಗಿರುವುದೇ ಕಾರಣವಾಗಿದೆ.
8. **ಕಾಡಿನ ಪ್ರಾಣಿಗಳು ನಾಡಿಗೆ ಬಂದದ್ದೇಕೆ?**
   ಕಾಡಿನ ಪ್ರಾಣಿಗಳು ಆಶ್ರಯ ತಪ್ಪಿಹೋಗಿ ನಾಡಿಗೆ ಬರಲಾರಂಭಿಸಿವೆ.
9. **ಅರಣ್ಯಗಳ ಸ್ವಾಹಾಕಾರ ಹೀಗೆಯೇ ಮುಂದುವರಿದರೆ ಏನಾಗಬಹುದು?**
   ನಮ್ಮ ಮುಂದಿನ ಪೀಳಿಗೆಯವರು ಮರುಭೂಮಿಯನ್ನು ನೋಡಲು ದೂರದ ರಾಜಾಸ್ಥಾನಕ್ಕೆ ಹೋಗಬೇಕಾಗಿಲ್ಲ.

## ಗದ್ಯಪಾಠ – 5

**ಎಲ್ಲಿ ಹೋಗ್ಯಾವೋ ಆ ಕಾಲ ಡಾ. ಗುರುರಾಜ ಕರಜಗಿ**

1. **ಲೇಖಕರ ಅಜ್ಜ ಯಾವ ವೃತ್ತಿಯಲ್ಲಿದ್ದರು?**
   ಲೇಖಕರ ಅಜ್ಜ ಶಿಕ್ಷಕ ವೃತ್ತಿಯಲ್ಲಿದ್ದರು.
2. **ಸ್ವತಂತ್ರ ಭಾರತದಲ್ಲಿ ಮೊದಲ ಬಾರಿ ರೇಶನ್ ಪದ್ಧತಿ ಜಾರಿಗೆ ಬರಲು ಕಾರಣವೇನು?**
   ನಮ್ಮ ದೇಶದ ಮೇಲೆ ಚೀನಾ ದೇಶ ದಾಳಿ ಮಾಡಿದ ಕಾರಣದಿಂದ ಸ್ವತಂತ್ರ ಭಾರತದಲ್ಲಿ ಮೊದಲ ಬಾರಿ ರೇಶನ್ ಪದ್ಧತಿ ಜಾರಿಗೆ ಬಂದಿತು.
3. **ರೇಶನ್ ಪದ್ಧತಿಯ ಪ್ರಕಾರ ಏನನ್ನು ಮಾಡುವಂತಿರಲಿಲ್ಲ?**
   ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಅಕ್ಕಿ ಮತ್ತು ಸಕ್ಕರೆಯನ್ನು ಸರ್ಕಾರದ ಪರವಾನಗಿ ಇಲ್ಲದೆ ಒಯ್ಯುವಂತಿರಲಿಲ್ಲ.
4. **ಅಜ್ಜ ಕಾಯಿದೆಯನ್ನು ಮೀರಲು ಕಾರಣವೇನು?**
   ಅಜ್ಜನ ಹೃದಯದಲ್ಲಿನ ಪ್ರೀತಿ ಕಾಯಿದೆ ಮೀರಲು ಕಾರಣ.
5. **ಅಜ್ಜ ಅಕ್ಕಿಯನ್ನು ತೆಗೆದುಕೊಂಡು ಹೋದದ್ದು ಹೇಗೆ?**
   ಅಜ್ಜ ಅಕ್ಕಿಯನ್ನು ಹಾಸಿಗೆ ಸುರುಳಿಯಲ್ಲಿ ಸುತ್ತಿ ತೆಗೆದುಕೊಂಡು ಹೋದರು.
6. **ಆಗಿನ ಕಾಲದಲ್ಲಿ ಅಪಮಾನಕರವಾದ ಸಂಗತಿ ಯಾವುದಾಗಿತ್ತು?**
   ಪೋಲಿಸ್ ಜೀಪಿನಲ್ಲಿ ಹೋಗುವುದು ಅಪಮಾನಕರ ಸಂಗತಿಯಾಗಿತ್ತು.
7. **'ಸಾಹೇಬ್ರನ್ನು ಬೆಟ್ಟಿ ಆಗ್ರಿ' ಎಂದು ಹೇಳಿದ ಕೂಡಲೆ ಅಜ್ಜ ಕುಸಿದು ಹೋದುದೇಕೆ?**
   ತಾನು ಅಕ್ಕಿಯನ್ನು ಕೊಂಡು ಹೋಗುತ್ತಿರುವ ವಿಷಯ ಪೋಲಿಸರಿಗೆ ತಿಳಿದುಹೋಗಿದೆ ಎಂದು ಅಜ್ಜ ಕುಸಿದು ಹೋದರು.
8. **ಲೇಖಕರ ಮನಸ್ಸಿನಲ್ಲಿ  ಅಚ್ಚಳಿಯದೆ ನಿಂತ ಚಿತ್ರ ಯಾವುದು?**
   ಒಂದೆಡೆಗೆ ಕೃತಜ್ಞನಾದ ವಿದ್ಯಾರ್ಥಿ, ಇನ್ನೊಂದು ಕಡೆ ಕೃತಾರ್ಥನಾದ ಗುರು ಅಳುತ್ತಾ ಅಪ್ಪಿಕೊಂಡ ಚಿತ್ರ ಲೇಖಕರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಿತು.
9. **ಅಜ್ಜನು ಸಾಹೇಬರ ಕಪಾಳಕ್ಕೆ ಹೊಡೆದದ್ದು ಏಕೆ?**
   ತನ್ನ ವಿದ್ಯಾರ್ಥಿ ಪೋಲಿಸ್ ಸಾಹೇಬ್ ಆಗಿದ್ದಾನಲ್ಲಾ ಎಂಬ ಹೆಮ್ಮೆಯಿಂದ, ಪ್ರೀತಿಯಿಂದ ಅವನ ಕಪಾಳಕ್ಕೆ ಹೊಡೆದರು.
10. **ಇದುವರೆಗೂ ಯಾರಿಗೂ ನಮಸ್ಕರಿಸದ ಸಾಹೇಬರು ಅಜ್ಜನಿಗೆ ನಮಸ್ಕರಿಸಿದುದೇಕೆ?**
    ಅಜ್ಜನ ಬಗ್ಗೆ ಗೌರವ ಮತ್ತು ಅವರ ಉಪಕಾರ ಸ್ಮರಣೆ ಹಾಗೂ ಕೃತಜ್ಞತಾ ಭಾವದಿಂದಾಗಿ ಸಾಹೇಬರು ನಮಸ್ಕರಿಸಿದರು.

## ಗದ್ಯಪಾಠ – 6

**ಶಿಷ್ಯವತ್ಸಲ ರಾಮನ್ ಬಿ.ಪಿ. ರಾಧಾಕೃಷ್ಣ**

1. **ರಾಮನ್‌ರವರು ಯಾರನ್ನು ಕಠಿಣ ಪರೀಕ್ಷೆಗೆ ಒಳಪಡಿಸುತ್ತಿದ್ದರು?**
   ರಾಮನ್‌ರವರು ತಮ್ಮ ಬಳಿ ಶಿಷ್ಯವೃತ್ತಿಗೆ ಬರುವವರನ್ನು ಕಠಿಣ ಪರೀಕ್ಷೆಗೆ ಒಳಪಡಿಸುತ್ತಿದ್ದರು.
2. **ಪ್ರಯೋಗಾಲಯಕ್ಕೆ ಬಂದ ರಾಮನ್‌ರ ಮೊದಲ ಕೆಲಸ ಯಾವುದಾಗಿರುತ್ತಿತ್ತು?**
   ಎಲ್ಲಾ ಬಾಗಗಳಿಗೂ ಹೋಗಿ ಶಿಷ್ಯರ ಪ್ರಗತಿಯನ್ನು ವಿಚಾರಿಸಿ ಮುಂದಿನದರ ಬಗ್ಗೆ ಸಲಹೆ ಕೊಡುವುದು ರಾಮನ್ ಕೆಲಸವಾಗಿತ್ತು.
3. **ಶಿಷ್ಯರ ಸಾಧನೆಯನ್ನು ರಾಮನ್‌ರು ಹೊಗಳುತ್ತಿದ್ದರ ಉದ್ದೇಶ ಏನು?**
   ಶಿಷ್ಯರು ಉಬ್ಬಿಹೋಗಿ ಹೆಚ್ಚು ಹುರುಪಿನಿಂದ ಸಂಶೋಧನೆಯನ್ನು ಮಾಡುವ ಹಾಗೆ ಮಾಡುವ ಉದ್ದೇಶದಿಂದ ಹೊಗಳುತ್ತಿದ್ದರು.
4. **ವಾರವಾರವೂ ವ್ಯಾಸಂಗ ಗೋಷ್ಠಿಗಳನ್ನೇಕೆ ಏರ್ಪಡಿಸುತ್ತಿದ್ದರು?**
   ಶಿಷ್ಯರು ತಾವು ಕಂಡು ಹಿಡಿದ ವಿಷಯಗಳನ್ನು ಇತರರಿಗೆ ಮನದಟ್ಟಾಗುವಂತೆ ತಿಳಿಸುವ ಸಾಮರ್ಥ್ಯವನ್ನು ಪಡೆಯಲಿ ಎಂಬ ದೃಷ್ಟಿಯಿಂದ ವಾರವಾರವೂ ವ್ಯಾಸಂಗಗೋಷ್ಠಿಗಳನ್ನು ಏರ್ಪಡಿಸುತ್ತಿದ್ದರು.

5. **ಬೋಧಕರೆಲ್ಲರಿಗೂ ಆದರ್ಶವಾಗಬಲ್ಲ ರಾಮನ್‌ರ ಮಾತು ಯಾವುದು?**
'ವಾಸ್ತವವಾಗಿ ವಿಜ್ಞಾನ ಎಂದರೆ ಭಾವನೆಗಳು, ಅವು ಮನಸ್ಸಿನಲ್ಲಿ ಗಸ್ತುತಿರುಗುತ್ತಿರಬೇಕು, ಪಠ್ಯಪುಸ್ತಕಗಳಲ್ಲಾಗಲಿ, ಯಂತ್ರೋಪಕರಣಗಳಲ್ಲಾಗಲಿ ಜ್ಞಾನ ಅಡಗಿರುವುದಿಲ್ಲ' ಎಂಬ ಮಾತು ಬೋಧಕರೆಲ್ಲರಿಗೂ ಆದರ್ಶವಾಗಬಲ್ಲುದು.
6. **ವೈಜ್ಞಾನಿಕ ವಿಷಯವನ್ನಲ್ಲದೆ ಬೇರೆ ವಿಷಯವನ್ನು ರಾಮನ್‌ರು ಏಕೆ ಪ್ರಸ್ತಾಪಿಸುತ್ತಿರಲಿಲ್ಲ?**
ವೈಜ್ಞಾನಿಕ ವಿಷಯದಲ್ಲಿ ಹೆಚ್ಚು ಆಸಕ್ತಿ ಮೂಡುವಂತೆ ಮಾಡಲು ಬೇರೆ ವಿಷಯವನ್ನು ರಾಮನ್‌ರು ಪ್ರಸ್ತಾಪಿಸುತ್ತಿರಲಿಲ್ಲ.
7. **ಸಂಶೋಧನೆಯ ಲೇಖನವನ್ನು ಬರೆದ ಶಿಷ್ಯರನ್ನು ರಾಮನ್‌ರು ಹೇಗೆ ಪ್ರೋತ್ಸಾಹಿಸುತ್ತಿದ್ದರು?**
ಲೇಖನಗಳನ್ನು ತಿದ್ದಿ ಉತ್ತಮ ಪ್ರಬಂಧವನ್ನು ಶಿಷ್ಯನ ಹೆಸರಿನಲ್ಲಿ ಪ್ರಕಟಿಸುವ ಮೂಲಕ ಶಿಷ್ಯರನ್ನು ರಾಮನ್‌ರವರು ಪ್ರೋತ್ಸಾಹಿಸುತ್ತಿದ್ದರು.
8. **ಸಾಧಕ ಶಿಷ್ಯರ ಬಗ್ಗೆ ರಾಮನ್‌ರ ದೊಡ್ಡ ಗುಣ ಯಾವುದು?**
ನೇರವಾಗಿ ಪ್ರಶಸ್ತಿಯ ಪತ್ರವನ್ನು ಕೊಡದೆ ಸಂಬಂಧಿಸಿದ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿ ಪ್ರತಿಭೆಗೆ ಸ್ಥಾನ ಸಿಗುವಂತೆ ಮಾಡುತ್ತಿದ್ದುದು ರಾಮನ್‌ರ ಬಹುದೊಡ್ಡ ಗುಣವಾಗಿತ್ತು.
9. **ಪಿಷಾರೊದಿ ಯಾರು?**
ಪಿಷಾರೊದಿ ರಾಮನ್‌ರವರ ಶಿಷ್ಯ.

## ಗದ್ಯಪಾಠ – 7

**ನನ್ನ ಗೋಪಾಲ** — **ಕುವೆಂಪು**

1. **ಗೋಪಾಲನ ಬೆಳಗಿನ ಮುಖ್ಯ ಕೆಲಸ ಏನಾಗಿತ್ತು?**
ಬೆಳಗ್ಗಿ ಎದ್ದು ಸ್ನಾನ ಮಾಡಿ ಕಾಡಿನಿಂದ ಪೂಜೆಗೆ ಹೂಗಳನ್ನು ಕೊಯ್ದು ತರುವುದು ಗೋಪಾಲನ ಮುಖ್ಯ ಕೆಲಸವಾಗಿತ್ತು.
2. **ಬಣ್ಣಬಣ್ಣದ ಹೂಗಳು ಹೇಗೆ ಕಾಣಿಸುತ್ತಿತ್ತು?**
ಸಾವಿರಾರು ಮಳೆಬಿಲ್ಲು ಸೇರಿ ಕುಣಿದಂತೆ ಬಣ್ಣಬಣ್ಣದ ಹೂಗಳು ಕಾಣಿಸುತ್ತಿದ್ದವು.
3. **ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ?**
ಗೋಪಾಲನ ಗೆಳೆಯರು ಬೆಲೆಯುಳ್ಳ ಬಟ್ಟೆ ಹಾಕಿಕೊಂಡು ಹಾಸ್ಯ ಮಾಡುತ್ತಿದ್ದರು ಆದ ಕಾರಣ ಹೊಸ ಪಂಚೆಯನ್ನು ಗೋಪಾಲನು ಬಯಸಿದನು.
4. **ಸಂಜೆ ಮನೆಗೆ ಮರಳುವ ಗೋಪಾಲನ ಭಯಕ್ಕೆ ಕಾರಣವೇನು?**
ಗೋಪಾಲನು ಕಾಡುದಾಟಿ ಮನೆಗೆ ಬರಬೇಕಾದ್ದರಿಂದ ಅವನು ಭಯಪಡುತ್ತಿದ್ದನು.
5. **ಬನದ ಗೋಪಾಲ ಯಾರು?**
ತಲೆಯ ಮೇಲೆ ಕಿರೀಟ, ನವಿಲುಗರಿ, ಕೈಲೊಂದು ಕೊಳಲನ್ನು ಹೊಂದಿರುವ ಶ್ರೀಕೃಷ್ಣನೇ ಬನದ ಗೋಪಾಲ.
6. **ಯೋಗಿಯ ಸಾಧನೆಯನ್ನು ಮೀರಿದ್ದು ಯಾವುದು?**
ಹಾಲನ್ನು ಮಾರುವ ಹೆಣ್ಣುಮಕ್ಕಳ ಒಲುಮೆಯು ಯೋಗಿಯ ಸಾಧನೆಯನ್ನು ಮೀರಿದ್ದು.

## ಪದ್ಯ – 1

**ಅರಿವು** — **ಸುಕನ್ಯಾ ಮಾರುತಿ**

1. **ನಿತ್ಯ ದಾಸೋಹ ಎಂದರೇನು?**
ಶಿವಭಕ್ತರಿಗೆ ಪ್ರತಿದಿನ ಮಾಡುವ ಆರೋಗಣೆಯೇ ನಿತ್ಯದಾಸೋಹ.
2. **ಮೈಹಣ್ಣಾಗಲು ಕಾರಣವೇನು?**
ಪ್ರತಿದಿನವೂ ಅಡಿಗೆಯನ್ನು ಮಾಡಿ ಬಡಿಸುತ್ತಿದ್ದ ಕಾರಣ ಆಯಾಸದಿಂದ ಮೈ ಹಣ್ಣಾಯಿತು.
3. **ಮೈಯನ್ನು ಮುಟ್ಟಿಕೊಂಡಾಗ ಗಾಬರಿಯಾಗುವುದೇಕೆ?**
ತನ್ನ ಇರುವಿಕೆಯ ಅರಿವೇ ಆಗದೆ ಗಾಬರಿಯಾಗುತ್ತದೆ.
4. **ಅಂತರಾತ್ಮ ಏನೆಂದು ಚೀರುತ್ತದೆ?**
ನೀನು ಇದ್ದೀ, ಇರಬೇಕು, ಇರಲೇಬೇಕು ಎಂದು ಅಂತರಾತ್ಮ ಚೀರುತ್ತದೆ.

## ಪದ್ಯ – 2

**ನನ್ನ ಹಾಗೆಯೆ** **ಸು.ರಂ. ಎಕ್ಕುಂಡಿ**

1. **ಅಜ್ಜನನ್ನು ಮಗುವು ಏನೆಂದು ಕೇಳಿತು?**
   "ಈತನಾರು ತಾತ ಇಲ್ಲಿ ನಿಂತು ಏನು ನೋಡುತಿರುವವನು"ಎಂದು ಮಗು ಅಜ್ಜನನ್ನು ಕೇಳಿತು.
2. **ಅಜ್ಜನು ಬಾಹುಬಲಿ ಮೂರ್ತಿಯ ಬಗ್ಗೆ ಏನು ಹೇಳಿದನು?**
   "ಇವನು ಬಾಹುಬಲಿ, ಧೀರತನದ ಮೂರ್ತಿಯು" ಎಂದು ಅಜ್ಜನು ಹೇಳಿದನು.
3. **ಬಾಹುಬಲಿಗೆ ಭಯವಾಗುವುದಿಲ್ಲವೆ ಎಂದು ಮಗು ಕೇಳಿದುದೇಕೆ?**
   ಬಾಹುಬಲಿಯ ಬಳಿ ಯಾರೂ ಇಲ್ಲದ ಕಾರಣ "ಅವನಿಗೆ ಭಯವಾಗುವುದಿಲ್ಲವೇ?"ಎಂದು ಮಗು ಕೇಳಿತು.
4. **ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆ ಏನು?**
   ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನು ನಕ್ಕುಬಿಟ್ಟನು.
5. **ಭರತ–ಬಾಹುಬಲಿಯರ ಸೆಣಸಾಟದ ಫಲಿತಾಂಶವೇನು?**
   ಭರತನು ಸೋತನು, ಬಾಹುಬಲಿ ಗೆದ್ದನು.
6. **ಸೂರ್ಯ ಚಂದ್ರರಿಗಿಂತಲೂ ಬಾಹುಬಲಿಯು ಶ್ರೇಷ್ಠನು ಹೇಗೆ?**
   ಸೂರ್ಯ ಚಂದ್ರರೇ ಬಾಹುಬಲಿಗೆ ಪ್ರದಕ್ಷಿಣೆ ಹಾಕುತ್ತಿದ್ದ ಕಾರಣ ಇವನು ಶ್ರೇಷ್ಠನಾಗಿದ್ದಾನೆ.

## ಪದ್ಯ – 3

**ಸವಿ ಚೈತ್ರ** **ಬಸವರಾಜ ಸಾದರ**

1. **ಸುಖದ ಸುಗ್ಗಿಯು ಯಾವಾಗ ಬಂದಿತು?**
   ಸುಖದ ಸುಗ್ಗಿಯು ಯುಗದ ಆದಿಯಲ್ಲಿ ಬಂದಿತು.
2. **ಸುಗ್ಗಿ ಬಂದಾಗ ನೆಲದಮ್ಮ ಏನಾದಳು?**
   ಸುಗ್ಗಿ ಬಂದಾಗ ನೆಲದಮ್ಮ ನವವಧುವಿನಂತಾದಳು.
3. **ಯಾವ ರೀತಿಯಲ್ಲಿ ಬರಡು ಜೀವಕೆ ಚೈತನ್ಯ ಮೂಡಿತು?**
   ಕೊರಡನ್ನು ಕೊನರಿಸಿ, ಮೊಗ್ಗನ್ನು ಅರಳಿಸಿ, ಬರಡು ಜೀವಕ್ಕೆ ಚೈತನ್ಯ ಮೂಡಿಸಿತು.
4. **ಯಾವುದರಿಂದ ಚಿಲಿಪಿಲಿಯ ಕಲರವಕೆ ಮತ್ತೇರಿತು?**
   ಕುಕಿಲ ಕೋಗಿಲೆ ಕಂಠವು ಮುಕ್ತವಾಗಿ ತಾರಕಕೇರಿ ಚಿಲಿಪಿಲಿಯ ಕಲರವಕೆ ಮತ್ತೇರಿತು.
5. **ಪ್ರಾಣಿ ಪಕ್ಷಿಗಳು ದಗದಕ್ಕೆ ಹೊರಟಂತೆ ಮೈಕೊಡವಿ ಎದ್ದವು ಎಂದರೇನು?**
   ಪ್ರಾಣಿಪಕ್ಷಿಗಳು ಜಡತ್ವವನ್ನು ಬಿಟ್ಟು ಚಟುವಟಿಕೆಯಿಂದ ತಮ್ಮ ಕೆಲಸದಲ್ಲಿ ತೊಡಗುತ್ತವೆ ಎಂದರ್ಥ.
6. **ಯುಗಾದಿಯ ಸಾರ್ವತ್ರಿಕವಾದ ಸಂಪ್ರದಾಯ ಯಾವುದು?**
   ಹೊಸತನದೊಂದಿಗೆ ಸುಖದುಃಖಗಳನ್ನು ಸಮಾನವಾಗಿ ಸ್ವೀಕರಿಸುವಂತೆ ಸಿಹಿಕಹಿ ಸವಿಯುವುದು.

## ಪದ್ಯ – 4

**ಸದ್ದು ಮಾಡದಿರು** **ಸಿ.ಪಿ. ಕೃಷ್ಣಕುಮಾರ್**

1. **ತಿಮಿರಕ್ಕೆ ವೈರಿ ಯಾವುದು?**
   ತಿಮಿರಕ್ಕೆ ವೈರಿ 'ದೀಪ'.
2. **ಕರ್ತವ್ಯವನ್ನು ಹೇಗೆ ಮುಗಿಸಬೇಕೆಂದು ಕವಿಯು ತಿಳಿಯ ಹೇಳಿದ್ದಾನೆ?**
   ಶಾಂತಿಯಿಂದ ಬದುಕಿ ನಿನ್ನ ಕರ್ತವ್ಯವನ್ನು ಮುಗಿಸು ಎಂದು ಕವಿಯು ತಿಳಿಯಹೇಳಿದ್ದಾನೆ.
3. **ಬರೇ ಸದ್ದು ಮಾಡುವುದು ಯಾವುದು?**
   ಹಸಿ ಸೌದೆ ಬರೇ ಸದ್ದು ಮಾಡುವುದು.
4. **ಇಬ್ಬನಿ ಮಾಯವಾಗುವುದು ಹೇಗೆ?**
   ಇಬ್ಬನಿಯು ರವಿಕಿರಣಕ್ಕೆ ಕರಗಿ ಮಾಯವಾಗುವುದು.

**ಪದ್ಯ – 5**

**ಗುರಿ** **ಎಂ. ಗೋಪಾಲಕೃಷ್ಣ ಅಡಿಗ**

1. **'ಮಸಗುವಂಬುಜದಂತೆ ಧ್ಯೇಯದ ಆಳ್ವಿಸಕೆ ಬಸವಾಗು' ಎಂದರೇನು?**
   ಕೆಸರಿನಲ್ಲಿರುವ ತಾವರೆಯು ಸೂರ್ಯನನ್ನು ನೋಡಿ ವಿಜೃಂಭಿಸುವಂತೆ ಮಾನವನು ಧ್ಯೇಯ ಸಾಧನೆಗೆ ಸಿದ್ಧನಾಗಬೇಕು ಎಂಬುದನ್ನು ಸೂಚಿಸುತ್ತದೆ.
2. **ಒಂದು ಬಾಣಕೆ ಒಂದು ಗುರಿ ಎಂಬುದು ಯಾವುದಕ್ಕೆ ಹೋಲಿಕೆಯಾಗಿ ಬಂದಿದೆ?**
   ಜೀವನದಲ್ಲಿ ಒಂದೇ ಗುರಿ ಇರಬೇಕು ಎಂಬುದಕ್ಕೆ ಹೋಲಿಕೆಯಾಗಿದೆ.
3. **ಯಾವುದಕ್ಕಾಗಿ ಹಗಲಿರುಳು ಹೋರಾಡಬೇಕು?**
   ಒಂದೇ ಹಿರಿದಾದ ಗುರಿಗೆ ಹಗಲಿರುಳು ಹೋರಾಡಬೇಕು.
4. **ಪ್ರತಿಯೊಬ್ಬನ ಜೀವನಕ್ಕೂ ಒಂದು ಗುರಿ ಇರಬೇಕು ಏಕೆ?**
   ಜೀವನದಲ್ಲಿ ಒಂದುಗುರಿ ಇಲ್ಲದಿದ್ದರೆ ಅದು ಎಲ್ಲಗೆ ಹೋಗಬೇಕೆಂಬ ನಿಶ್ಚಿತತೆ ಇಲ್ಲದ ಸಮುದ್ರದಲ್ಲಿನ ನೌಕೆಯಂತಾಗುತ್ತದೆ.ಆದ್ದರಿಂದ ಜೀವನಕ್ಕೆ ಒಂದುಗುರಿ ಇರಬೇಕು.

**ಪದ್ಯ – 6**

**ಮಗು** **ಜಾನಪದ**

1. **ಬರಡಾಕಳೆಲ್ಲ ಹೈನಾಗೆ ಎಂದರೇನು?**
   ಹಾಲುಕೊಡದಿರುವ ಹಸು ಹಾಲು ಕೊಡುವಂತೆ ಆಗುವುದು ಎಂದರ್ಥ.
2. **ಮಗುವಿನ ಚೆಲುವನ್ನು ಜನಪದರು ಯಾವುದಕ್ಕೆ ಹೋಲಿಸಿದ್ದಾರೆ?**
   ಬಾಳೆಯ ಹಣ್ಣಿನ ಮಾಟಕ್ಕೆ, ಬಾದಾಮಿ ಎಲೆಯ ತೋಟಕ್ಕೆ ಹೋಲಿಸಿದ್ದಾರೆ.
3. **ಮಕ್ಕಳ ಹಸಿವನ್ನು ಬಲ್ಲವರು ಯಾರು?**
   ಮಕ್ಕಳ ಹಸಿವನ್ನು ಬಲ್ಲವರು ತಾಯಿ.
4. **ಹೆಣ್ಣಿದ್ದ ಮನೆಗೆ ಯಾವುದು ಬೇಡ?**
   ಹೆಣ್ಣಿದ್ದ ಮನೆಗೆ ಕನ್ನಡಿ ಬೇಡ.

**ಪದ್ಯ – 7**

**ವಚನಗಳು** **ಬಸವಣ್ಣ ಸೊನ್ನಲಿಗೆಯ ಸಿದ್ದರಾಮ ಅಕ್ಕಮಹಾದೇವಿ**

1. **ಯಾರು ಕೂಡಲಸಂಗಮನನ್ನು ಅರಿಯಲಾರರು?**
   ಬತ್ತುವ ಜಲ, ಒಣಗುವ ಮರವನ್ನು ಮೆಚ್ಚಿದವರು ಕೂಡಲಸಂಗಮನನ್ನು ಅರಿಯಲಾರರು.
2. **ವೇಷ ಧರಿಸಿದ ಮೇಲೆ ಹೇಗಿರಬೇಕು?**
   ವೇಷ ಧರಿಸಿದ ಮೇಲೆ ವೇಷಕ್ಕೆ ತಕ್ಕ ಆಚರಣೆ ಇರಬೇಕು.
3. **ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?**
   ಧನವಿದ್ದವರಲ್ಲಿ ಇರಬೇಕಾದ ಗುಣ 'ದಯೆ'.
4. **ಯಾವಾಗ ಕೆರೆಯನ್ನು ತೋಡಿದ್ದು ನಿಷ್ಫಲವಾಗುತ್ತದೆ?**
   ನೀರು ಬರದಿದ್ದರೆ ಕೆರೆಯನ್ನು ತೋಡಿದ್ದು ನಿಷ್ಫಲವಾಗುತ್ತದೆ.

**ಪದ್ಯ – 8**

**ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ** **ಗದುಗಿನ ನಾರಣಪ್ಪ**

1. **ಉತ್ತರನ ಮಾತಿನಂತೆ ಅದ್ಭುತವನ್ನು ಕಾಣಲು ಮೊದಲಿಗೆ ಇರಬೇಕಾದುದೇನು?**
   ಉತ್ತರನ ಮಾತಿನಂತೆ ಅದ್ಭುತವನ್ನು ಕಾಣಲು ಮೊದಲಿಗೆ ಇರಬೇಕಾದುದು ದೇಹ.
2. **ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?**
   ಕೌರವನ ಸೇನೆಯು ಉತ್ತರನಿಗೆ ವಿಶಾಲವಾದ ಸಮುದ್ರದಂತೆ ಕಾಣಿಸಿತು.

3. **ಉತ್ತರನು ನಿಟ್ಟೋಟದಲಿ ಓಡಿದ್ದು ಏಕೆ?**
ಬಲವಾದ ಕೌರವ ಸೇನೆಯನ್ನು ನೋಡಿ ಹೆದರಿ ಉತ್ತರನು ನಿಟ್ಟೋಟದಲಿ ಓಡಿದನು.
4. **ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?**
ಧುರಕ್ಕೆ (ಯುದ್ಧ) ಬೆನ್ನು ಹಾಕಿದರೆ ಪಾಪವು ಪ್ರಾಪ್ತಿಯಾಗುತ್ತದೆ.
5. **ಇಲ್ಲಿ ಯಾರು ನಾಡನರಿಯಾಗಿದ್ದಾರೆ?**
ಇಲ್ಲಿ ಉತ್ತರನು ನಾಡನರಿಯಾಗಿದ್ದಾನೆ.
6. **ಉತ್ತರನಿಗೆ ಇಂದ್ರಪದವಿಯು ಏಕೆ ಬೇಕಿಲ್ಲ?**
ಉತ್ತರನಿಗೆ ತನ್ನ ಅರಸುತನವೇ ಸಾಕಾಗಿರುವುದರಿಂದ ಇಂದ್ರಪದವಿಯು ಬೇಕಾಗಿಲ್ಲ.
7. **ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?**
ಸುರರ ಸತಿಯರ ಸ್ಥಾನವನ್ನು ಅರಮನೆಯ ನಾರಿಯರು ತುಂಬುತ್ತಾರೆ.

## ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

### ಗದ್ಯಪಾಠ – 1

**ಒಣಮರದ ಗಿಳಿ** **ಅ.ರಾ. ಮಿತ್ರ**

1. **ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನಾಗಿತ್ತು?**
   "ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ. ಹಣ್ಣು ಕೊಟ್ಟಿದೆ. ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ. ನೆರಳು ನೀಡಿದೆ.ಆದರೆ ಈಗ ದುರದೃಷ್ಟದಿಂದ ಅದಕ್ಕೆ ರೋಗ ಬಂದಿದೆ.ಹಾಗೆಂದು ಈ ಸ್ಥಿತಿಯಲ್ಲಿ ಅದನ್ನು ಬಿಟ್ಟುಹೋಗಬಾರದೆಂದು ನಿರ್ಧರಿಸಿದ್ದೇನೆ" ಎಂದು ಸಮರ್ಥನೆ ನೀಡಿತು.
2. **ಸಾಮಾನ್ಯವಾದ ಲೋಕವರ್ತನೆ ಯಾವುದು?**
   ಸಮಾನ್ಯವಾದ ಲೋಕವರ್ತನೆ ಮರ ಒಣಗಿದರೆ ಅದರಲ್ಲಿರುವ ಪಕ್ಷಿಗಳು ಬೇರೆ ಮರಗಳನ್ನು ಆಶ್ರಯಿಸುವುದು ಅವುಗಳ ವರ್ತನೆ. ಅಂತೆಯೇ ಕಷ್ಟ ಬಂದಾಗ ಯಾರೂ ಜೊತೆಯಲ್ಲಿ ಇರಲಾರರು ಎಂಬ ವಿಚಾರವೂ ಇಲ್ಲಿದೆ.
3. **ಗಿಳಿಯು ಕೇಳಿದ ವರ ಯಾವುದು?**
   "ದೇವರಾಜ, ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರವು ಮೊದಲಿನಂತೆ ಹಸಿರಿನಿಂದ ಕಳಕಳಿಸುವ, ಫಲಪುಷ್ಪ ಭಾರದಿಂದ ಬೀಗುವ ನೆರಳು ಕೊಡುವ ವರವನ್ನು ದಯಪಾಲಿಸು" ಎಂದು ಗಿಳಿಯು ವರವನ್ನು ಕೇಳಿತು.

### ಗದ್ಯಪಾಠ – 2

**ರಾಹುಲ್ ದ್ರಾವಿಡ್** **ಸಂಪಾದಿತ**

1. **ಕರ್ನಾಟಕದ ಕ್ರಿಕೆಟ್ ಆಟಗಾರರ ಹಿರಿಮೆ ಎಂತಹುದು?**
   ಭಾರತೀಯ ಕ್ರಿಕೆಟ್‌ನಲ್ಲಿ ಕರ್ನಾಟಕದ ಕ್ರಿಕೆಟ್ ಆಟಗಾರರ ಕೊಡುಗೆ ಅಪಾರವಾಗಿದೆ.ಬಿ.ಎಸ್.ಚಂದ್ರಶೇಖರ್ ವೇಗದ ಎಸೆತ, ಗೂಗ್ಲಿಗೆ ಪ್ರಸಿದ್ಧರು.ಲೇಟ್‌ಕಟ್, ಸ್ಕ್ವೇರ್‌ಕಟ್‌ಗೆ ಜಿ.ಆರ್.ವಿಶ್ವನಾಥ್.ಒಂದು ಇನ್ನಿಂಗ್ಸ್‌ನ ಎಲ್ಲಾ ಹತ್ತು ಹುದ್ದರಿಗಳನ್ನು ಪಡೆದ ಅನಿಲ್ ಕುಂಬ್ಳೆ, ಕಲಾತ್ಮಕ ಆಟಕ್ಕೆ 'ಗೋಡೆ' ಖ್ಯಾತಿಯ ರಾಹುಲ್ ದ್ರಾವಿಡ್ ಇವರೆಲ್ಲ ಕರ್ನಾಟಕದ ಹೆಮ್ಮೆಯ ಆಟಗಾರರಾಗಿದ್ದಾರೆ.
2. **ಟೆಸ್ಟ್‌ಪೂರ್ವದ ರಾಹುಲರ ಕ್ರಿಕೆಟ್ ಸಾಧನೆ ಹೇಗಿತ್ತು?**
   'ಬೆಳೆಯ ಸಿರಿ ಮೊಳಕೆಯಲ್ಲಿ' ಎಂಬ ಗಾದೆಯಂತೆ ರಾಹುಲ್ ದ್ರಾವಿಡರ ಪ್ರತಿಭೆಯನ್ನು ಗುರುತಿಸಿ ಕೆ.ಕೆ.ತಾರಾಪುರರವರು ಇವರಿಗೆ ಮಾರ್ಗದರ್ಶನ ಮಾಡಿದರು. ಇದರಿಂದ 12ನೇ ವಯಸ್ಸಿನಲ್ಲಿ ಶಾಲಾತಂಡವನ್ನು ಪ್ರತಿನಿಧಿಸಿದರು.ಆಡಿದ ಮೊದಲ ಪಂದ್ಯದಲ್ಲಿ ಶತಕ ಗಳಿಸಿದರು.ಬಳಿಕ ಹದಿನೈದರ ಒಳಗಿನ ವಯೋಮಿತಿಯ ಕರ್ನಾಟಕ ತಂಡದ ಸದಸ್ಯರಾದರು.ನಂತರ ಹದಿನೇಳರೊಳಗಿನ ತಂಡಕ್ಕೂ ಆಯ್ಕೆಯಾದರು.ವಿಕೆಟ್ ಕೀಪರ್ ಆಗಿ ಕೆಲಸ ನಿರ್ವಹಿಸಿದರು.ರಾಹುಲರ ಕಲಾತ್ಮಕ ಆಟದ ಶೈಲಿ ಎಲ್ಲರಿಗೂ ಇಷ್ಟವಾಯಿತು.
3. **ರಾಹುಲ್ ದ್ರಾವಿಡರನ್ನು "ಗೋಡೆ" ಎಂದು ಕರೆಯಲು ಕಾರಣವೇನು?**
   ಒಂದು ಉತ್ತಮ ಎಸೆತ ಎಂತಹ ಪ್ರಸಿದ್ಧ ಆಟಗಾರನನ್ನಾದರೂ ಔಟ್ ಮಾಡಬಹುದು.ಆದರೆ ದ್ರಾವಿಡ್ ಅವರು ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೆಟನ್ನು ಒಪ್ಪಿಸದಿರುವ ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ, ಕಲಾತ್ಮಕ ಬ್ಯಾಟಿಂಗ್ ಶೈಲಿ, ದಿನವಿಡೀ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯದಿಂದಾಗಿ "ಗೋಡೆ ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರಾಗಿದ್ದಾರೆ.

### ಗದ್ಯಪಾಠ – 3

**ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ** **ಸಂಪಾದಿತ**

1. **ಪುಟ್ಟರಾಜರೆಂದರೆ ಕಣ್ಣಿಗೆ ಕಟ್ಟುವ ಚಿತ್ರ ಯಾವುದು?**
   ತಲೆಯ ಮೀಲೊಂದು ಅಂದವಾಗಿ ಶಿಸ್ತಿನಿಂದ ಸುತ್ತಿದ ಕಾವಿ ಬಣ್ಣದ ರುಮಾಲು, ಹಣೆಯಲ್ಲಿ ಸದಾ ಎದ್ದು ಕಾಣುವ ವಿಭೂತಿ ಹುಬ್ಬುಗಳೆರಡರ ನಡುವೆ ಗಂಧದ ಬೊಟ್ಟು, ಕೊರಳಲ್ಲಿ ರುದ್ರಾಕ್ಷಿಮಾಲೆ, ಕೊಂಚವೇ ಬಾಗಿದ ಕತ್ತು.ಕೈಯಲ್ಲೊಂದು ಊರುಗೋಲು ಇದು ಪುಟ್ಟರಾಜರೆಂದರೆ ಕಣ್ಣಿಗೆ ಕಟ್ಟುವ ಚಿತ್ರವಾಗಿದೆ.

2. **ನಾಟಕ ಕ್ಷೇತ್ರಕ್ಕೆ ಪುಟ್ಟರಾಜರ ಕೊಡುಗೆ ಏನಾಗಿತ್ತು?**
ಪುಟ್ಟರಾಜ ಗವಾಯಿಗಳು "ಶ್ರೀ ಕುಮಾರೇಶ್ವರ ನಾಟ್ಯಸಂಘ"ವನ್ನು ಸ್ಥಾಪಿಸಿ ನಾಡಿನಾದ್ಯಂತ ಶಿವಶರಣರ ಕುರಿತು ತಾವು ರಚಿಸಿದ ನಾಟಕಗಳನ್ನಾಡಿಸಿ ಧರ್ಮಜಾಗೃತಿಗೊಳಿಸಿದರು.ಕಲಬುರ್ಗಿಯ ಶರಣ ಬಸವೇಶ್ವರ, ಶ್ರೀ ಶಿವಲಿಂಗೇಶ್ವರ, ನಾಲತ್ವಾಡದ ವೀರೇಶ್ವರ, ಅಂಕಲಗಿ ಅಡವಿ ಸಿದ್ದೇಶ್ವರ, ಗುಡ್ಡಾಪುರದ ದಾನಮ್ಮ ಮೊದಲ ಹದಿನೆಂಟು ನಾಟಕಗಳನ್ನು ರಚಿಸಿ ನಾಟಕ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.
3. **ಪುಟ್ಟರಾಜರನ್ನು ಸಂಕ್ಷಿಪ್ತವಾಗಿ ಪರಿಚಯಿಸಿ.**
ಪುಟ್ಟರಾಜ ಗವಾಯಿಗಳ ಸೇವಾಕ್ಷೇತ್ರ ವಿಶಾಲವಾಗಿತ್ತು.ಇವರು ಸಂಗೀತಲೋಕವನ್ನು ತಮ್ಮ ಹೊಸಹೊಸ ರಾಗಗಳಿಂದ ಶ್ರೀಮಂತಗೊಳಿಸಿದ ವಾಗ್ಗೇಯಕಾರ, ಹಲವು ಪ್ರಕಾರಗಳ ವಾದ್ಯಪ್ರವೀಣ, ಶ್ರೇಷ್ಠಸಾಹಿತಿ, ಸಮಾಜ ಚಿಂತಕ, ನಾಟಕರಂಗ ವಿಹಾರಿ, ಶೈಕ್ಷಣಿಕ ಕ್ಷೇತ್ರದ ಸಾಧಕ, ಆಧ್ಯಾತ್ಮಿಕ ಗುರು ಇದು ಇವರ ಸಂಕ್ಷಿಪ್ತ ಪರಿಚಯ.
4. **ಪುಟ್ಟರಾಜರಿಗೆ ದೊರೆತ ಪ್ರಶಸ್ತಿಗಳಾವುವು?**
ಪುಟ್ಟರಾಜರ ಸಾಧನೆಗೆ ಹಲವು ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ಸರ್ಕಾರದ ರಾಜ್ಯ ನಾಟಕ ಅಕಾಡಮಿ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಬಸವಶ್ರೀ ಪ್ರಶಸ್ತಿ, ಮಧ್ಯಪ್ರದೇಶ ಸರ್ಕಾರದ ಕಾಳಿದಾಸ ಸಂಮಾನ್ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹೀಗೆ ಹಲವು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ.
5. **ಸಂಗೀತಕ್ಕೆ ಪುಟ್ಟರಾಜರ ಕೊಡುಗೆ ಯಾವುದಾಗಿತ್ತು?**
ಪುಟ್ಟರಾಜರು ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಎರಡು ಭಾಗದಲ್ಲಿ 'ಗಾನಸುಧಾ'ವನ್ನೂ 'ತಾಲಪಂಚಾಕ್ಷರಿ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ.ಸ್ವರಮಂಡಲ, ಸಾರಂಗಿ, ಸರೋದ ಪಿಟೀಲು, ಹಾರ್ಮೋನಿಯಂ, ತಬಲ ಮೊದಲಾದ ಸಂಗೀತ ವಾದ್ಯಗಳನ್ನು ತಮ್ಮ ಶಿಷ್ಯವೃಂದದವರಿಗೆ ಕಲಿಸುವ ಮೂಲಕ ಸಂಗೀತಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.
6. **ಅಸಹಾಯಕ ಅಂಧರಿಗೆ ಯಾವು ಮಾತುಗಳಿಂದ ನೀವು ಧೈರ್ಯ ತುಂಬುವಿರಿ?**
ನೀವು ಎಲ್ಲರಂತೆ ಇರದಿದ್ದರು ನಿಮ್ಮಲ್ಲಿರುವ ಸೂಕ್ಷ್ಮಮತಿ, ಬುದ್ಧಿಶಕ್ತಿಯಿಂದ ಏಕಾಗ್ರತೆಯಿಂದ ಕಲಿಕೆಯಲ್ಲಿ ತೊಡಗಿದರೆ ಅಸಾಧ್ಯವಾದುದನ್ನು ಸಾಧಿಸಬಹುದು ಪಂಚಾಕ್ಷರಿ ಗವಾಯಿ, ಪುಟ್ಟರಾಜಗವಾಯಿಗಳಂತೆ ಸಾಧಕರಾಗಬಹುದು.ದೇವರು ಒಂದು ಅಂಗವನ್ನು ಊನ ಮಾಡಿದ್ದರೆ ಬೇರೆ ಅಂಗಗಳಿಗೆ ಅಪರಿಮಿತವಾದ ಶಕ್ತಿಯನ್ನು ನೀಡಿರುತ್ತಾನೆಂದು ಅವರಲ್ಲಿ ಉತ್ಸಾಹ ತುಂಬಬಹುದು.

## ಗದ್ಯಪಾಠ – 4

**ಪಶ್ಚಿಮ ಘಟ್ಟಗಳ ಪತನ** **ನಾಗೇಶ ಹೆಗಡೆ**

1. **ಪಶ್ಚಿಮ ಘಟ್ಟಗಳಿಂದ ಉತ್ಪನ್ನಗಳು ನಮ್ಮ ದಿನನಿತ್ಯದ ಬದುಕಿಗೆ ಹೇಗೆ ಸಹಕಾರಿಯಾಗಿವೆ?**
ಪಶ್ಚಿಮ ಘಟ್ಟಗಳಿಂದ ಹರಿದು ಬರುವ ನದಿ ವಿದ್ಯುತ್ ದೀಪದ ಬೆಳಕನ್ನು ಹರಿಸುತ್ತದೆ. ಹೊರಗೆ ಸುರಿಯುವ ಜಡಿ ಮಳೆ, ತೇವ ತುಂಬಿದ ಗಾಳಿಗೆ ಪಶ್ಚಿಮ ಘಟ್ಟಗಳೇ ಕಾರಣ. ಕಾಫಿಪುಡಿ, ಸ್ಟೀಲ್ ಲೋಟಕ್ಕೆ ಬಳಸಿರುವ ಖನಿಜ, ಲವಂಗ, ಏಲಕ್ಕಿ ಮಿಶ್ರಿತ ಸುವಾಸನೆ ಅಡಿಕೆಪುಡಿ, ಬೆತ್ತದ ಕುರ್ಚಿ, ಬಿದಿರಿನ ಕಾಗದ ಇವೆಲ್ಲ ಪಶ್ಚಿಮ ಘಟ್ಟಗಳ ಉತ್ಪನ್ನಗಳೇ ಆಗಿ ನಮ್ಮ ದಿನನಿತ್ಯದ ಬದುಕಿಗೆ ಸಹಕಾರಿಯಾಗಿವೆ.
2. **ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದುದರ ಪರಿಣಾಮವೇನು?**
ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದ ಪರಿಣಾಮವಾಗಿ ವಿದ್ಯುತ್ ಕಡಿತ ಉಂಟಾಗುತ್ತಿದೆ. ಹವಾಮಾನದಲ್ಲಿ ಏರುಪೇರು, ಅತಿವೃಷ್ಟಿ, ಭೂಕುಸಿತ, ಪ್ರವಾಹ ಪೀಡೆ, ನೀರಿನ ಅಭಾವ, ಸಾಂಕ್ರಾಮಿಕ ರೋಗ ಈ ಎಲ್ಲಾ ಅಧ್ವಾನಗಳಿಗೆ ಪಶ್ಚಿಮಘಟ್ಟಗಳು ವಿನಾಶವಾಗುತ್ತಿರುವುದೇ ಕಾರಣವಾಗಿದೆ.
3. **ಪಶ್ಚಿಮ ಘಟ್ಟದ ನೆಲದ ನಿಸರ್ಗ ನಿರ್ಮಿತ ಸಂಗ್ರಹಾಲಯದಲ್ಲಿ ಇರುವುದೇನು?**
ಪಶ್ಚಿಮ ಘಟ್ಟದ ನೆಲದ ನಿಸರ್ಗನಿರ್ಮಿತ ಸಂಗ್ರಹಾಲಯದಲ್ಲಿ ತಾಮ್ರ, ನಿಕ್ಕಲ್, ಮ್ಯಾಂಗನೀಸ್, ಕಬ್ಬಿಣ, ಬಾಕ್ಸಾಯಿಟ್, ಯುರೇನಿಯಂ, ಗ್ರಾಫಾಯಿಟ್, ಕ್ರೋಮಾಯಿಟ್ ಖನಿಜಗಳ ಶೇಖರಣೆ, ನೀರಿನಲ್ಲಿ ತೇಲಬಲ್ಲ ಲಾವಾಬಂಡೆಗಳು, ಬಿಲ್ಲಿನಂತೆ ಬಾಗಬಲ್ಲ ಮರಳು ಕಲ್ಲುಗಳು, ವಜ್ರದಂತೆ ಮಿರುಗುವ ಅಮೆಥಿಸ್ಟ್ ಹರಳುಗಳು, ಮೇಣದಂತೆ ಕರಗುವ ಝಿಯೋಲೈಟ್ ಖನಿಜಗಳ ನಿಸರ್ಗನಿರ್ಮಿತ ಸಂಗ್ರಹಾಲಯವಾಗಿದೆ.

4. **ಪ್ರಕೃತಿಯು ಮಾನವನಿಗೆ ತನ್ನ ಪ್ರತಿಭಟನೆಯನ್ನು ಹೇಗೆ ತೋರಿದೆ?**
ಅರಣ್ಯಗಳ ಎಡೆಬಿಡದ ಬಳಕೆಯಿಂದಾಗಿ ಭೂಮಿಯ ಮೇಲಿನ ಮಣ್ಣಿನ ಕವಚ ತೊಳೆದುಹೋಗುತ್ತಿದೆ.ಸರೋವರ, ನದಿ, ಒಡ್ಡು, ಅಣೆಕಟ್ಟುಗಳಲ್ಲಿ ಹೂಳು ತುಂಬಿ ನೀರಿನ ನಿಕ್ಷೇಪ ಖಾಲಿಯಾಗುತ್ತಿದೆ.ಪ್ರವಾಹದ ಹಾವಳಿ ಹೆಚ್ಚುತ್ತಿದೆ.ಭೂಕುಸಿತ ಅತಿಯಾಗುತ್ತಿದೆ.ಅಂತರ್ಜಲ ಕಡಿಮೆಯಾಗಿದೆ.ನದಿಗಳು ಬತ್ತತೊಡಗಿವೆ. ವನ್ಯಮೃಗಗಳು ಹೊಲಗದ್ದೆಗಳಿಗೆ ದಾಳಿ ಆರಂಭಿಸಿವೆ.ಕೀಟಗಳ ಹಾವಳಿಯಿಂದ ರೋಗಗಳು ಹೆಚ್ಚಾಗುತ್ತಿವೆ. ಇದು ಪ್ರಕೃತಿ ತೋರುತ್ತಿರುವ ಪ್ರತಿಭಟನೆಯಾಗಿದೆ.

5. **ಪಶ್ಚಿಮ ಘಟ್ಟಗಳು ಯಾವುದರ ಗುಡಾಣವಾಗಿವೆ?**
ಮೇಲೆ ಆಕಾಶಕ್ಕೆ ಮುಖ ಮಾಡಿ ಬೆಳೆದ ಸದಾ ಹಸಿರಿನಿಂದ ಕೂಡಿದ ದಟ್ಟಕಾಡು, ಸೂರ್ಯನ ಸೆಕೆ ತಾಗದ ಕಾಲಡಿಯಲ್ಲಿ ಕತ್ತಲು ಕವಿದಿರುವ ಗೊಂಡಾರಣ್ಯ ಜೇನು, ಜೀರುಂಡೆ, ಕೀಟ, ಪತಂಗಗಳಿಂದ ಹಿಡಿದು ಕಾಡೆಮ್ಮೆ ಮದ್ದಾನೆಗಳವರೆಗೂ ಅಸಂಖ್ಯ ಜೀವಕೋಟಿಗಳ ಆಶ್ರಯತಾಣವಾಗಿದೆ.ಧುಮ್ಮುಕ್ಕುವ ಜಲಪಾತ, ಬಿಸಿನೀರಿನ ಬುಗ್ಗೆ, ಹಿಮಶೀತಲ ಸರೋವರ, ಸೂಜಿಮೊನೆಯಂಥ ಶಿಖರ ದುರ್ಗಮ ಪ್ರಪಾತವೇ ಮುಂತಾದ ಉಬ್ಬುತಗ್ಗಿನ ವೈಚಿತ್ರ್ಯಗಳ ಗುಡಾಣವಾಗಿದೆ.

## ಗದ್ಯಪಾಠ – 5

**ಎಲ್ಲಿ ಹೋಗ್ಯಾವೋ ಆ ಕಾಲ ಡಾ. ಗುರುರಾಜ ಕರಜಗಿ**

1. **ಅಜ್ಜ ಮಾಡಿದ ತಪ್ಪು ಯಾವುದು?**
ಲೇಖಕರ ಅಜ್ಜ ಸರ್ಕಾರದ ಕಾಯಿದೆಯನ್ನು ಮೀರಿ ಪರವಾನಿಗೆ ಇಲ್ಲದೆ ವಿಜಾಪುರದಲ್ಲಿದ್ದ ತನ್ನ ಸಂಬಂಧಿಕರಿಗೆ ಅಕ್ಕಿಯನ್ನು ತೆಗೆದುಕೊಂಡು ಹೋದರು.ಅಲ್ಲಿ ಒಳ್ಳೆಯ ಅಕ್ಕಿ ದೊರೆಯದ ಕಾರಣ ಹೆರಿಗೆಯಾಗಿದ್ದ ತಮ್ಮ ಸಂಬಂಧಿಕರಿಗೆ ನೀಡಲು ಹೋದುದು ಅಜ್ಜ ಮಾಡಿದ ತಪ್ಪಾಗಿತ್ತು.

2. **"ತಪ್ಪಾತರೀ ಸಾಹೇಬರ" ಎಂದು ಅಜ್ಜ ಹೇಳಿದ್ದು ಏಕೆ?**
ಅಜ್ಜ ಕಾಯಿದೆಯನ್ನು ಮೀರಿ ಅಕ್ಕಿಯನ್ನು ರೈಲಿನಲ್ಲಿ ವಿಜಾಪುರಕ್ಕೆ ತಂದದ್ದು ಪೋಲೀಸರಿಗೆ ಹೇಗೋ ತಿಳಿದಿರಬಹುದೆಂದು ಭಾವಿಸಿ ಅಪರಾಧಿ ಮನೋಭಾವದಿಂದ ಕೈಮುಗಿದು "ತಪ್ಪಾತರೀ ಸಾಹೇಬರ" ಎಂದು ಅಜ್ಜ ಪೊಲೀಸ್ ಸಾಹೇಬರಿಗೆ ಹೇಳಿದರು.

3. **"ಇನ್ನೂ ಹೊಡೀರಿ ಸಾರ್" ಎಂದು ಪೊಲೀಸ್ ಅಧಿಕಾರಿ ಹೇಳಿದುದೇಕೆ?**
ಪೊಲೀಸ್ ಅಧಿಕಾರಿ ಭೀಮ ಅಜ್ಜನನ್ನು ನೋಡಿ "ಗುರುಗಳೇ ನಾನು ಮುರುಗೋಡದ ಭೀಮ್ಯಾ, ಮುಳವಾಡದಾಗ ನಿಮ್ಮ ಮನ್ಯಾಗಿದ್ದು ಕಲೀತಿದ್ದೆನಲ್ಲಾ" ಎಂದ ಕೂಡಲೇ ಅಜ್ಜನ ಕೈಕೆಳಗಿಳಿದು, ಬಲಗೈ ಸಾಹೇಬರಿಗೆ ಕಪಾಲ ಮೋಕ್ಷ ಮಾಡಿ "ಎಲಾ ಮಗನ, ಭೀಮ್ಯಾ ಪೊಲೀಸ್ ಆಗ್ಯೇನೋ?"ಎಂದರು ಆಗ ಅಲ್ಲಿದ್ದವರೆಲ್ಲರಿಗೂ ಗಾಬರಿಯಾಯಿತು.ಆ ಅಧಿಕಾರಿ ಎಲ್ಲಿ ಅಜ್ಜನಿಗೆ ಹೊಡೆದು ಬಿಡುತ್ತಾರೊ ಎಂದು ಆದರೆ ಇದಕ್ಕೆ ಬದಲಾಗಿ ಆ ಅಧಿಕಾರಿ ಇನ್ನೂ ಹೊಡೀರಿ ಸಾರ್ ಎಂದು ಹೇಳಿದನು.ಆ ಅಧಿಕಾರಿಯ ಕೃತಜ್ಞತಾ ಭಾವವನ್ನು ಇಲ್ಲಿ ಕಾಣಬಹುದು.

4. **"ಎಲ್ಲಿ ಹೋಗ್ಯವೋ ಗೆಳೆಯ ಆ ಕಾಲ" ಎಂಬ ಮಾತು ಲೇಖಕರಿಗೆ ನೆನಪಾಗಲು ಕಾರಣವೇನು?**
ಪೊಲೀಸ್ ಅಧಿಕಾರಿಯಾಆಗಿದ್ದ ಭೀಮ ಅಜ್ಜ ಮಾಡಿದ ಉಪಕಾರವನ್ನು ಸ್ಮರಿಸಿಕೊಂಡು "ನೀವು ನನ್ನನ್ನು ನಿಮ್ಮ ಮನೆಯಲ್ಲಿ ಉಳಿಸಿಕೊಂಡು ಶಾಲೆಗೆ ಕಳುಹಿಸದೆ ಇದ್ದರೆ ನಾನು ಸಹ ನನ್ನ ಅಪ್ಪನಂಗೆ ಕಸಗುಡಿಸುತ್ತಿದ್ದೆ.ನನ್ನ ಮೈಮೇಲಿನ ಚರ್ಮ ಸುಲಿದು ನಿಮ್ಮ ಕಾಲಿಗೆ ಚಪ್ಪಲಿ ಮಾಡಿದರೂ ನಿಮ್ಮ ಋಣ ತೀರುವುದಿಲ್ಲ" ಎಂದು ನಮಸ್ಕರಿಸಿದರು.ಇದನ್ನು ಲೇಖಕರು ನೋಡುತ್ತಾ ನಿಂತಿದ್ದರು.ಒಂದೆಡೆ ಕೃತಜ್ಞನಾದ ವಿದ್ಯಾರ್ಥಿ; ಇನ್ನೊಂದೆಡೆಗೆ ಕೃತಾರ್ಥನಾದ ಗುರು, ಇಬ್ಬರೂ ಅಳುತ್ತ ಒಬ್ಬರನ್ನೊಬ್ಬರು ಅಪ್ಪಿಕೊಂಡರು.ಆಗ ಲೇಖಕರು ಬೇಂದ್ರೆಯವರ ಈ ಮಾತನ್ನು ನೆನಪಿಸಿಕೊಂಡರು.

5. **ಅಜ್ಜನ ಆದರ್ಶ ಗುಣ ಯಾವುದು?**
ಬಡವಿದ್ಯಾರ್ಥಿಯಾಗಿದ್ದ ಭೀಮನನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಅವನನ್ನು ಶಾಲೆಗೆ ಕಳುಹಿಸಿ ವಿದ್ಯಾವಂತನನ್ನಾಗಿ ಮಾಡಿದರು.ಅವನಿಂದ ಯಾವುದೇ ಪ್ರತಿಫಲವನ್ನು ಬಯಸಲಿಲ್ಲ. ಅಂತೆಯೇ ತಮ್ಮ ಸಂಬಂಧಿಕರಲ್ಲಿ ಒಬ್ಬರಿಗೆ ಅಕ್ಕಿಯ ಅವಶ್ಯಕತೆ ಉಂಟಾದಾಗ ಕಾಯಿದೆಯನ್ನು ಮೀರಿ ಹೃದಯದಲ್ಲಿದ್ದ ಪ್ರೀತಿಯಿಂದ ಅದನ್ನು ತೆಗೆದುಕೊಂಡು ಹೋದರು.ಅಜ್ಜನಿಗೆ ಇನ್ನೊಬ್ಬರ ಕಷ್ಟಕ್ಕೆ ಸ್ಪಂದಿಸುವ ಅವರಿಗೆ ಸಹಾಯ ಮಾಡುವ ವಿಶೇಷ ಗುಣವಿತ್ತು.

## ಗದ್ಯಪಾಠ – 6

**ಶಿಷ್ಯವತ್ಸಲ ರಾಮನ್** **ಬಿ.ಪಿ. ರಾಧಾಕೃಷ್ಣ**

1. **ರಾಮನ್ ಅವರು ಯಾರೊಬ್ಬರ ಶಿಫಾರಸ್ಸು ನಂಬಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ ಏಕೆ?**
ರಾಮನ್ ಅವರು ತಮ್ಮ ಬಳಿ ಶಿಷ್ಯವೃತ್ತಿಯನ್ನು ಕೈಗೊಳ್ಳಲು ಬಂದವರನ್ನು ಕಠಿಣ ಶಿಕ್ಷೆಗೆ ಒಳಪಡಿಸುತ್ತಿದ್ದರು.ಅವರಿಗೆ ವಿದ್ಯಾರ್ಥಿಯ ಅಂಕ ಮುಖ್ಯವಾಗಿರಲಿಲ್ಲ. ವಿದ್ಯಾರ್ಥಿಯು ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿದ್ದಾನೆಯೇ, ಅವನ ಬುದ್ಧಿ ಹರಿತವಾಗಿದೆಯೇ, ಅವನಲ್ಲಿ ಉತ್ಸಾಹವಿದೆಯೇ, ಕಷ್ಟಪಟ್ಟು ಕೆಲಸ ಮಾಡುವ ದೃಢ ನಿಶ್ಚಯ ಅವನಲ್ಲಿ ಕಾಣುವುದೇ ಎಂದೆಲ್ಲ ಪರೀಕ್ಷಿಸಿ ನೋಡಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು.
2. **ರಾಮನ್ ಅವರು ಸಂಶೋಧನೆಯ ವಿಚಾರದಲ್ಲಿ ತಮ್ಮ ಶಿಷ್ಯರಿಂದ ಏನನ್ನು ನಿರೀಕ್ಷಿಸುತ್ತಿದ್ದರು?**
ರಾಮನ್ ಅವರು ತಮ್ಮ ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ಮಟ್ಟದಲ್ಲಿರಬೇಕೆಂದು ಬಯಸುತ್ತಿದ್ದರು.ಇತರರನ್ನು ಸುಮ್ಮನೆ ಅನುಕರಿಸುವುದು ಸರ್ವಥಾ ಕೂಡದು, ಸ್ವಂತಿಕೆ ಇರಬೇಕು, ಹೊಸದಾರಿಯನ್ನು ಗುರುತಿಸಿ ಮುಂದುವರಿಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಈ ಬಗೆಯ ಸಂಶೋಧನೆಯನ್ನು ಅವರು ನಿರೀಕ್ಷಿಸುತ್ತಿದ್ದರು
3. **ರಾಮನ್ ಅವರು ಶಿಷ್ಯರ ಸೆಮಿನಾರುಗಳನ್ನು ಏಕೆ ತಪ್ಪಿಸಿಕೊಳ್ಳುತ್ತಿರಲಿಲ್ಲ?**
ರಾಮನ್ ಅವರು ತಮ್ಮ ಶಿಷ್ಯರು ಯಾವ ರೀತಿ ಸಂಶೋಧನೆಯಲ್ಲಿ ಮುಂದುವರಿಯಬೇಕು ಎನ್ನುವ ಬಗ್ಗೆ ಸಲಹೆ ಕೊಡುತ್ತಿದ್ದರು.ಶಿಷ್ಯರ ಸಂದೇಹಗಳನ್ನು ಪರಿಹರಿಸುತ್ತಿದ್ದರು ಸೆಮಿನಾರ್‌ಗಳಲ್ಲಿ ಭಾಗವಹಿಸಿ ಮೈಯೆಲ್ಲ ಕಿವಿಯಾಗಿ, ಶಿಷ್ಯರು ಕೊಟ್ಟ ಪ್ರತಿ ವಿವರವನ್ನೂ ಗ್ರಹಿಸುತ್ತಿದ್ದರು.ಸಂದೇಹ ಪರಿಹಾರ ಮಾಡಲು ತಮ್ಮದೇ ಸಲಹೆಗಳನ್ನು ಕೊಡುತ್ತಿದ್ದರು.
4. **ರಾಮನ್ ಅವರು ಭೌತಶಾಸ್ತ್ರ ವಿಶಾರದರಲ್ಲದೆ ಗಣಿತಜ್ಞರೂ ಆಗಿದ್ದರು ಎಂಬುದನ್ನು ಹೇಗೆ ತಿಳಿದುಕೊಳ್ಳಬಹುದು?**
ರಾಮನ್ ಮತ್ತು ಅವರ ಶಿಷ್ಯರ ನಡುವೆ ನಡೆಯುತ್ತಿದ್ದ ವಾದ ವಿವಾದಗಳು ಹೊಸತತ್ತ್ವವನ್ನು ಹೊರಗೆಡುಹುತ್ತಿದ್ದವು.ಗಣಿತದಲ್ಲಿ ಗಣ್ಯರಾಗಿದ್ದ ರಾಮನ್‌ರ ಶಿಷ್ಯ ನರೇಂದ್ರನಾಥರೊಡನೆ ಚರ್ಚಿಸುತ್ತಾ "ನನ್ನ ಮನಸ್ಸಿಗೆ ಹಾಗೆ ತೋರುತ್ತದೆ, ಇದನ್ನೇ ಗುಣಿಸಿನೋಡು" ಎಂದರು.ಆತ ಗುಣಾಕಾರ ಮಾಡಿ, ಗಣಿತದ ಸಾಕ್ಷ್ಯವನ್ನು ಒದಗಿಸಿದಾಗ ಅವರ ಆನಂದಕ್ಕೆ ಪಾರವೇ ಇರಲಿಲ್ಲ ಇದು ಮುಂದೆ "ರಾಮನ್‌ನಾಥ್ ಸಿದ್ಧಾಂತ" ಎಂದು ಪ್ರಸಿದ್ಧಿಯಾಯಿತು.ಇದರಿಂದ ತಿಳಿಯುತ್ತದೆ ಅವರು ಒಬ್ಬ ಗಣಿತಜ್ಞರೂ ಆಗಿದ್ದರೆಂದು.

## ಗದ್ಯಪಾಠ – 7

**ನನ್ನ ಗೋಪಾಲ** **ಕುವೆಂಪು**

1. **ಮಗನು ಬೇಗನೆ ಏಳಬೇಕೆಂದು ತಾಯಿ ಬಯಸುವುದೇಕೆ?**
ತನ್ನ ಮಗನು ಬೇಗ ಎದ್ದು ಸ್ನಾನ ಮಾಡಿ ಗೋಪಾಲನ ಪೂಜೆಗೆ ಹೂವು ತರಬೇಕು. ಸರಿಯಾದ ಸಮಯಕ್ಕೆ ಶಾಲೆಗೆ ಹೋಗಬೇಕು.ಆದ್ದರಿಂದ ಬೇಗನೆ ಏಳಬೇಕೆಂದು ಗೋಪಾಲನ ತಾಯಿಯು ಬಯಸುತ್ತಾಳೆ.
2. **ತಾಯಿಯು ಜೊತೆಗಿದ್ದರೆ ಬನವೇ ಸೊಗಸು ಎಂದು ಮಗನಿಗನಿಸಿದ್ದು ಏಕೆ?**
ಗೋಪಾಲನು ಬನದ ಸೊಗಸನ್ನು ವರ್ಣಿಸುತ್ತಾ ಎಷ್ಟು ಆನಂದವಾಗಿದೆ ಆ ಬನ. ಅಲ್ಲಿ ಮಲ್ಲಿಗೆ, ಕೇದಗೆ, ಸಂಪಿಗೆ, ಪರ್ವತಬಾಳೆ ಗೋರಂಟಿಯ ಹೂಗಳು ಸಮೃದ್ಧವಾಗಿ ಅರಳಿ ಪರಿಮಳವನ್ನು ಬೀರುತ್ತವೆ.ಅವು ಸಾವಿರಾರು ಕಾಮನಬಿಲ್ಲುಗಳು ಸೇರಿ ಕುಣಿದಂತೆ ಕಾಣುತ್ತವೆ. ಹಕ್ಕಿಗಳ ಇಂಪಾದ ಗಾನ, ಸೂರ್ಯನ ಹೊಂಬೆಳಕು, ಹಸುರಾದ ಬನವೇ ಸೊಗಸೆಂದು ಭಾಸವಾಗಿ ನೀನು ಜೊತೆಗಿದ್ದರೆ ಸೊಗಸೆಂದು ಗೋಪಾಲನು ಹೇಳಿದ್ದಾನೆ.
3. **ತಾಯಿಗೆ ಬಡತನದ ನೆನಪಾದುದು ಯಾವಾಗ?**
ಗೋಪಾಲನು ತನ್ನ ತಾಯಿಗೆ ಹೊಸ ಪಂಚೆಯೊಂದನ್ನು ಕೊಡಿಸಮ್ಮಾ ಎಂದು ಕೇಳಿದನು.ನನ್ನ ಗೆಳೆಯರು ಹೊಸ ಬಟ್ಟೆಯನ್ನು ಹಾಕಿಕೊಂಡು ಬರುತ್ತಾರೆ.ಅವರು ನನ್ನನ್ನು ನೋಡಿ ಹಾಸ್ಯ ಮಾಡುತ್ತಾರೆ ಆದ್ದರಿಂದ ನನಗೊಂದು ಹೊಸ ಪಂಚೆಯನ್ನು ಕೊಡಿಸೆಂದು ಕೇಳಿದಾಗ ತಾಯಿಗೆ ತನ್ನ ಬಡತನದ ನೆನಪಾಯಿತು.
4. **ದೇವರನ್ನು ತಿಳಿಯಲು ಕಷ್ಟಪಡುವವರು ಯಾರು?**
ದೇವರನ್ನು ತಿಳಿಯಲು ಕಷ್ಟಪಡುವವರು ತಪಸ್ವಿಗಳು, ಯೋಗಿಗಳು.ತಪಸ್ವಿಗಳು ಜ್ಞಾನದ ಮೆಟ್ಟಿಲನ್ನು ಮುಟ್ಟಲು ಯುಗಗಳು ತಪಸ್ಸು ಮಾಡುವರು. ಯೋಗಿಗಳು ದೇವರನ್ನು ಕಾಣಲು ಜನುಮ ಜನುಮದಲಿ ಸಾಧನೆಯನ್ನು ಮಾಡುವರು ಆದರೆ ದೇವರನ್ನು ಕಾಣಲು ಒಲುಮೆ ಒಂದಿದ್ದರೆ ಸಾಕು.

**ಪೋಷಕ ಅಧ್ಯಯನ**

**ಜೋಯಿಸರ ಕುರ್ಚಿ (ಕಥೆ)ಬೆಳಗೋಡು ರಮೇಶ್ ಭಟ್**

1. **ಯಾವಾಗ ಜೋಯಿಸರ ಮಾತು ವೇದವಾಕ್ಯವಾಗುತ್ತಿತ್ತು?**
   ಎರಡೋ ಮೂರೋ ತಲೆಮಾರುಗಳಷ್ಟು ಹಳೆಯ ಕುರ್ಚಿಯಲ್ಲಿ ಕುಳಿತು ಜೋಯಿಸರು ಒಂದು ಮಾತನಾಡಿದರೆ ಅವರ ಮಾತು ವೇದವಾಕ್ಯವಾಗುತ್ತಿತ್ತು.ಇದು ಅವರ ಅಜ್ಜನ ತಪಸ್ಸಿನ ಫಲ, ಅವರ ವಿದ್ವತ್ತಿನ ಫಲಶ್ರುತಿಯಂತೆ ಇತ್ತು.ಇದರಿಂದಾಗಿ ಅಜ್ಜನಿಗೆ ದೊರೆತ ಗೌರವ ಅವರ ಕುರ್ಚಿಗೂ ಸಲ್ಲುತ್ತಿತ್ತು.
2. **ಕುರ್ಚಿಯ ಬಗ್ಗೆ ಜೋಯಿಸರ ಹೆಂಡತಿಗೆ ಇರುವ ಭಾವನಾತ್ಮಕ ಸಂಬಂಧ ಎಂತಹುದು?**
   ಜೋಯಿಸರ ಹೆಂಡತಿಗೆ ಆ ಕುರ್ಚಿಯ ಮೇಲೆ ಬಹಳ ನಂಬಿಕೆ, ಯಾರಾದರೂ ನಿಮಿತ್ಯ ಕೇಳಿದರೆ ಜಾತಕ ತೋರಿಸಿದರೆ, ನಾಲ್ಕು ಒಳ್ಳೆಯ ಮಾತು ಹೇಳಿದರೆ 'ಅದೆಲ್ಲ ಹಿರಿಯರ ಪುಣ್ಯ' ಎಂದು ಹೇಳಿ ಮನಸ್ಸಿನಲ್ಲಿಯೇ ಆ ಕುರ್ಚಿಗೆ ನಮಸ್ಕರಿಸುತ್ತಿದ್ದರು.ಜೋಯಿಸರನ್ನು ಬಿಟ್ಟು ಯಾರಾದರು ಆ ಕುರ್ಚಿಯ ಮೇಲೆ ಕುಳಿತರೆ ಅವರನ್ನು ಕೋಪದಿಂದ ಎಬ್ಬಿಸಿಬಿಡುತ್ತಿದ್ದರು.
3. **ಹೆಗಡೆಯವರ ಹೆಂಡತಿ ಅನ್ನಪೂರ್ಣೆ ಕೆಟ್ಟವಳು ಎನಿಸಿದ್ದು ಏಕೆ?**
   ಅನ್ನಪೂರ್ಣೆ ಹೆಗಡೆಯವರಿಗೆ ಎರಡನೇ ಹೆಂಡತಿ.ಇವಳಿಗೆ ತಮ್ಮ ಪತಿಯ ಮೊದಲನೆ ಪತ್ನಿಯ ಮಗಳನ್ನು ಕಂಡರೆ ಆಗುತ್ತಿರಲಿಲ್ಲ. ಆ ಹೆಣ್ಣು ಮಗಳಿಗೆ ಕಿರುಕುಳ ನೀಡಿ ಶಪಿಸುತ್ತಿದ್ದಳು.ಸತ್ತಿರುವ ಆ ಹೆಣ್ಣುಮಗಳ ತಾಯಿಯನ್ನು ಸಹ ಬಯ್ಯುತ್ತಿದ್ದಳು.ಇದರಿಂದಾಗಿ ಅನ್ನಪೂರ್ಣೆ ಕೆಟ್ಟವಳೆನಿಸಿದ್ದಳು.
4. **ಲೇಖಕರು ಅನ್ನಪೂರ್ಣೆಗೆ ಹೇಳಿದ ಮಾತು ಕೇವಲ ಕೌನ್ಸಿಲಿಂಗ್ ಆಗಿತ್ತು. ಹೇಗೆ?**
   ಲೇಖಕರು ಮೊದಲೇ ಅವರ ಅಕ್ಕಳಿಂದ ಅನ್ನಪೂರ್ಣೆಯ ಸಂಪೂರ್ಣ ವಿಷಯವನ್ನು ತಿಳಿದುಕೊಂಡಿದ್ದರು.ಅನ್ನಪೂರ್ಣೆಯವರ ಮನೆ ವಿಚಾರ ಏನೂ ತಿಳಿಯದಂತೆ ವರ್ತಿಸಿ ಅವರ ಮನೆಯಲ್ಲಿರುವ ಹೆಣ್ಣುಮಗಳನ್ನು ಸರಿಯಾಗಿ ನೋಡಿಕೊಂಡರೆ ಮನೆಗೆ ಬಂದಿರುವ ದರಿದ್ರವೆಲ್ಲಾ ನಿವಾರಣೆಯಾಗುವುದೆಂದು ಹೇಳಿದರು.ಅನ್ನಪೂರ್ಣೆ ಇದು ನಿಜವೆಂದು ನಂಬಿ ಆ ಹೆಣ್ಣುಮಗಳನ್ನು ಚೆನ್ನಾಗಿ ನೋಡಿಕೊಳ್ಳತೊಡಗಿದಳು.
5. **"ನನ್ನ ಪಾಲಿನ ದೇವರು ನೀವು" ಎಂದು ಅಪರಿಚಿತ ಹೆಣ್ಣೊಬ್ಬಳು ಲೇಖಕರಿಗೆ ನಮಸ್ಕರಿಸಿದ್ದೇಕೆ?**
   ಲೇಖಕರು ಹೇಳಿದ ಮಾತಿನಿಂದ ಹೆಗಡೆಯವರ ಎರಡನೆ ಹೆಂಡತಿ ಆ ಹೆಣ್ಣುಮಗಳನ್ನು ಚೆನ್ನಾಗಿ ನೋಡಿಕೊಳ್ಳತೊಡಗಿದಳು ಇದರಿಂದ ಮನೆಯಲ್ಲಿ ಹೆಗಡೆಯವರು ಮುಟ್ಟಿದ್ದೆಲ್ಲಾ ಚಿನ್ನವಾಯಿತು.ಮೊದಲನೆ ಹೆಂಡತಿ ಮಗಳಿಗೆ ಮದುವೆ ಮಾಡಿದರು ಅವಳು ಬಹಳ ಸಂತೋಷದಿಂದ ಇದ್ದಳು.ನನ್ನ ಬಾಳನ್ನು ಹಸನು ಮಾಡಿದ ಲೇಖಕರಿಗೆ ಗೌರವವನ್ನು ತೋರಿಸಲು ಕೃತಜ್ಞತೆಯಿಂದ ಆ ಹೆಣ್ಣುಮಗಳು ಅವರ ಕಾಲಿಗೆ ನಮಸ್ಕರಿಸಿದಳು.
6. **ಜೋಯಿಸರ ಕುರ್ಚಿ ನಿಜವಾಗಿಯೂ ಅಸಾಮಾನ್ಯವೇ?**
   ಜೋಯಿಸರು ಎರಡೋ ಮೂರೋ ತಲೆಮಾರುಗಳಷ್ಟು ಹಳೆಯ ಕುರ್ಚಿಯಲ್ಲಿ ಕುಳಿತು ಒಂದು ಮಾತು ಹೇಳಿದರೆ ಆಸ್ತಿಕರಿಗೆಲ್ಲ ಅದು ವೇದವಾಕ್ಯ ಆಗುತ್ತಿತ್ತು. ಇದಕ್ಕೆ ಅಲ್ಲಿನ ಸ್ಥಳಪುರಾಣ ಅಜ್ಜನ ತಪಸ್ಸು, ಅವರ ವಿದ್ವತ್ತು ಕಾರಣವಾಗಿತ್ತು.ಅವರ ಮಾತು ಬಹಳ ತೂಕದಿಂದ ಕೂಡಿರುತ್ತಿತ್ತು.ಇದರಿಂದಾಗಿ ಅಜ್ಜನಿಗೆ ಸಲ್ಲುತ್ತಿದ್ದ ಗೌರವ ಆ ಕುರ್ಚಿಗೂ ಸಲ್ಲುತ್ತಿತ್ತು ಇದು ಜನರ ನಂಬಿಕೆಯ ವಿಚಾರವಾಗಿತ್ತು.
7. **ನಿಮಿತ್ಯ ಹೇಳುವಲ್ಲಿ ಲೇಖಕರ ಜಾಣ್ಮೆಯನ್ನು ಗುರುತಿಸಿ.**
   ಲೇಖಕರಿಗೆ ಕುರ್ಚಿಯ ಮೇಲೆ ಕುಳಿತು ನಿಮಿತ್ಯ ಹೇಳುವ ಅವಕಾಶ ದೊರೆಯಿತು.ಮಲೆನಾಡಿನ ಕಡೆ ಕೆಲವರಿಗೆ ನಿಮಿತ್ಯ ಹೇಳುವುದು ಅವರ ಮನೆತನದಿಂದ ಬಂದ ರೂಢಿಯಾಗಿತ್ತು.ಲೇಖಕರು ಈ ಅವಕಾಶವನ್ನು ಬಳಸಿಕೊಂಡು ಬಹಳ ಜಾಣ್ಮೆಯಿಂದ ಕೌನ್ಸಿಲಿಂಗ್ ಮಾಡಿ ತಮ್ಮ ಮಾತಿನ ಜಾಣ್ಮೆಯಿಂದ ಜನರನ್ನು ಬದಲಾವಣೆ ಮಾಡುತ್ತಿದ್ದರು.

1. **ಸಾವಿತ್ರಿ ತೀರಾ ಮುಗ್ಧೆ ಹೇಗೆ?**
ಹೊಚ್ಚ ಹೊಸ ಮದುಮಗಳಾಗಿದ್ದ ಸಾವಿತ್ರಿಗೆ ತೊಗರಿ ಕಡಲೆಯ ಮಧ್ಯ ವ್ಯತ್ಯಾಸ ಗೊತ್ತಿರಲಿಲ್ಲ. ಅವಳ ಅಮ್ಮನೇ ಅಡುಗೆಯ ಕೆಲಸವೆಲ್ಲವನ್ನು ಮಾಡುತ್ತಿದ್ದ ಕಾರಣ ಇವಳಿಗೆ ಅಡುಗೆ ಮನೆಯ ಕೆಲಸ ಅಷ್ಟು ಚೆನ್ನಾಗಿ ತಿಳಿದರಲಿಲ್ಲ ಇದರಿಂದಾಗಿ ಸಾವಿತ್ರಿ ತೀರಾ ಮುಗ್ಧೆಯಾಗಿದ್ದಳು.
2. **ಅನನುಭವಿ ಸಾವಿತ್ರಿ ಮೊದಲ ಬಾರಿ ಗಂಡನ ಮನೆಯಲ್ಲಿ ಅಡುಗೆ ಮಾಡಿದ್ದು ಹೇಗೆ?**
ಹಳ್ಳಿಯ ಮನೆಯ ಅಂಗಳದಲ್ಲಿ ವಿವಿಧ ತರಕಾರಿಗಳು ಬೆಳೆದಿದ್ದವು. ಸಾವಿತ್ರಿಯು ಸೌತೆಕಾಯಿಯನ್ನು ಕಿತ್ತುಕೊಂಡು ಬಂದು ಸಾಂಬಾರು ಮಾಡಲು ಪ್ರಾರಂಭಿಸಿದಳು.ಅವಳ ಅಮ್ಮನಿಗೆ ದೂರವಾಣಿ ಮಾಡಿ ಅದಕ್ಕೆ ಉಪ್ಪು, ಹುಳಿ ಎಷ್ಟು ಹಾಕಬೇಕೆಂದು ಕೇಳಿ ಬರೆದುಕೊಂಡಳು ಅದರಂತೆ ಸಾಂಬಾರು ಮಾಡಿದಳು.ಹಪ್ಪಳ, ಸಂಡಿಗೆ ಅನ್ನ ಕೋಸುಂಬರಿ ತಯಾರಿಸಿದಳು.
3. **ಎರಡನೆಯ ಬಾರಿ ದೂರವಾಣಿಯ ಕಡೆಗೆ ಸಾವಿತ್ರಿ ಓಡಿದುದು ಹೇಗೆ?**
ಸಾವಿತ್ರಿ ಈ ಮನೆಗೆ ಹೊಸಬಳು ಎಂದು ತಾವೇ ಬಡಿಸಿಕೊಂಡರು ಮಾವಯ್ಯ ಮೊದಲ ತುತ್ತನ್ನು ಸವಿದು ಕುಳಿತಿದ್ದ ಎಲ್ಲರ ಮೋರೆ ನೋಡಿದರು ಇದನ್ನು ಗಮನಿಸಿದ ಸಾವಿತ್ರಿಯ ಅತ್ತೆ ಚೂರೇ ಅನ್ನವನ್ನು ಕಲಸಿ ಮೊಸರು ಮಜ್ಜಿಗೆಯಿಂದ ಊಟ ಮುಗಿಸಿ ಸಾಂಬಾರನ್ನು ಕಲಸಿ "ತಿನ್ನದಿರಿ" ಎಂದಳು.ಯಾರೂ ಸಾಂಬಾರನ್ನು ಮುಟ್ಟದೆ, ಊಟ ಮುಗಿಸಿದ್ದನ್ನು ಗಂಡನಿಗೆ ಹೇಳಲು ಸಾವಿತ್ರಿ ಎರಡನೆಯ ಬಾರಿ ದೂರವಾಣಿ ಕಡೆಗೆ ಓಡಿದಳು.
4. **"ಅಯ್ಯೋ ಕ್ಷಮಿಸಿ" ಎಂದು ಸಾವಿತ್ರಿ ಹೇಳಿದುದು ಏಕೆ?**
ಮಧ್ಯಾಹ್ನ ಊಟಕ್ಕೆ ಬಂದ ಸಾವಿತ್ರಿಯ ಪತಿ ಬಿಕ್ಕಿಬಿಕ್ಕಿ ಅಳುತ್ತಿರುವ ತನ್ನ ಪತ್ನಿಯನ್ನು ಪ್ರೀತಿಯಿಂದ ಸಮಾಧಾನ ಮಾಡಿದನು.ಕೆಲಸಕ್ಕೆ ಹೋಗಬೇಕಾದ ಗಡಿಬಿಡಿಯಲ್ಲಿ ತಟ್ಟೆಯಲ್ಲಿದ್ದುದನ್ನು ಖಾಲಿ ಮಾಡಿದನು.ನೀನು ಊಟ ಮಾಡಮ್ಮ ಎಂದು ಹೆಂಡತಿಯನ್ನು ರಮಿಸಿದನು.ಸಾವಿತ್ರಿ ಮೊದಲ ತುತ್ತನ್ನು ಬಾಯಿಗಿಟ್ಟ ಕೂಡಲೇ ಅವಳ ಅಳು ನಿಂತು ಹೋಯಿತು.ಅವಳ ಬಾಯಿ ಕಹಿಕಹಿಯಾಯಿತು.ಆಗ ಅವಳು "ಅಯ್ಯೋ ಕ್ಷಮಿಸಿ" ಎಂದು ಹೇಳಿದಳು.
5. **"ಯಾರೇನು ಅಂದಿಲ್ಲ ಒಳ್ಳೆಯವರಿವರೆಲ್ಲ" ಸಾವಿತ್ರಿಯ ಈ ಹಿಗ್ಗಿಗೆ ಕಾರಣವೇನು?**
ಅಡುಗೆ ಮಾಡಿ ಅನುಭವ ಇಲ್ಲದ ಮುಗ್ಧ ಹುಡುಗಿಯಾದ ಸಾವಿತ್ರಿ ಸೌತೆಕಾಯಿ ಹೆಚ್ಚಿ, ಸಾಂಬಾರು ಮಾಡಿದಳು.ಆದರೆ ಆ ಸೌತೆ ತುಂಬಾ ಕಹಿಯಾಗಿತ್ತು.ಸಾವಿತ್ರಿ ಮಾಡಿದ ಸಾಂಬಾರು ಕಹಿಯಾಗಿದ್ದರೂ ಅವಳ ಅತ್ತೆ, ಮಾವ, ಗಂಡ ಎಲ್ಲರೂ ಸ್ವಲ್ಪವೇ ಸಾಂಬಾರನ್ನು ಬಳಸಿಕೊಂಡು ಮೊಸರು, ಮಜ್ಜಿಗೆಯಲ್ಲಿ ಊಟ ಮಾಡಿದರು.ಆದರೆ ಯಾರೂ ಸಹ ಸಾವಿತ್ರಿಯನ್ನು ಬಯ್ಯಲಿಲ್ಲ ಇದರಿಂದ ಸಾವಿತ್ರಿಗೆ ಬಹಳ ಸಂತೋಷವಾಗಿ ಯಾರೇನು ಅಂದಿಲ್ಲ ಇಲ್ಲಿಯವರೆಲ್ಲ ಒಳ್ಳೆಯವರೆಂದು ಸಾವಿತ್ರಿ ಮನಸ್ಸಿನಲ್ಲಿ ನಗುತ್ತ ಹಿಗ್ಗಿದಳು.

**ಪದ್ಯ – 1**

**ಅರಿವು** **ಸುಕನ್ಯಾ ಮಾರುತಿ**

1. **ಬಸವಣ್ಣನವರ ಮಹಾಮನೆಗೂ 'ಅರಿವು' ಕವಿತೆಯ ಕವಯಿತ್ರಿಯ ಮಹಾಮನೆಗೂ ಸಾಮ್ಯ ಯಾವುದು?**
   ಬಸವಣ್ಣನವರ ಮಹಾಮನೆಯಲ್ಲಿ ಶರಣರೆಲ್ಲ ಒಟ್ಟಾಗಿ ಪರಸ್ಪರ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದರು.ಎಲ್ಲರೂ ದುಡಿದು ಉಣ್ಣುತ್ತಿದ್ದರು.'ಅರಿವು' ಪದ್ಯದಲ್ಲಿ ಕವಯತ್ರಿ ತಾನೊಬ್ಬಳೇ ದುಡಿದು, ಅಡಿಗೆ ಬೇಯಿಸಿ ಎಲ್ಲರಿಗೂ ಬಡಿಸುತ್ತಿದ್ದಳು.
2. **ಅಂತರಾತ್ಮವು ಯಾವಾಗ ಕಿರುಚಿಕೊಳ್ಳುತ್ತದೆ?**
   ತನ್ನ ಮಹಾಮನೆಯ ನಿತ್ಯದಾಸೋಹಕ್ಕೆ ಬೇಯಿಸಿ, ಬಡಿಸಿ, ಆಯಾಸದಿಂದ ಮಲಗಿ ತನ್ನನ್ನು ಮುಟ್ಟಿಕೊಂಡಾಗ ತನ್ನ ಇರುವಿಕೆಯ ಅರಿವು ಆಗದೆ ಗಾಬರಿಯಾಗುತ್ತದೆ. ಆಗ ಅವಳ ಅಂತರಾತ್ಮವು ಇದ್ದೀ ನೀನು, ಇರಲೇಬೇಕೆಂದು ಕಿರುಚಿಕೊಳ್ಳುತ್ತದೆ.
3. **ಕವಯತ್ರಿಗೆ ತನ್ನ ಇರುವಿಕೆಯ ಅರಿವಾಗುವುದು ಯಾವಾಗ?**
   ಕವಯತ್ರಿ ಝುಗ್ಗನೆದ್ದು ಹೊದಿಕೆ ಎಸೆದು ಮಹಾಮನೆಯ ಎಂಜಲೆಲೆ ದಾಟಿ ಕಾಲ್ತೊಳೆದು ಮಹಾದ್ವಾರದಿಂದ ಹೊರಬಿದ್ದು, ಶುಚಿಯಾದ ರಾಜಬೀದಿಯಲ್ಲಿ ನಡೆದು ಮೈದಾನದ ವಿಶಾಲತೆ ಕಂಡಾಗ, ಆನಂದದಿಂದ ಕಣ್ಮುಚ್ಚಿದಾಗ, ಹೊರಪ್ರಪಂಚ ನೋಡಿದಾಗ ತನ್ನ ಇರುವಿಕೆಯ ಅರಿವಾಗುತ್ತದೆ.
4. **ಮಹಾಮನೆಯ ಸಣ್ಣತನ ಗೊತ್ತಾಗಿ ಹೋಗುತ್ತದೆ ಎಂದರೇನು?**
   ಮಹಾಮನೆಯನ್ನು ದಾಟಿ ವಿಶಾಲ ಪ್ರಪಂಚಕ್ಕೆ ಬಂದಾಗ ಅಂದರೆ ಸಂಪ್ರದಾಯಗಳ ಶೋಷಣೆಯ ಅಸಹಾಯಕತೆಯಿಂದ ಹೊರಬಂದಾಗ, ಕವಯತ್ರಿಗೆ ತನ್ನ ಮಹಾಮನೆಯ ಸಣ್ಣತನ ಗೊತ್ತಾಗಿ ಹೋಗುತ್ತದೆ.

**ಪದ್ಯ – 2**

**ನನ್ನ ಹಾಗೆಯೆ** **ಸು.ರಂ. ಎಕ್ಕುಂಡಿ**

1. **ಬಾಹುಬಲಲಿಯು ಬೆಟ್ಟದ ಮೇಲೆ ನಿಂತು ಏನು ಮಾಡುತ್ತಿರುವನು?**
   ಬಾಹುಬಲಿಯು ಹತ್ತುವವರ ಇಳಿಯುವವರ ನೋಡುತ್ತಿರುವನು.ಬಳಲಿದವರಿಗೆ ಸಹಾಯ ಹಸ್ತ ಚಾಚಲು ನಿಂತಿರುವನು.ನಡೆಯುವವರ, ನಿಲ್ಲುವವರ ಲೆಕ್ಕ ಮಾಡುತ್ತಿರುವನು.
2. **ಬಾಹುಬಲಿಯು ಬೆಟ್ಟದ ಮೇಲೆ ಬಂದು ನಿಲ್ಲಲು ಕಾರಣವೇನು?**
   ಬಾಹುಬಲಿಯ ಅಣ್ಣ ಭರತನು ಅಹಂಕಾರದಿಂದ ತಮ್ಮನೊಂದಿಗೆ ಸೆಣಸಿ ಸೋತನು. ಆಗ ಬಾಹುಬಲಿಯು ಗೆದ್ದ ರಾಜ್ಯವನ್ನು ಮರಳಿಸುತ್ತಾ "ನೀನು ಸೋತು ಗೆದ್ದೆ: ಅಣ್ಣ, ನಾನು ಗೆದ್ದು ಸೋತೆ" ಎಂದು ಹೇಳಿ, ಹುಟ್ಟು ಸಾವಿನ ಉತ್ತರ ತಿಳಿಯಲು ತಪಸ್ಸು ಮಾಡಲು ಬೆಟ್ಟದ ಮೇಲೆ ಬಂದು ನಿಂತನು.
3. **ಜನರು ಬಾಹುಬಲಿಯ ಬಳಿ ಬಂದು ಏನು ಮಾಡುವರು?**
   ಜನರು ದೀಪದಂತೆ ನಿಂತ ಬಾಹುಬಲಿಗೆ ನಮಿಸುವರು 'ಬಾಹುಬಲಿ ಬಾಹುಬಲಿ' ಎಂದು ಹರ್ಷೋದ್ಗಾರ ಮಾಡುವರು. ಹಾಲಿನ ಅಭಿಷೇಕ ಮಾಡಿ ಪೂಜಿಸುವರು.
4. **ಬಾಹುಬಲಿಯೂ ಮಗುವು ಒಂದೇ ಹೇಗೆ?**
   ತಾಯಿಯು ಮಗುವಿಗೆ ಎಣ್ಣೆ ಹಚ್ಚಿ ಬಾಹುಬಲಿಯ ಹಾಗೆ ನಿಲ್ಲಿಸಿ ಸ್ನಾನ ಮಾಡಿಸುವಳು, ಹಾಲಿನ ಅಭಿಷೇಕಕ್ಕೆ ಕಾಯುವ ಬಾಹುಬಲಿಯಂತೆ ತಾನು ಅವನು ಒಂದೇ ಎಂಬುದು ಮಗುವಿನ ಮುಗ್ಧ ನಂಬಿಕೆಯಾಗಿದೆ.
5. **ಬಾಹುಬಲಿಯನ್ನು ಕಂಡು ಮಗುವಿಗೆ ಆಶ್ಚರ್ಯವಾದುದೇಕೆ?**
   ಮಗುವು ಬಾಹುಬಲಿಯ ಮೂರ್ತಿಯನ್ನು ಬೆಟ್ಟದ ಮೇಲೆ ನೋಡಿತು."ಅಮ್ಮ ತನಗೂ ಸಹ ಎಣ್ಣೆ ಹಚ್ಚಿ ಹೀಗೆಯೇ ನಿಲ್ಲಿಸುತ್ತಾಳೆ ಬಾಹುಬಲಿಯು ಕೂಡ ಕಣ್ಣುತೆರೆದು ನಿಂತು ಮೊದಲ ಚೆಂಬಿಗೆ ಕಾಯುತ್ತಿರುವನೇನೋ" ಎಂದು ಆಶ್ಚರ್ಯವನ್ನು ವ್ಯಕ್ತಪಡಿಸುತ್ತದೆ.

**ಪದ್ಯ – 3**

**ಸವಿ ಚೈತ್ರ** **ಬಸವರಾಜ ಸಾದರ**

1. **ನೆಲದಮ್ಮ ನವವಧುವು ಆದುದು ಹೇಗೆ?**

ಯುಗಾದಿ ಬಂದಾಗ ಮರಗಿಡಗಳು ಹಸಿರಿನಿಂದ ಕಂಗೊಳಿಸುತ್ತವೆ. ಫಲಪುಷ್ಪಗಳಿಂದ ಸಮೃದ್ಧವಾಗಿರುತ್ತವೆ.ಬಣ್ಣಬಣ್ಣದ ಚಿತ್ರಗಳ ಹಾಗೆ ಕಳೆಯು ತುಂಬಿ ಭೂತಾಯಿ ನವವಧುವಿನಂತೆ ಶೋಭಿಸುತ್ತಾಳೆ.

2. **ಚೈತ್ರದಲ್ಲಾಗುವ ಪ್ರಕೃತಿಯ ಬದಲಾವಣೆಗಳಾವುವು**?
ಚೈತ್ರವೆಂದರೆ ವಸಂತಋತು ವಸಂತವೆಂದರೆ ಋತುಗಳ ರಾಜ ಈ ಕಾಲದಲ್ಲಿ ಗಿಡಮರಗಳು ಚಿಗುರುತ್ತವೆ ಬಣ್ಣಬಣ್ಣದ ಹೂಗಳು ಅರಳುತ್ತವೆ ಕೋಗಿಲೆಯ ಗಾನವು ಇಂಪಾಗಿ ಕೇಳಿಸುತ್ತದೆ.ಎಲ್ಲೆಡೆ ಪ್ರಕೃತಿಯಲ್ಲಿ ಹೊಸತನ ಕಾಣುತ್ತದೆ.
3. **ಎಲ್ಲರೆದೆಗಳ ತುಂಬ ಸವಿಚೈತ್ರ ಅಂದರೇನು**?
"ಯುಗಾದಿ ಹಿಂದಿನ ಕೊಳೆಯನ್ನು ತಿಕ್ಕಿ ಮೈತೊಳೆದಂತೆ ಹಿಂದಿನ ದುಃಖ, ಸಂಕಟ ಮಾಯವಾಗಿ, ನಗುನಗುವ ಮುಖಗಳೇ ಎಲ್ಲೆಲ್ಲೂ ಕಂಡುಬರುತ್ತವೆ. ಬೆಲ್ಲಬೇವಿಗೆ ಸೇರಿ ಸವಿಯಾದಂತೆ ಜೀವನದ ಕಹಿ ಕಳೆದು ಸಿಹಿ ಹೆಚ್ಚಾಗಿ ದೇಹ ಮನಸ್ಸು ಆನಂದದಿಂದ ಕೂಡಿ ಎಲ್ಲರೆದೆಗಳು ಸವಿಚೈತ್ರವಾಗುತ್ತವೆ" ಎಂದು ಕವಿಗಳು ಆಶಿಸಿದ್ದಾರೆ.

## ಪದ್ಯ – 4

**ಸದ್ದು ಮಾಡದಿರು** — **ಸಿ.ಪಿ. ಕೃಷ್ಣಕುಮಾರ್**

1. **ದೀಪದೆದುರಿಗೆ ತಿಮಿರ ಸರಿಯುವಂತೆ ಎಂದರೆ ಏನು**?
ಪ್ರಕೃತಿಯು ಯಾವುದೇ ಸದ್ದು ಗದ್ದಲವಿಲ್ಲದೆ ತನ್ನ ಕಾರ್ಯವನ್ನು ಮಾಡುವಂತೆ ಮನುಷ್ಯರಾದ ನಾವು ಶಾಂತಿಂಯಿದ ಬದುಕಿ ನಮ್ಮ ಕರ್ತವ್ಯವನ್ನು ಮುಗಿಸಬೇಕು.ಕರ್ಪೂರ ಉರಿದು ಬೆಳಕನ್ನು ನೀಡುವಂತೆ ಹೇಗೆ ದೀಪದ ಎದುರಿಗೆ ಕತ್ತಲೆ ಮಾಯವಾಗುವ ಹಾಗೆ ನಾವು ನಮ್ಮ ಪಾಲಿನ ಕೆಲಸ ಮಾಡಬೇಕು.
2. **ಕವಿ ಸಿ.ಪಿ.ಕೆ ಅವರು ಪ್ರತಿಯೊಬ್ಬರೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ**?
ಕರ್ಪೂರ ಮತ್ತು ದೀಪದ ಹಾಗೆ ಮೌನವಾಗಿ ಶಾಂತಿ ಸಹನೆ ಪ್ರೀತಿಗಳಿಂದ ನಮ್ಮ ಕರ್ತವ್ಯ ಮಾಡಿ ಮುಗಿಸಬೇಕು ಕೂಗಾಡಿ ಹಾರಾಡಿದರೆ ಯಾವ ಫಲವು ಸಿಗುವುದಿಲ್ಲ ಆದ್ದರಿಂದ ಸಿಡುಕನ್ನು ಬಿಟ್ಟು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಮಾಡಬೇಕು ಎಂದು ಕವಿ ಹೇಳುತ್ತಾರೆ.

## ಪದ್ಯ – 5

**ಗುರಿ** — **ಎಂ. ಗೋಪಾಲಕೃಷ್ಣ ಅಡಿಗ**

1. **ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು ಎಂದರೇನು**?
ಒಂದು ಬಾಣಕ್ಕೆ ಒಂದೇ ಗುರಿ ಇರುತ್ತದೆಯೇ ಹೊರತು ಹಲವು ಗುರಿಗಳು ಇರುವುದಿಲ್ಲ.ದೇಹದಲ್ಲಿ ಒಂದೇ ಆತ್ಮವಿರುತ್ತದೆಯೇ ಹೊರತು ಎರಡು ಆತ್ಮಗಳಿರುವುದಿಲ್ಲ. ಅಂತೆಯೇ ಒಂದು ಜೀವನಕ್ಕೆ ಹಲವು ಸಾಧ್ಯಗಳು ಏಕೆ?ಬದಲಾಗಿ ಒಂದೇ ಹೆಗ್ಗುರಿಗೆ ಹಗಲಿರುಳು ಹೋರಾಡಬೇಕೆಂದು ಕವಿ ಬಯಸಿದ್ದಾರೆ.
2. **ಬದುಕಿನಲ್ಲಿ ಒಂದೇ ಹೆಗ್ಗುರಿಯನ್ನೇಕೆ ಇರಿಸಿಕೊಳ್ಳಬೇಕು**?
ಜೀವನದಲ್ಲಿ ಎದುರಾಗುವ ತೊಂದರೆಗಳನ್ನು ಅತಂಕಗಳನ್ನು ನಿವಾರಿಸಿಕೊಳ್ಳಬೇಕು ಬದುಕಿನಲ್ಲಿ ಮುಂದೆ ಸಾಗಲು ಒಂದೇ ಹೆಗ್ಗುರಿ ಇರಿಸಿಕೊಳ್ಳಬೇಕು.ಅದಕ್ಕಾಗಿ ದುಡಿಯಬೇಕು.ಆಗ ಮಾತ್ರ ಗುರಿಯನ್ನು ತಲುಪಲು ಸಾಧ್ಯ.
3. **ಪರಹಿತಕೆ ಬಳಲುವುದೆ ಜೀವನವು ಹೇಗೆ**?
ಮಾನವರಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಬಾಳಬೇಕು.ಪರರಹಿತಕ್ಕಾಗಿ ಕೆಲಸ ಮಾಡಬೇಕು ಸ್ವಾರ್ಥದ ಜೊತೆ ಪರಾರ್ಥದಲ್ಲೂ ಜೀವನ ನಡೆಸಬೇಕು.ಇದನ್ನು ಬಿಟ್ಟು ಸ್ವಾರ್ಥ ಸಾಧನೆಗಾಗಿ ಬದುಕಿದರೆ ಇದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂದು ಕವಿಗಳು ತಿಳಿಸಿದ್ದಾರೆ.

## ಪದ್ಯ – 6

**ಮಗು** — **ಜಾನಪದ**

1. **ಕಂದಯ್ಯ ಅತ್ತಾರೆ ಆಗುವ ಅಚ್ಚರಿಗಳೇನು**?
ಕಂದಯ್ಯ ಅತ್ತರೆ ಬಾಳೆ, ಒಣ ಕಣಗೀಲೆ ಹೂವಿನ ಗಿಡವು ಚಿಗುರುತ್ತದೆ.ಹಾಲು ಕೊಡದಿರುವ ಬರಡು ಹಸುಗಳು ಹಾಲು ಕೊಡುತ್ತವೆ ಎಂದು ತಾಯಿಯು ಮಗುವನ್ನು ಕುರಿತು ವರ್ಣಿಸಿದ್ದಾಳೆ.
2. **ಅಪ್ಪಯ್ಯನಿಗೆ ಮಕ್ಕಳು ಹೇಗೆ ಹೆಸರು ತರುತ್ತಾರೆ**?

ಹೆಣ್ಣುಮಕ್ಕಳು ಬೇರೆಯವರ ಮನೆಯ ಸೊಸೆಯಾಗಿ ಅಲ್ಲಿ ತವರಿನ ಹೆಸರನ್ನು ಬೆಳಗುತ್ತಾಳೆ.ಗಂಡು ಮಕ್ಕಳು ಮನೆಯ ಜವಾಬ್ದಾರಿಯನ್ನು ವಹಿಸಿಕೊಂಡು ತಂದೆಯ ಹೆಸರನ್ನು ಉಳಿಸುತ್ತಾರೆ.ಮಕ್ಕಳು ಹುಟ್ಟಿದ, ಮೆಟ್ಟಿದ ಮನೆಗೆ ಕೀರ್ತಿಯನ್ನು ತರುತ್ತಾರೆ.

3. ತೊಟ್ಟಿಲದ ಶಿಶುವ ಕಂಡರೆ ಹಸಿವು ಅಡಗುವುದು ಹೇಗೆ?
ಹಸಿವಾದ ಮಕ್ಕಳಿಗೆ ಹಸಿವನ್ನು ನೀಗಿಸಲು ಹತ್ತಿರದಲ್ಲಿ ಎಲ್ಲೂ ಮನೆಗಳು ಇಲ್ಲ, ತಾಯಿಯು ಒಳಗಿಲ್ಲ, ತೊಟ್ಟಿಲಲ್ಲಿರುವ ಮಗುವು ತನ್ನ ಮುಗ್ಧ ಆಟಗಳಿಂದ ಎಲ್ಲರನ್ನು ಸೆಳೆಯುತ್ತದೆ. ಹಸಿವನ್ನು ಅಡಗಿಸುವ ಶಕ್ತಿ ಮಗುವಿಗೆ ಇರುತ್ತದೆ ಎಂದು ಜನಪದರು ಮಗುವನ್ನು ವರ್ಣಿಸಿದ್ದಾರೆ.

## ಪದ್ಯ – 7

**ವಚನಗಳು** — **ಬಸವಣ್ಣ ಸೊನ್ನಲಿಗೆಯ ಸಿದ್ದರಾಮ ಅಕ್ಕಮಹಾದೇವಿ**

1. **ಬಸವಣ್ಣನವರು ಕುರುಡು ಸಂಪ್ರದಾಯವನ್ನು ಹೇಗೆ ಲೇವಡಿ ಮಾಡಿದ್ದಾರೆ?**
ಜನರು ನೀರು ಕಂಡರೆ ಮುಳುಗುತ್ತಾರೆ ಮರವನ್ನು ಕಂಡರೆ ಸುತ್ತುತ್ತಾರೆ ಬತ್ತುವ ಜಲ ಒಣಗುವ ಮರವನ್ನು ಮೆಚ್ಚುವ ಜನ ಕೂಡಲ ಸಂಗಮನನ್ನು ತಿಳಿಯಲು ಸಾಧ್ಯವಿಲ್ಲ ಎಂದು ಕುರುಡು ಸಂಪ್ರದಾಯವನ್ನು ಬಸವಣ್ಣನವರು ಲೇವಡಿ ಮಾಡಿದ್ದಾರೆ.
2. **'ರೂಪಿದ್ದು ಫಲವೇನು ಗುಣವಿಲ್ಲದನಕ' ಈ ಮಾತಿನ ಅರ್ಥವೈಶಿಷ್ಟ್ಯವೇನು?**
ನೆರಳನ್ನು ಕೊಡದಿರುವ ಮರದಿಂದ ಯಾವ ಫಲವೂ ಇಲ್ಲ ದಯವಿಲ್ಲದವನಿಗೆ ಧನವಿದ್ದರೂ ಪ್ರಯೋಜನವಿಲ್ಲ ಹಾಲು ಕೊಡದ ಹಸುವಿದ್ದರೂ ಫಲವಿಲ್ಲ ಹಾಗೆಯೇ ಗುಣವಿಲ್ಲದ ರೂಪವೂ ಕೂಡ ವ್ಯರ್ಥ.ಮನುಷ್ಯನಿಗೆ ಗುಣ ಮುಖ್ಯವೇ ಹೊರತು, ಸುಂದರವಾದ ರೂಪವಲ್ಲ ಎಂಬುದನ್ನು ಈ ವಾಕ್ಯ ತಿಳಿಸುತ್ತದೆ.
3. **ಚೆನ್ನಮಲ್ಲಿಕಾರ್ಜುನನ ಜ್ಞಾನವಿಲ್ಲದೆ ತನಗೆ ಫಲವಿಲ್ಲವೆಂದು ಅಕ್ಕ ಏಕೆ ಹೇಳುತ್ತಾಳೆ?**
ಚೆನ್ನಮಲ್ಲಿಕಾರ್ಜುನನ ಜ್ಞಾನವಿಲ್ಲದೆ ಭಕ್ತಿ ಇಲ್ಲದೆ ಅಕ್ಕನು ಬದುಕಲು ಬಯಸುವುದಿಲ್ಲ ಹೇಗೆ ನೆರಳು ನೀಡದ ಮರ, ಧನವಿದ್ದರೂ ದಯೆ ಇರದವ, ಹಾಲು ನೀಡದ ಹಸು, ಗುಣವಿಲ್ಲದ ರೂಪ ಹಾಗೆಯೆ ಅನ್ನವಿಲ್ಲದ ತಟ್ಟೆಯಿಂದ ಪ್ರಯೋಜನವಿಲ್ಲವೋ ಹಾಗೆ ವ್ಯರ್ಥವೆಂದಿದ್ದಾರೆ.

## ಪದ್ಯ – 8

**ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ** — **ಗದುಗಿನ ನಾರಣಪ್ಪ**

1. **ಶತ್ರುಬಲಕೆ 'ನಮೋ' ಎಂಥು ಉತ್ತರನು ಏಕೆ ಹೇಳಿದನು?**
ಉತ್ತರನು ಸಮುದ್ರದ ಹಾಗೆ ವಿಶಾಲವಾದ ಕುರುಸೇನೆಯನ್ನು ಕಂಡು ಭಯಭೀತನಾಗುತ್ತಾನೆ. ಅದನ್ನು ನೋಡಿ ಅದ್ಭುತವಾದ ಭಯಂಕರವಾದ ಈ ಸೈನ್ಯದೊಡನೆ ಶಿವನು ಮಾತ್ರ ಯುದ್ಧ ಮಾಡಿ ಗೆಲ್ಲಲು ಸಾಧ್ಯ ಎಂಬುದಾಗಿ ಶತ್ರುಬಲಕೆ ನಮೋ ಎನ್ನುತ್ತಾನೆ.
2. **ಓಡಲು ಒಡೆವಂತೆ ಅರ್ಜುನನು ಮನದಲಿ ನಗಲು ಕಾರಣವೇನು?**
ಭಯಂಕರವಾದ ಕೌರವ ಸೇನೆಯನ್ನು ಕಂಡು ಹೆದರಿದ ಉತ್ತರನು ಮೆಲ್ಲನೆ ರಥದ ಹಿಂದಿನಿಂದ ಧುಮುಕಿ ಬದುಕಿದೆ ಎಂದು ಒಂದೇ ಸಮನೆ ಓಡಲು ಪ್ರಾರಂಭಿಸಿದನು ಇದನ್ನು ಕಂಡು ಅರ್ಜುನನು ಒಡಲು ಒಡೆವಂತೆ ನಗಲು ಪ್ರಾರಂಭಿಸಿದನು.
3. **'ಕಾದುನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು?**
ಅರಮನೆಯಲ್ಲಿ ಹೆಂಗಳೆಯರ ಮುಂದೆ ಕೌರವ ಸೇನೆಯನ್ನು ಸುಲಭವಾಗಿ ಸೋಲಿಸಬಲ್ಲೆ ಎಂದು ನುಡಿದು ನಾಡ ನರಿಯ ಹಾಗೆ ಯುದ್ಧಭೂಮಿಯಿಂದ ಓಡಲು ಬಿಡುವುದಿಲ್ಲ, ಈ ಪಾಪಕಾರ್ಯ ನಡೆಯಲು ನಾನು ಬಿಡೆನು ಎಂದು ಹೇಳಿದ ಅರ್ಜುನ ಕಾದು ನಡೆ ಎಂದು ಉತ್ತರನನ್ನು ಒತ್ತಾಯಿಸಿದನು.
4. **ಯುದ್ಧವನ್ನು ಮಾಡದೆಯೆ ಸುಖಪಡಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು?**
ಕೌರವ ಸೈನ್ಯಕ್ಕೆ ಹೆದರಿದ ಉತ್ತರನು ಪಾಪ ಪ್ರಾಯಶ್ಚಿತ್ತಕ್ಕಾಗಿ ಭೂಸುರರು ಅಶ್ವಮೇಧಯಾಗವನು ಭೂಮಿಯಲ್ಲೇ ಮಾಡುವುದನ್ನು ಪ್ರತ್ಯಕ್ಷವಾಗಿಯೆ ನೋಡಬಹುದು ಸುರರ ಸತಿಯರನ್ನು ನಮ್ಮ ಅರಮನೆಯ ನಾರಿಯರಲ್ಲೇ ಕಾಣಬಹುದು ಇಂದ್ರಪದವಿಗಿಂತ ಅರಮನೆಯ ಪದವಿಯೇ ಸಾಕು ಹೀಗೆ ಸುಖಪಡಬಹುದು ಎಂದು ಸಮರ್ಥಿಸಿದನು.

## ಕಂಠಪಾಠ ಪದ್ಯಗಳು

**ಪದ್ಯ – 2**

**ನನ್ನ ಹಾಗೆಯೆ** **ಸು.ರಂ. ಎಕ್ಕುಂಡಿ**

"ತಾತ,
ಎರೆವ ಮುಂಚೆ ಎಣ್ಣೆ ಹಚ್ಚಿ ಅಮ್ಮ ನನಗೆ ಹೀಗೆಯೇ
ನಿಲ್ಲಿಸುವಳು ಬಾಹುಬಲಿಯು ಕೂಡ ತನ್ನ ಹಾಗೆಯೆ
ನಿಂತು ಕಾಯುತಿರುವ ಕಣ್ಣು ತೆರೆದು ಮೊದಲ ಚೆಂಬಿಗೆ"
ಗೊಮ್ಮಟೇಶ ನಕ್ಕುಬಿಟ್ಟ ಕಂಡು ಮುಗ್ಧ ನಂಬಿಗೆ

**ಪದ್ಯ – 3**

**ಸವಿ ಚೈತ್ರ** **ಬಸವರಾಜ ಸಾದರ**

ಯುಗದ ಆದಿಯು ಬಂತು ಸೊಗದ ಸುಗ್ಗಿಯ ತಂತು
ಜಗಕೆಲ್ಲ ಹೊಸ ಕಳೆಯು ತುಂಬಿತೆಂತು!
ಬಗೆಬಗೆಯ ಬಣ್ಣಗಳ ಬರೆದ ಚಿತ್ರದ ಹಾಗೆ
ನೆಲದಮ್ಮ ನವವಧುವೆ ಆದಳಿಂತು!

ಕೊರಡ ಕೊನರಿಸಿ ತುದಿಗೆ ಮುಗಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ.

ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು
ಲಗುಬಗೆಯ ದಗದಕ್ಕೆ ಹೊರಟಂತಿದೆ
ಹೊಸತು ಜೀವೋಲ್ಲಾಸ ಚಿಗಿತ ಭಾವ ವಿಲಾಸ
ನೆಲಮುಗಿಲ ವಾಲಗವೆ ನಡೆದಂತಿದೆ

ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸವಿ ಕಹಿ ಕಳೆದು ಸಿಹಿ ಹಚ್ಚಿ
ಎಲ್ಲರೆದೆಗಳ ತುಂಬ ಸವಿ ಚೈತ್ರವು

**ಪದ್ಯ – 5**

**ಗುರಿ** **ಎಂ. ಗೋಪಾಲಕೃಷ್ಣ ಅಡಿಗ**

ಒಂದು ಬಾಣಕೆ ಗುರಿಯು ಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು

**ಪದ್ಯ – 7**

**ವಚನಗಳು** **ಬಸವಣ್ಣ ಸೊನ್ನಲಿಗೆಯ ಸಿದ್ದರಾಮ ಅಕ್ಕಮಹಾದೇವಿ**

ನೀರ ಕಂಡಲ್ಲಿ ಮುಳುಗುವರಯ್ಯ
ಮರವ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲದ ಒಣಗುವ ಮರನ
ಮೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವ — ಬಸವಣ್ಣ

ವೇಷ ಧರಿಸಿ ಫಲವೇನಯ್ಯ
ವೇಷದಂತಾಚರಣೆ ಇಲ್ಲದನ್ನಕ
ವೇದಾಂತವನೋದಿ ಫಲವೇನಯ್ಯ
ಬ್ರಹ್ಮ ತಾನಾದನ್ನಕ್ಕ
ನಾನಾ ಕೆರೆಯ ತೋಡಿ ಫಲವೇನಯ್ಯ
ಪುಣ್ಯ ತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿಕಾರ್ಜುನ — ಸೊನ್ನಲಿಗೆಯ ಸಿದ್ದರಾಮ

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ — ಅಕ್ಕಮಹಾದೇವಿ

**ಪದ್ಯ – 8**

**ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ** **ಗದುಗಿನ ನಾರಣಪ್ಪ**

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

ಮನದಲೊಡಲೊಡೆವಂತೆ ನಗುತಲ
ರ್ಜುನನು ಗಜರಿದ ನೆಲವೊ ಸಭೆಯಲಿ
ವನಜ ಮುಖಿಯರ ಮುಂದೆ ಸೊರಹಿದೆ ಬಾಯ್ಗೆ ಬಂದಂತೆ
ಅನುವರ ದೊಳೇನಾಯ್ತು ರಿಪುವಾ
ಹಿನಿಯ ನಿರಿಯದೆ ನಾಡ ನರಿಯವೊ
ಲೆನಗೆ ನೀ ಹಲುಗಿರಿಯೆ ಬಿಡುವೆನೆ ಕಾದು ನಡೆಯೆಂದ

**ಈ ಗದ್ಯಭಾಗ ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

## ಗದ್ಯಭಾಗ –1.

ಜೀವನದಲ್ಲಿ ನೋವು–ನಲಿವುಗಳು, ಸಿಹಿ–ಕಹಿಗಳು, ಎಡೆಬಿಡದೆ ಅನುಭವಕ್ಕೆ ಬರುವ ವಿಷಯಗಳು.ನಲಿವೂ, ಸಿಹಿ ಅನುಭವಗಳು ಬಂದಾಗ ನಾವು ಸಂತೋಷದಿಂದ ಉಬ್ಬಿಹೋಗುತ್ತೇವೆ. ದುಃಖ, ಕಹಿ ಅನುಭವಗಳು ಬಂದಾಗ ಕುಗ್ಗಿ ಹೋಗುತ್ತೇವೆ. ಇಂತಹ ಸಮಯದಲ್ಲಿ ನಮಗೆ ಧೈರ್ಯ, ನೋವನ್ನು ತಡೆದುಕೊಳ್ಳುವ ಸ್ಥೈರ್ಯವನ್ನು ಒದಗಿಸುವ ಅಂಶಗಳಲ್ಲಿ ಹಾಸ್ಯ ಸಂವೇದನೆಯೂ ಒಂದು.ಕನ್ನಡದಲ್ಲಿ ಹಾಸ್ಯವನ್ನು ಸೃಷ್ಟಿಸಿರುವ ಅನೇಕ ಸಾಹಿತಿಗಳಿದ್ದಾರೆ.ಅವರಲ್ಲಿ ಪ್ರಮುಖರೆಂದರೆ ನಾ. ಕಸ್ತೂರಿ, ಅ.ರಾ.ಮಿತ್ರ, ವೈ.ಎನ್.ಕೆ, ಡಾ.ಶಿವರಾಮ್, ಪಾ.ವೆಂ.ಆಚಾರ್ಯ ಬೀಚಿ ಮೊದಲಾದವರು.

**ಪ್ರಶ್ನೆಗಳು**

1. **ನಮ್ಮ ಜೀವನದಲ್ಲಿ ಅನುಭವಕ್ಕೆ ಬರುವ ವಿಷಯಗಳಾವುವು?**
2. **ನಾವು ಯಾವಾಗ ಕುಗ್ಗಿ ಹೋಗುತ್ತೇವೆ?**
3. **ನಮಗೆ ಯಾವುದು ಧೈರ್ಯ, ಸ್ಥೈರ್ಯವನ್ನು ನೀಡುತ್ತದೆ?**
4. **ಇಬ್ಬರು ಪ್ರಸಿದ್ಧ ಹಾಸ್ಯಸಾಹಿತಿಗಳ ಹೆಸರು ಬರೆಯಿರಿ.**

ಉತ್ತರಗಳು

1. ನಮ್ಮ ಜೀವನದಲ್ಲಿ ನೋವು–ನಲಿವು, ಸಿಹಿ–ಕಹಿಗಳು ಅನುಭವಕ್ಕೆ ಬರುವ ವಿಷಯಗಳಾಗಿವೆ.
2. ನಾವು ದುಃಖ, ಕಹಿ ಅನುಭವಗಳು ಬಂದಾಗ ಕುಗ್ಗಿ ಹೋಗುತ್ತೇವೆ.
3. ನಮಗೆ ಹಾಸ್ಯ ಸಂವೇದನೆಯ ಧೈರ್ಯ, ಸ್ಥೈರ್ಯವನ್ನು ನೀಡುತ್ತದೆ.
4. ಇಬ್ಬರು ಪ್ರಸಿದ್ಧ ಹಾಸ್ಯ ಸಾಹಿತಿಗಳೆಂದರೆ ನಾ. ಕಸ್ತೂರಿ, ಬೀಚಿ

## ಗದ್ಯಭಾಗ –2.

ಹುಟ್ಟಿದವರೆಲ್ಲರಿಗೂ ಸಾಧಕರಾಗುವುದಕ್ಕೆ ಅವಕಾಶವಿದ್ದರೂ ಎಲ್ಲರೂ ಸಾಧಕರಾಗುವುದಿಲ್ಲ. ಸಾಧಕರಾಗುವುದಕ್ಕೆ ಅಪಾರವಾದ ಸಾಮಾಜಿಕ ಹೊಣೆಗಾರಿಕೆ, ಪರಿಶ್ರಮ, ಭವಿಷ್ಯತ್ ಚಿಂತನೆ, ಛಲವಂತಿಕೆ ಬೇಕಾಗುತ್ತದೆ. ಸಾಧನೆಯ ಪಥದಲ್ಲಿ ಎದುರಾಗುವ ಅಡ್ಡಿಆತಂಕಗಳನ್ನು ನಿವಾರಿಸಿಕೊಳ್ಳಬೇಕು.ಇಂತಹ ಅಪರೂಪದ ಸಾಧಕರನ್ನು ಸಮಾಜ ನಿತ್ಯ ಸ್ಮರಿಸುತ್ತದೆ.ಸಾಮಾಜಿಕವಾಗಿ ಶೈಕ್ಷಣಿಕವಾಗಿ ಆಡಳಿತಾತ್ಮಕವಾಗಿ ವೈಜ್ಞಾನಿಕ ರಂಗದಲ್ಲಿ ಸಾಧನೆ ಮಾಡಿಕನ್ನಡನಾಡಿನ ಜನತೆಯ ಹೃದಯದಲ್ಲಿ ನೆಲೆಸಿರುವ ಹಿರಿಯರಲ್ಲಿಸರ್.ಎಂ.ವಿಶ್ವೇಶ್ವರಯ್ಯನವರು ಒಬ್ಬರು ಇವರು ಇಂಜಿನಿಯರಾಗಿ, ದಿವಾನರಾಗಿ ಸಮಾಜ ಅಭಿವೃದ್ಧಿಗಾಗಿ, ನಾಡಿನ ಏಳಿಗೆಗಾಗಿ ಮಾಡಿದ ಸೇವೆ ಅನುಪಮವಾದುದು.ಇವರಿಗೆ **"ಭಾರತರತ್ನ"** ಪ್ರಶಸ್ತಿಯನ್ನು ನೀಡಿ ದೇಶ ಗೌರವಿಸಿದೆ.

**ಪ್ರಶ್ನೆಗಳು**

1. **ಸಾಧಕರಾಗುವುದಕ್ಕೆ ಏನು ಬೇಕು?**
2. **ಸಾಧನಾ ಪಥದಲ್ಲಿ ನಡೆಯುವವರು ಏನನ್ನು ನಿವಾರಿಸಿಕೊಳ್ಳಬೇಕು?**
3. **ವಿಶ್ವೇಶ್ವರಯ್ಯನವರು ಯಾವ ರಂಗದಲ್ಲಿ ಸಾಧನೆ ಮಾಡಿದ್ದಾರೆ?**
4. **ವಿಶ್ವೇಶ್ವರಯ್ಯನವರಿಗೆ ಯಾವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ?**

**ಉತ್ತರಗಳು**

1. ಸಾಧಕರಾಗುವುದಕ್ಕೆ ಅಪಾರವಾದ ಸಾಮಾಜಿಕ ಹೊಣೆಗಾರಿಕೆ, ಪರಿಶ್ರಮ, ಭವಿಷ್ಯತ್ ಚಿಂತನೆ, ಛಲವಂತಿಕೆ ಬೇಕು.
2. ಸಾಧನಾ ಪಥದಲ್ಲಿ ನಡೆಯುವವರು ಎದುರಾಗುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಳ್ಳಬೇಕು.
3. ವಿಶ್ವೇಶ್ವರಯ್ಯನವರು ಸಾಮಾಜಿಕ, ಶೈಕ್ಷಣಿಕ, ಆಡಳಿತಾತ್ಮಕ, ವೈಜ್ಞಾನಿಕ ರಂಗದಲ್ಲಿ ಸಾಧನೆ ಮಾಡಿದ್ದಾರೆ.
4. ವಿಶ್ವೇಶ್ವರಯ್ಯನವರಿಗೆ **"**ಭಾರತ ರತ್ನ**"** ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

## ಗದ್ಯಭಾಗ –3.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನಕ್ಕೆ ವಿಶೇಷ ಮಹತ್ತ್ವವಿದೆ.ಧಾರ್ಮಿಕವಾಗಿ ಹಾಗೂ ಭಾಷಿಕವಾಗಿ ಹೊಸತನವನ್ನು ತರಬೇಕು. ತನ್ಮೂಲಕ ನವಸಮಾಜ ನಿರ್ಮಾಣವಾಗಬೇಕೆಂದು ಕನಸು ಕಂಡ ವಚನಕಾರರು ನಿತ್ಯ ಸ್ಮರಣೀಯರು. ಜನಸಾಮಾನ್ಯರ ಬದುಕು ಹಸನಾಗಬೇಕು. ವರ್ಗರಹಿತ ಸಮಾಜ ನಮ್ಮದಾಗಬೇಕು ಎಂದು ಹಂಬಲಿಸಿದ ಚಿಂತನೆ ಇಂದಿಗೂ ಸ್ವಾಗತಾರ್ಹ.ಜನಸಾಮಾನ್ಯರ ಆಡು ಭಾಷೆಯನ್ನು ಸಾಹಿತ್ಯದ ಗದ್ದುಗೆಗೆ ಏರಿಸಿದ ಕೀರ್ತಿಯೂ ಇವರದಾಗಿದೆ. ಆರಾಧ್ಯ ದೈವದ ಹೆಸರಿನಲ್ಲಿ ಅಂತರಂಗದ ಧ್ವನಿಯನ್ನು ಅಭಿವ್ಯಕ್ತಗೊಳಿಸಿದ್ದು ಒಂದು ವಿಶೇಷ. ಅಚ್ಚಗನ್ನಡ ಶೈಲಿ, ಭಾವಗೀತಾತ್ಮಕ ಲಯಬದ್ಧತೆ ವಚನಸಾಹಿತ್ಯದ ಮೌಲ್ಯವನ್ನು ಹೆಚ್ಚಿಸಿವೆ. ಮೌಢ್ಯವನ್ನು ಹೋಗಲಾಡಿಸಿ ಮಹಿಳೆಯರಿಗೂ ಸಮಾನ ಸ್ಥಾನಮಾನ ನೀಡಿದ್ದು ವಚನಯುಗದ ವಿಶೇಷವಾಗಿದೆ.

**ಪ್ರಶ್ನೆಗಳು**

1. **ಕನ್ನಡ ಸಾಹಿತ್ಯದಲ್ಲಿ ಯಾವ ಶತಮಾನಕ್ಕೆ ವಿಶೇಷ ಮಹತ್ತ್ವವಿದೆ?**
2. **ನವಸಮಾಜ ನಿರ್ಮಾಣವಾಗಬೇಕೆಂಬ ಕನಸು ಕಂಡವರು ಯಾರು?**
3. **ಯಾವುದು ವಚನ ಸಾಹಿತ್ಯದ ಮೌಲ್ಯವನ್ನು ಹೆಚ್ಚಿಸಿದೆ?**
4. **ವಚನಯುಗದ ವಿಶೇಷತೆ ಏನು?**

**ಉತ್ತರಗಳು**

1. ಕನ್ನಡ ಸಾಹಿತ್ಯದಲ್ಲಿ ಹನ್ನೆರಡನೆಯ ಶತಮಾನಕ್ಕೆ ವಿಶೇಷ ಮಹತ್ತ್ವವಿದೆ.
2. ವಚನಕಾರರು ನವಸಮಾಜ ನಿರ್ಮಾಣದ ಕನಸು ಕಂಡರು.
3. ಅಚ್ಚಗನ್ನಡ ಶೈಲಿ, ಭಾವಗೀತಾತ್ಮಕ ಲಯಬದ್ಧತೆ ವಚನಸಾಹಿತ್ಯದ ಮೌಲ್ಯವನ್ನು ಹೆಚ್ಚಿಸಿದೆ.
4. ಮೌಢ್ಯವನ್ನು ಹೋಗಲಾಡಿಸಿ ಮಹಿಳೆಯರಿಗೂ ಸಮಾನ ಸ್ಥಾನಮಾನ ನೀಡಿದ್ದು ವಚನಯುಗದ ವಿಶೇಷತೆಯಾಗಿದೆ.

## ಗದ್ಯಭಾಗ –4.

ಕಬೀರ್ ವೃತ್ತಿಯಿಂದ ನೇಕಾರನಾಗಿದ್ದ.ಒಂದು ಮುಸಲ್ಮಾನ ಕುಟುಂಬದಲ್ಲಿ ಹುಟ್ಟಿದನು.ಜಾತಿ ಪದ್ಧತಿ, ಮೂರ್ತಿಪೂಜೆ, ತೀರ್ಥಯಾತ್ರೆ, ಉಪವಾಸ ವ್ರತ, ಹರಕೆ ಹೊರುವುದು. ಈ ಮೊದಲಾದ ಆಚರಣೆಗಳನ್ನು ಕಬೀರ್ ತಿರಸ್ಕರಿಸಿದನು.ನಾನು ಅಲ್ಲಾ ಮತ್ತು ರಾಮನ ಮಗ ಎಂದು ಅವನು ಘೋಷಿಸಿಕೊಂಡನು.ಹಿಂದೂ ಮುಸಲ್ಮಾನರ ಕಲಹಗಳನ್ನು ಕಂಡು ಕಬೀರ್ ಬೇಸರ ಪಡುತ್ತಿದ್ದ."ಹಿಂದೂಗಳು" ರಾಮ ಎನ್ನುತ್ತಾರೆ.ಮುಸಲ್ಮಾನರು 'ರಹೀಮ' ಎನ್ನುತ್ತಾರೆ.ಆದರೆ ಪರಸ್ಪರ ಹೋರಾಡಿ ಕೊಲೆಗಳನ್ನು ಮಾಡುತ್ತಾರೆ.ಸತ್ಯ ಯಾರಿಗೂ ತಿಳಿದಿಲ್ಲ ಎಂದು ಕಬೀರ್ ವಿಷಾದಿಸಿದ.ಒಳ್ಳೆಯ ಹಾಡುಗಾರನೂ, ಕವಿಯೂ ಆಗಿದ್ದ. "ಕಬೀರ್ ದೋಹಾ"ಗಳೆಂದು ಕರೆಯಲ್ಪಡುವ ದ್ವಿಪದಿಗಳನ್ನು ರಚಿಸಿದ್ದಾನೆ. ಕಬೀರನ ಅನುಯಾಯಿಗಳನ್ನು ಕಬೀರ್ ಪಂಥಿಗಳು ಅಥವಾ "ಕಬೀರ್ ಮಾರ್ಗಿ"ಗಳು ಎನ್ನುತ್ತಾರೆ.

ಪ್ರಶ್ನೆಗಳು:

1. **ಕಬೀರ್ ವೃತ್ತಿ ಯಾವುದು?**
2. **ಕಬೀರ್ ಏನನ್ನು ತಿರಸ್ಕರಿಸಿದನು?**
3. **ಕಬೀರ್ ಏನೆಂದು ಘೋಷಿಸಿಕೊಂಡನು?**
4. **ಅವನ ಅನುಯಾಯಿಗಳನ್ನು ಏನೆಂದು ಕರೆಯುತ್ತಾರೆ?**

**ಉತ್ತರಗಳು:**

1. ಕಬೀರ್ ವೃತ್ತಿಯಿಂದ ನೇಕಾರನಾಗಿದ್ದ.
2. ಕಬೀರ್ ಜಾತಿಪದ್ಧತಿ, ಮೂರ್ತಿಪೂಜೆ, ತೀರ್ಥಯಾತ್ರೆ, ಉಪವಾಸ ಹರಕೆ ಹೊರುವುದು ವ್ರತ ಇತ್ಯಾದಿಗಳನ್ನೆಲ್ಲಾ ತಿರಸ್ಕರಿಸಿದನು.
3. ಕಬೀರ್ ತಾನು ಅಲ್ಲಾ ಮತ್ತು ರಾಮನ ಮಗನೆಂದು ಘೋಷಿಸಿಕೊಂಡನು.
4. ಅವನ ಅನುಯಾಯಿಗಳನ್ನು ಕಬೀರ್ ಪಂಥಿಗಳು ಅಥವಾ ಕಬೀರ್ ಮಾರ್ಗಿಗಳು ಎನ್ನುತ್ತಾರೆ.

## ಗದ್ಯಭಾಗ – 5

ಕಟ್ಟಿಗೆ ಚೂರುಗಳು ತರಗಲೆ, ಪ್ರಾಣಿಗಳ ಮಲ, ಬತ್ತದ ಹೊಟ್ಟು ಮುಂತಾದವುಗಳು ವಿಸರ್ಜಿತ ವಸುಗಳು.ಇವುಗಳನ್ನು ಸಾವಯವ ವಿಸರ್ಜಿತ ವಸ್ತುಗಳು ಎಂದು ಕರೆಯುತ್ತೇವೆ.ಈ ವಿಸರ್ಜಿತ ವಸ್ತುಗಳನ್ನು ಎರಡು ರೀತಿಯಲ್ಲಿ ಉಪಹೋಗಿಸಿ ಶಕ್ತಿ ಪಡೆಯಬಹುದು.ಕಟ್ಟಿಗೆ, ತರಗೆಲೆ, ಸಗಣಿ ಮುಂತಾದವುಗಳನ್ನು ಒಣಗಿಸಿದ ನಂತರ ಅವುಗಳನ್ನು ಉರಿಸಿ, ನೇರವಾಗಿ ಶಕ್ತಿಯನ್ನು ಪಡೆಯಬಹುದು.ಇವುಗಳನ್ನು ಮನೆಯಲ್ಲಿ ಅಡಿಗೆ ಮಾಡುವುದಕ್ಕೆ, ನೀರು ಕಾಯಿಸುವುದಕ್ಕೆ ಉಪಯೋಗಿಸಬಹುದು.ಇದಲ್ಲದೆ ವಿಸರ್ಜಿತ ವಸ್ತುಗಳನ್ನು ಕೊಳೆಯಿಸಿ, ಅವುಗಳಿಂದ ಬರುವ ಅನಿಲವನ್ನು ಸಂಗ್ರಹಿಸಲೂ ಬಹುದು. ಹಳ್ಳಿಗಳಲ್ಲಿ ಸಗಣಿಯಿಂದ ಗೋಬರ್ ಗ್ಯಾಸ್ ತಯಾರಿಸಿ ಅಡಿಗೆಗೂ ಬಳಸುತ್ತಾರೆ.

ಪ್ರಶ್ನೆಗಳು:

1. **ಸಾವಯವ ವಿಸರ್ಜಿತ ವಸ್ತುಗಳೆಂದರೇನು?**
2. **ಇವುಗಳಿಂದ ಶಕ್ತಿ (ಶಾಖ) ಪಡೆಯುವುದು ಹೇಗೆ?**
3. **ಅನಿಲವನ್ನು ಸಂಗ್ರಹಿಸುವುದು ಹೇಗೆ?**
4. **ಸಗಣಿಯಿಂದ ಏನನ್ನು ತಯಾರಿಸುತ್ತಾರೆ?**

ಉತ್ತರಗಳು:

1. ಕಟ್ಟಿಗೆ ಚೂರುಗಳು ತರಗಲೆ, ಪ್ರಾಣಿಗಳ ಮಲ, ಬತ್ತದ ಹೊಟ್ಟು ಮುಂತಾದವುಗಳು ವಿಸರ್ಜಿತ ವಸುಗಳು. ಇವುಗಳನ್ನು ಸಾವಯವ ವಿಸರ್ಜಿತ ವಸ್ತುಗಳು ಎಂದು ಕರೆಯುತ್ತೇವೆ
2. ಇವುಗಳನ್ನು ಉರುವಲಾಗಿ ನೇರವಾಗಿ ಉಪಯೋಗಿಸಬಹುದು. ಅಥವಾ ಇವುಗಳನ್ನು ಕೊಳೆಸಿ ಗೋಬರ್ ಗ್ಯಾಸ್ ತಯಾರಿಸಿ ಉಪಯೋಗಿಸುವುದು. ಈ ಎರಡೂ ರೀತಿಯಲ್ಲಿ ಶಕ್ತಿಯನ್ನು (ಶಾಖವನ್ನು) ಪಡೆಯಲುಬಹುದು.
3. ವಿಸರ್ಜಿತ ವಸ್ತುಗಳನ್ನು ಕೊಳೆಯಿಸಿ, ಅವುಗಳಿಂದ ಬರುವ ಅನಿಲವನ್ನು ಸಂಗ್ರಹಿಸಲೂ ಬಹುದು.
4. ಹಳ್ಳಿಗಳಲ್ಲಿ ಸಗಣಿಯಿಂದ ಗೋಬರ್ ಗ್ಯಾಸ್ ತಯಾರಿಸುತ್ತಾರೆ.

## ಗದ್ಯಭಾಗ – 6

ನಮ್ಮ ದೇಶದಲ್ಲಿ ಮೂಢನಂಬಿಕೆಗಳು ತುಂಬಿ ತುಳುಕುತ್ತಿವೆ. ಈ ಮೂಢನಂಬಿಕೆಗಳನ್ನು ಪ್ರತಿಪಾದಿಸುವ ವಿದ್ಯಾವಂತನು ಮೂಢನಂಬಿಕೆಯನ್ನು ಹೊಂದಿರುವ ಅವಿದ್ಯಾವಂತನಿಗಿಂತಲೂ ಹೆಚ್ಚು ಅಪಾಯಕಾರಿ.ಈ ಗುಂಪಿನಲ್ಲಿ ಪ್ರಸಿದ್ಧ ಶಿಕ್ಷಣವೇತ್ತರೂ ಇದ್ದಾರೆ ಎನ್ನುವುದು ಖಂಡನಾರ್ಹ.ಮೂಢನಂಬಿಕೆಗಳ ಬಗ್ಗೆ ತಳೆಯುವ ಉದಾಸೀನಭಾವ ಮತ್ತು ನಿಷ್ಕ್ರಿಯತೆ ಸಮಾಜಕ್ಕೆ ತುಂಬಾ ಹಾನಿಯನ್ನುಂಟು ಮಾಡುತ್ತದೆ.ಈ ರೀತಿಯ ತಟಸ್ಥ ಮನೋಭಾವ ಅರ್ಥಹೀನ ಹಾಗೂ ಅವೈಜ್ಞಾನಿಕ ವಿಚಾರಗಳಿಗೆ ಪರೋಕ್ಷವಾಗಿ ಸಮರ್ಥನೆ ಕೊಟ್ಟಂತೆ ಆಗುತ್ತದೆ.ಅಲ್ಲದೆ ಮೌನ ಸಮ್ಮತಿಯ ಲಕ್ಷಣ ಆಗಿಬಿಡಬಹುದು.

ಪ್ರಶ್ನೆಗಳು:

1. **ಸಮಾಜಕ್ಕೆ ತುಂಬಾ ಹಾನಿಯನ್ನುಂಟು ಮಾಡುವ ಅಂಶಗಳಾವುವು?**
2. **ಮೌನವಾಗಿರುವುದು ಯಾವುದರ ಲಕ್ಷಣ?**
3. **ತಟಸ್ಥ ಮನೋಭಾವವು ಯಾವುದಕ್ಕೆ ಸಮರ್ಥನೆ ಕೊಟ್ಟಂತೆ ಆಗುತ್ತದೆ?**
4. **ನಮ್ಮ ದೇಶದಲ್ಲಿ ತುಂಬಿ ತುಳುಕುತ್ತಿರುವ ಸಾಮಾಜಿಕ ಅನಿಷ್ಟ ಯಾವುದು?**
5.

**ಉತ್ತರಗಳು:**

1. ಮೂಢನಂಬಿಕೆಗಳ ಬಗ್ಗೆ ತಳೆಯುವ ಉದಾಸೀನಭಾವ ಮತ್ತು ನಿಷ್ಕ್ರಿಯತೆ ಸಮಾಜಕ್ಕೆ ತುಂಬಾ ಹಾನಿಯನ್ನುಂಟು ಮಾಡುತ್ತದೆ.
2. ಮೌನವು ಸಮ್ಮತಿಯ ಲಕ್ಷಣ
3. ತಟಸ್ಥ ಮನೋಭಾವ ಅರ್ಥಹೀನ ಹಾಗೂ ಅವೈಜ್ಞಾನಿಕ ವಿಚಾರಗಳಿಗೆ ಪರೋಕ್ಷವಾಗಿ ಸಮರ್ಥನೆ ಕೊಟ್ಟಂತೆ ಆಗುತ್ತದೆ.
4. ನಮ್ಮ ದೇಶದಲ್ಲಿ ತುಂಬಿ ತುಳುಕುತ್ತಿರುವ ಸಾಮಾಜಿಕ ಅನಿಷ್ಟ ಮೂಢನಂಬಿಕೆ ಆಗಿದೆ.

## ಗದ್ಯ ಭಾಗ – 7

ವಿಜಯನಗರ ಕಾಲದ ಅತ್ಯಂತ ಸುಂದರವಾದ ದೇವಾಲಯಗಳನ್ನು ಹಂಪಿ, ಲೇಪಾಕ್ಷಿ, ತಾಡಪತ್ರಿ ಮತ್ತಿತರ ಕಡೆಗಳಲ್ಲಿ ಕಾಣಬಹುದು. ಹಂಪಿಯ ವಿರೂಪಾಕ್ಷ ದೇವಾಲಯದ ಹೆಬ್ಬಾಗಿಲಿನ ಮೇಲೆ ವಿಜಯನಗರದ ಅರಸರು ಕಟ್ಟಿಸಿದ ಅತ್ಯಂತ ಎತ್ತರವಾದ ಗೋಪುರ ನಿಂತಿದೆ. ವಿಠಲ ದೇವಾಲಯವು ಶ್ರೇಷ್ಠ ವಾಸ್ತುಶಿಲ್ಪಕ್ಕೆ ಪ್ರಖ್ಯಾತವಾಗಿದೆ. ಬೃಹತ್ತಾದ ಮತ್ತು ಆಧಾರವಿಲ್ಲದೆ ನಿಂತಿರುವ ಉಗ್ರನರಸಿಂಹ, ಗಣೇಶ, ನಂದಿ ಮೊದಲಾದ ವಿಗ್ರಹಗಳು ಆ ಕಾಲದ ಉತ್ಕೃಷ್ಟ ಕಲೆಗಳಾಗಿವೆ.

**ಪ್ರಶ್ನೆಗಳು:**

1. **ವಿಜಯನಗರದ ಅತ್ಯಂತ ಸುಂದರ ದೇವಾಲಯಗಳನ್ನು ಎಲ್ಲಿ ಕಾಣಬಹುದು?**
2. **ಅತ್ಯಂತ ಎತ್ತರವಾದ ಗೋಪುರ ಎಲ್ಲಿ ನಿಂತಿದೆ?**
3. **ವಿಠಲ ದೇವಾಲಯವು ಯಾವುದಕ್ಕೆ ಪ್ರಸಿದ್ಧವಾಗಿದೆ?**
4. **ಆ ಕಾಲದ ಉತ್ಕೃಷ್ಟ ಕಲೆಗಳು ಯಾವುವು?**

**ಉತ್ತರಗಳು:**

1. ವಿಜಯನಗರ ಕಾಲದ ಅತ್ಯಂತ ಸುಂದರವಾದ ದೇವಾಲಯಗಳನ್ನು ಹಂಪಿ, ಲೇಪಾಕ್ಷಿ, ತಾಡಪತ್ರಿ ಮತ್ತಿತರ ಕಡೆಗಳಲ್ಲಿ ಕಾಣಬಹುದು.
2. ಹಂಪಿಯ ವಿರೂಪಾಕ್ಷ ದೇವಾಲಯದ ಹೆಬ್ಬಾಗಿಲಿನ ಮೇಲೆ ಅತ್ಯಂತ ಎತ್ತರವಾದ ಗೋಪುರ ನಿಂತಿದೆ.
3. ವಿಠಲ ದೇವಾಲಯವು ಶ್ರೇಷ್ಠ ವಾಸ್ತುಶಿಲ್ಪಕ್ಕೆ ಪ್ರಖ್ಯಾತವಾಗಿದೆ.
4. ಬೃಹತ್ತಾದ ಮತ್ತು ಆಧಾರವಿಲ್ಲದೆ ನಿಂತಿರುವ ಉಗ್ರನರಸಿಂಹ, ಗಣೇಶ, ನಂದಿ ಮೊದಲಾದ ವಿಗ್ರಹಗಳು ಆ ಕಾಲದ ಉತ್ಕೃಷ್ಟ ಕಲೆಗಳಾಗಿವೆ.

# ಪತ್ರ ಲೇಖನ

**ಮಾದರಿ ವ್ಯಾವಹಾರಿಕ ಪತ್ರ**

ಇಂದ,

________________
________________
________________
________________

ಇವರಿಗೆ,

________________
________________
________________
________________

ಮಾನ್ಯರೇ,

ವಿಷಯ : ________________________________

ವಂದನೆಗಳೊಡನೆ

ಸ್ಥಳ : ತಮ್ಮ ನಂಬುಗೆಯ

ದಿನಾಂಕ :

## ಪತ್ರಲೇಖನ

**1. ನಿಮ್ಮ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಕೋರಿ ನಿಮ್ಮ ಮುಖ್ಯಶಿಕ್ಷಕರಿಗೆ ಮನವಿ ಪತ್ರ ಬರೆಯಿರಿ.**

ಇಂದ

ಥವನೀಶ
s/oಶ್ರೀ ಗಿರೀಶ
ಬೆಟ್ಟದಪುರ
ಪಿರಿಯಾಪಟ್ಟಣ ತಾಲೂಕು
ಮೈಸೂರು ಜಿಲ್ಲೆ

ಇವರಿಗೆ

ಮಾನ್ಯ ಮುಖ್ಯ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ
ಬೆಟ್ಟದಪುರ
ಪಿರಿಯಾಪಟ್ಟಣ ತಾಲೂಕು
ಮೈಸೂರು ಜಿಲ್ಲೆ

ಮಾನ್ಯರೇ

ವಿಷಯ : ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಕೋರಿ ಮನವಿ.

ನಾನು ನಿಮ್ಮ ಶಾಲೆಯಲ್ಲಿ 2011–12 ನೇ ಸಾಲಿನಲ್ಲಿ 8 ನೇ ತರಗತಿಗೆ ದಾಖಲಾಗಿ ವ್ಯಾಸಂಗ ಮಾಡಿ 2013–14 ನೇ ಸಾಲಿನಲ್ಲಿ 10 ನೇ ತರಗತಿಯಲ್ಲಿ ತೇರ್ಗಡೆಯಾಗಿರುತ್ತೇನೆ. ನನ್ನ ಮುಂದಿನ ವಿದ್ಯಾಭ್ಯಾಸವನ್ನು ಮುಂದುವರಿಸಲು ನನಗೆ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳ ಆವಶ್ಯಕತೆ ಇರುತ್ತದೆ.ಆದ್ದರಿಂದ ದಯವಿಟ್ಟು ನನ್ನ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಸವಿನಯದಿಂದ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ.

ಸ್ಥಳ : ಬೆಟ್ಟದಪುರ
ದಿನಾಂಕ : 05–06–2014

ತಮ್ಮ ನಂಬುಗೆಯ
ಥವನೀಶ

**ಕರ್ನಾಟಕ ಸರ್ಕಾರ**
**ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,**
**ನೃಪತುಂಗ ರಸ್ತೆ, ಬೆಂಗಳೂರು – 560 001**
***ಮತ್ತು***
**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**
**ನೃಪತುಂಗ ರಸ್ತೆ, ಬೆಂಗಳೂರು.**
***ಸಹಯೋಗ***
**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,**
**ಮಲ್ಲೇಶ್ವರಂ, ಬೆಂಗಳೂರು.**

# ಪ್ರತಿಭೆ

**ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ**
**ಪ್ರಶ್ನೋತ್ತರ ಮಾಲಿಕೆ**

## ದ್ವಿತೀಯ ಭಾಷೆ ಕನ್ನಡ

**ಆಯೋಜಕರು**

**ಶ್ರೀ ಮೊಹಮ್ಮದ್ ಮೊಹಸಿನ್,**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560 001.**

**ಪರಿಕಲ್ಪನೆ**

**ಶ್ರೀಮತಿ ಜ್ಞೋಹರಾ ಜಬೀನ್ ಎಂ.**
**ನಿರ್ದೇಶಕರು,**
**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

## ಸಂಯೋಜಕರು

**ಶ್ರೀಮತಿ ಮಂಜುಳ ಆರ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,

**ಶ್ರೀ ಮರಿಗೌಡ ಬಿ.ಎನ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ನಾಗರತ್ನ ಎಚ್.**
ಉಪನ್ಯಾಸಕರು
ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ,
ಮಂಗಳೂರು.

## ಸಂಪನ್ಮೂಲ ಶಿಕ್ಷಕರು

**ಶ್ರೀ ಸಿದ್ದರಾಜಪ್ಪ ಎಸ್. ಎಂ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ನಿಜಾಮಿಯಾ
ಅಶೋಕ ರಸ್ತೆ, ಲಷ್ಕರ್ ಮೊಹಲ್ಲಾ,
ಮೈಸೂರು.

**ಶ್ರೀಮತಿ ಅನಿತ ಕುಮಾರಿ ಎಲ್.**
ಕನ್ನಡ ಭಾಷಾ ಶಿಕ್ಷಕರು
ಫಾರೂಖಿಯಾ ಬಾಲಕರ ಪ್ರೌಢಶಾಲೆ.
ತಿಲಕ್ ನಗರ, ಮೈಸೂರು.

# ಆಶಯ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014–15 ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಮುನ್ನುಡಿ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ.ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ.ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಜ್ಹೋಹರಾ ಜಬೀನ್ ಎಂ.**

**ನಿರ್ದೇಶಕರು,**

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಅದಕ್ಕಾಗಿ ನೀಡಿರುವ **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಎಂಬ ಹೊತ್ತಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.

- ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು
  ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.

- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಪ್ರೇರಣೆ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುಂತೆ ಮಾಡುವುದು.

- ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು **'ಪ್ರೇರಣೆ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರಗತಿ'** ಹಾಗೂ ಕೊನೆಯಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು **'ಪ್ರೇರಣೆ'** ಹಾಗೂ **'ಪ್ರಗತಿ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಪ್ರತಿಭೆ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.

- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.

- ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.

- **'ಪ್ರೇರಣೆ', 'ಪ್ರಗತಿ', ಹಾಗೂ 'ಪ್ರತಿಭೆ'** ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.

## ಸಂದರ್ಭದೊಡನೆ ವಿವರಿಸಿ

### ಗದ್ಯ – 1 ಒಣಮರದ ಗಿಳಿ

1. **ಇಂಥಾ ಒಣಮರದಲ್ಲಿ ಏಕೆ ವಾಸಮಾಡುತ್ತಿದ್ದೀ?**

ಈ ವಾಕ್ಯವನ್ನು ಅ.ರಾ.ಮಿತ್ರ ಬರೆದಿರುವ "ಮಹಾಭಾರತ ಪಾತ್ರ ಸಂಗತಿಗಳು" ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಇಂದ್ರನು ಗಿಳಿಗೆ ಕೇಳಿದನು.ಒಣಮರದಲ್ಲಿ ವಾಸವಾಗಿದ್ದ ಗಿಳಿಯನ್ನು ಅದರ ತತ್ವನಿಷ್ಠೆಯನ್ನು ಕಂಡು ಇಂದ್ರನು ಹೀಗೆ ಅದನ್ನು ಪ್ರಶ್ನಿಸಿದನು.ಏನಾದರೂ ವರವನ್ನು ಕೊಡಬೇಕು ಎಂದು ಯೋಚಿಸಿ ಹೀಗೆಂದು ಇಂದ್ರನು ಕೇಳಿದನು.

2. **ಮನುಷ್ಯನ ಬದುಕಿಗೆ ಈ ಸೂತ್ರ ಮಾದರಿಯಾಗಬಲ್ಲದು.**

ಈ ವಾಕ್ಯವನ್ನು ಅ.ರಾ.ಮಿತ್ರ ಬರೆದಿರುವ "ಮಹಾಭಾರತ ಪಾತ್ರ ಸಂಗತಿಗಳು" ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಇಂದ್ರನು ತನ್ನ ಮನಸ್ಸಿನಲ್ಲೇ ಅಂದುಕೊಂಡನು.ಗಿಳಿಯ ತತ್ವನಿಷ್ಠೆಯನ್ನು ಮೆಚ್ಚಿಕೊಂಡು, ಹೀಗೆ ಮನುಷ್ಯರು ಕಷ್ಟದಲ್ಲಿ ಜೊತೆಯಾಗಿರುವುದರಿಂದ ಜೀವನವು ಸುಂದರಗೊಳ್ಳುವುದು ಅಂದುಕೊಂಡು ಹೀಗೆ ಹೇಳಿದನು.

3. **"ಏನಾದರೂ ವರವನ್ನು ಕೇಳು ಕೊಡುತ್ತೇನೆ".**

ಈ ವಾಕ್ಯವನ್ನು ಅ.ರಾ.ಮಿತ್ರ ಬರೆದಿರುವ "ಮಹಾಭಾರತ ಪಾತ್ರ ಸಂಗತಿಗಳು" ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಇಂದ್ರನು ಗಿಳಿಗೆ ಹೇಳಿದನು.ಒಣಮರದಲ್ಲಿ ವಾಸವಾಗಿದ್ದ ಗಿಳಿಯನ್ನು ಅದರ ತತ್ವನಿಷ್ಠೆಯನ್ನು ಮೆಚ್ಚಿದ ಅವನು ಗಿಳಿಗೆ ಸಹಾಯ ಮಾಡಬೇಕು ಎಂದು ಯೋಚಿಸಿ ಅದನ್ನು ಕಂಡು ಇಂದ್ರನು ಹೀಗೆ ಹೇಳಿದನು.

4. **"ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ".**

ಈ ವಾಕ್ಯವನ್ನು ಅ.ರಾ.ಮಿತ್ರ ಬರೆದಿರುವ "ಮಹಾಭಾರತ ಪಾತ್ರ ಸಂಗತಿಗಳು" ಎಂಬ ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಗಿಳಿಯು ಇಂದ್ರನಿಗೆ ಹೇಳಿತು.ಇಂದ್ರನು ಗಿಳಿಯ ತತ್ವನಿಷ್ಠೆಯನ್ನು ಮೆಚ್ಚಿ ಏನಾದರೂ ವರವನ್ನು ಕೇಳು ಎಂದಾಗ ಗಿಳಿಯು ಮರದ ಪರಿಸ್ಥಿತಿಗೆ ಮರುಗಿ ಅದನ್ನು ಮೊದಲಿನಂತೆ ಮಾಡು ಎಂದು ಕಾರಣ ಕೇಳಿದ ಇಂದ್ರನಿಗೆ ಹೀಗೆ ಉತ್ತರಿಸಿತು.

### ಗದ್ಯ– 2 ರಾಹುಲ್ ದ್ರಾವಿಡ್

1. **"ಬೆಳೆಯ ಸಿರಿ ಮೊಳಕೆಯಲ್ಲಿ"**

ಈ ವಾಕ್ಯವನ್ನು 'ರಾಹುಲ್ ದ್ರಾವಿಡ್' ಎಂಬ ಸಂಪಾದಿತ ಪಾಠದಿಂದ ಆರಿಸಲಾಗಿದೆ.
ಈ ಮಾತನ್ನು ಲೇಖಕರು ಹೇಳಿದ್ದಾರೆ.ರಾಹುಲ್ ದ್ರಾವಿಡ್‌ರು ಒಬ್ಬ ನಿಷ್ಠಾವಂತ ಕರ್ನಾಟಕ ಕ್ರಿಕೆಟ್ ಆಟಗಾರರಾಗಿದ್ದರು ಅವರು ಚಿಕ್ಕವರಿರುವಾಗಲೇ ಆಟಪಾಠಗಳಲ್ಲಿ ನಡೆನುಡಿಗಳಲ್ಲಿ ಚುರುಕುತನವನ್ನು ಹೊಂದಿದ್ದರು. ಪಾಠಕ್ಕಾಗಿ ಕ್ರಿಕೆಟ್ ಆಟಕ್ಕಾಗಿ ಸಮಯವನ್ನು ಮೀಸಲಾಗಿಟ್ಟಿದ್ದರು.ಅದರಿಂದ ಮುಂದೆ ಭವಿಷ್ಯದಲ್ಲಿ ಶ್ರೇಷ್ಠ ಆಟಗಾರನೆನಿಸಿಕೊಂಡರು ಅವರ ಜೀವನಕ್ಕೆ ಈ ಮೇಲಿನ ಗಾದೆ ಮಾತು ಚೆನ್ನಾಗಿ ಒಪ್ಪುತ್ತದೆ ಎಂದು ವಿವರಿಸುವಾಗ ಈ ಮಾತು ಬಂದಿದೆ.

2. **ತಂಡಕ್ಕಾಗಿ ಅವರ ತಪಸ್ಸು**

ಈ ವಾಕ್ಯವನ್ನು 'ರಾಹುಲ್ ದ್ರಾವಿಡ್' ಎಂಬ ಸಂಪಾದಿತ ಪಾಠದಿಂದ ಆರಿಸಲಾಗಿದೆ.
ಈ ಮಾತನ್ನು ಲೇಖಕರು ಹೇಳಿದ್ದಾರೆ.ಸರ್ವಶ್ರೇಷ್ಠ ಕ್ರಿಕೆಟ್ ಆಟಗಾರರಾದ ದ್ರಾವಿಡ್‌ರ ವ್ಯಕ್ತಿತ್ವವನ್ನು ವಿವರಿಸುವಾಗ ಈ ಮಾತು ಬಂದಿದೆ.ತಂಡಕ್ಕಾಗಿ ಆಟವಾಡಬೇಕೆಂದು ಅವರ ಹಿರಿಯರು ಅವರಿಗೆ ಬೋಧಿಸಿದ್ದರು. "ದೇಶ ಮೊದಲು ದೇಶಕ್ಕಾಗಿ ಆಡು" ಎಂದು ಇದು ಅವರ ದೇಶಭಕ್ತಿಯನ್ನು ತಿಳಿಸುತ್ತದೆ.

3. **"ಅಷ್ಟು ಮಾನವ ಶ್ರಮ ವ್ಯರ್ಥವಾದಂತೆ"**

ಈ ವಾಕ್ಯವನ್ನು 'ರಾಹುಲ್ ದ್ರಾವಿಡ್' ಎಂಬ ಸಂಪಾದಿತ ಪಾಠದಿಂದ ಆರಿಸಲಾಗಿದೆ.
ಕ್ರಿಕೆಟ್ ಆಟವನ್ನು ಕುರಿತು ಹೇಳುವಾಗ ಈ ಮಾತು ಬಂದಿದೆ.ಇಂದು ಕ್ರಿಕೆಟ್ ಎಂಬುದು ಜನಪ್ರಿಯ ಆಟವಾಗಿ ಮೆರೆಯುತ್ತಿದೆ.ನೂರಾರು ರಾಷ್ಟ್ರಗಳು ಕ್ರಿಕೆಟನ್ನು ಆಡುತ್ತದೆ ಎಂದರೆ ಈ ಆಟದ ಹುಚ್ಚು ಎಂಥದ್ದು ಎಂದು ಅರ್ಥಮಾಡಿಕೊಳ್ಳಬಹುದು.ಹೀಗಿದ್ದರೂ ಈ ಆಟಕ್ಕೊಂದು ಅಪವಾದವು ಇದೆ.ಐದು ದಿನಗಳ ಆಟ ನೋಡುವುದರಿಂದ ಅಷ್ಟು ಮಾನವ ಶ್ರಮ ವ್ಯರ್ಥವಾಗುತ್ತದೆ ಎಂಬುದೆ ಈ ಟೀಕೆಯ ಹಿಂದಿರುವ ಕಾರಣ ಎನ್ನುವಾಗ ಈ ಮಾತು ಬಂದಿದೆ.

**4. "ಅದರ ಅರ್ಥ ದ್ರಾವಿಡ್ ಎಂದೂ ಔಟ್ ಆಗಿಲ್ಲ ಎಂದಲ್ಲ"**

ಈ ವಾಕ್ಯವನ್ನು 'ರಾಹುಲ್ ದ್ರಾವಿಡ್' ಎಂಬ ಸಂಪಾದಿತ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ದ್ರಾವಿಡ್‌ರವರ ಸಾಧನೆಯನ್ನು ಕುರಿತು ಹೇಳುವಾಗ ಬಂದಿದೆ.ದ್ರಾವಿಡ್ ಕಿಕೆಟ್ ಕ್ರೀಡೆಯ ಕಲಾತ್ಮಕ ಆಟಗಾರ. ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ ಅವರದು.ಅವರು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರಾಗಿದ್ದರು. ಅದರ ಅರ್ಥ ದ್ರಾವಿಡ್ ಎಂದೂ ಔಟ್ ಆಗಿಲ್ಲ ಎಂದಲ್ಲ. ಅಂತಹ ಅದ್ವಿತೀಯ ಪ್ರತಿಭಾವಂತ ಎಂಬುದು ಈ ಮಾತಿನ ಅರ್ಥವಾಗಿದೆ.

## ಗದ್ಯ– 3 ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ

**1. "ಕುರುಡಾಗಿದ್ದರೂ ಕಣ್ಣಿದ್ದವರ ಕಣ್ಣು ತೆರೆಯಿಸಿದ ಮಹಾಶಕ್ತಿ"**

ಈ ವಾಕ್ಯವನ್ನು ಗಾನಯೋಗಿ ಪಂಡಿತ ಪುಟ್ಟರಾಜಗವಾಯಿ ಎಂಬ ಸಂಪಾದಿತ ಪಾಠದಿಂದ ಆರಿಸಿದೆ.

ಈ ಮಾತನ್ನು ಪುಟ್ಟರಾಜರ ಸಾಧನೆಯನ್ನು ವಿವರಿಸುತ್ತಾ ಲೇಖಕರು ಹೇಳಿದ್ದಾರೆ.ಪುಟ್ಟರಾಜರು ಅಂಧರಾಗಿದ್ದರೂ ಕಣ್ಣಿದ್ದವರೂ ಕೂಡಾ ಸಾಧಿಸಲಾಗದ ಸಾಧನೆಯನ್ನು ಮಾಡಿದ್ದಾರೆ.ಅಂಧರಿಗೆ ಸ್ಫೂರ್ತಿಯನ್ನು ಇವರ ಜೀವನದ ಪರಿಶ್ರಮವು ತಿಳಿಸುತ್ತದೆ ಎಂದು ವಿವರಿಸುವಾಗ ಈ ಮಾತು ಬಂದಿದೆ.

**2. "ಪುಟ್ಟರಾಜ ಇನ್ನೊಮ್ಮೆ ಹುಟ್ಟಿಬಾ"**

ಈ ವಾಕ್ಯವನ್ನು ಗಾನಯೋಗಿ ಪಂಡಿತ ಪುಟ್ಟರಾಜಗವಾಯಿ ಎಂಬ ಸಂಪಾದಿತ ಪಾಠದಿಂದ ಆರಿಸಿದೆ.

ಈ ಮಾತನ್ನು ಪುಟ್ಟರಾಜರ ಸಾಧನೆಯನ್ನು ವಿವರಿಸುತ್ತಾ ಲೇಖಕರು ಹೇಳಿದ್ದಾರೆ.ಅಂಧರ ಪಾಲಿನ ದೈವವಾಗಿದ್ದ ಪುಟ್ಟರಾಜರು ನಿಧನರಾದಾಗ ಆ ವಿಷಯ ಕೇಳಿ ವೀರೇಶ್ವರ ಪುಣ್ಯಾಶ್ರಮದಲ್ಲಿ ಮಹಾಮೌನ ಕವಿಯಿತು.ಜೀವವು ಮರಳಿ ಚಲನೆಗೊಂಡಾಗ ಹೊರಟ ಉದ್ಗಾರ ಒಂದೇ ಅದೇ ಪುಟ್ಟರಾಜ ಇನ್ನೊಮ್ಮೆ ಹುಟ್ಟಿ ಬಾ ಎಂಬುದು ಎಂದು ತಿಳಿಸುವಾಗ ಈ ಮಾತು ಬಂದಿದೆ.

**3. "ಅವರ ಜನಪ್ರಿಯತೆಗೆ ಬೇರೆ ಸಾಕ್ಷಿ ಬೇಡ"**

ಈ ವಾಕ್ಯವನ್ನು ಗಾನಯೋಗಿ ಪಂಡಿತ ಪುಟ್ಟರಾಜಗವಾಯಿ ಎಂಬ ಸಂಪಾದಿತ ಪಾಠದಿಂದ ಆರಿಸಿದೆ.

ಈ ಮಾತನ್ನು ಪುಟ್ಟರಾಜರ ಸಾಧನೆಯನ್ನು ವಿವರಿಸುತ್ತಾ ಲೇಖಕರು ಹೇಳಿದ್ದಾರೆ.ಪುಟ್ಟರಾಜರು ಅಂಧರಾಗಿದ್ದರೂ ಅವರ ಸಾಧನೆಗಳನ್ನು ಗುರುತಿಸಿದ ಸರಕಾರವು ಅವರಿಗೆ ಅನೇಕ ಪ್ರಶಸ್ತಿಗಳನ್ನು ನೀಡಿ ಗೌರವಿಸಿತು.ಹಾವೇರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದರು.ಜನರು ಅವರಿಗೆ 1635 ಬಾರಿ ತುಲಾಭಾರ ನಡೆಸಿರುವುದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ ಎಂದು ವರ್ಣಿಸುವಾಗ ಈ ಮಾತು ಬಂದಿದೆ.

## ಗದ್ಯ– 4 ಪಶ್ಚಿಮ ಘಟ್ಟಗಳ ಪತನ

**1. "ಮರುಭೂಮಿಯನ್ನು ನೋಡಲು ದೂರದ ರಾಜಸ್ಥಾನಕ್ಕೆ ಹೋಗುವುದು ಬೇಡ"**

ಈ ವಾಕ್ಯವನ್ನು ನಾಗೇಶ ಹೆಗಡೆ ಬರೆದಿರುವ 'ಇರುವುದೊಂದೇ ಭೂಮಿ' ಕೃತಿಯಿಂದ ಆಯ್ದ "ಪಶ್ಚಿಮ ಘಟ್ಟಗಳ ಪತನ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ.ಪಶ್ಚಿಮ ಘಟ್ಟಗಳ ಪ್ರಾಮುಖ್ಯತೆ ಅದರ ನಾಶ ಮತ್ತು ಪರಿಣಾಮವನ್ನು ಹೀಗೆ ವಿವರಿಸಿದ್ದಾರೆ.ನಮ್ಮ ಮುಂದಿನ ಪೀಳಿಗೆಯವರು ಮರುಭೂಮಿಯನ್ನು ನೋಡಲು ದೂರದ ರಾಜಸ್ಥಾನಕ್ಕೆ ಹೋಗಬೇಕಾಗಿಲ್ಲ ಎಂದು ಲೇಖಕರು ಪರಿಸರ ನಾಶದ ಚಿತ್ರಣವನ್ನು ಮುಂದಿಟ್ಟಿದ್ದಾರೆ.

**2. "ಕಾಪಾಡಬೇಕಿದ್ದ ಮಾಲೀಕನು ತನ್ನ ನೂರು ತೋಳುಗಳಿಂದ ಕಾಡಿಗೆ ಕೊಡಲಿ ಬೀಸಿದೆ"**

ಈ ವಾಕ್ಯವನ್ನು ನಾಗೇಶ ಹೆಗಡೆ ಬರೆದಿರುವ 'ಇರುವುದೊಂದೇ ಭೂಮಿ' ಕೃತಿಯಿಂದ ಆಯ್ದ "ಪಶ್ಚಿಮ ಘಟ್ಟಗಳ ಪತನ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಪಶ್ಚಿಮ ಘಟ್ಟಗಳನ್ನು ನಿರಂತರವಾಗಿ ದೋಚುತ್ತಿರುವುದರಿಂದ ಪ್ರಕೃತಿ ವಿನಾಶವಾಗುತ್ತಿರುವುದನ್ನು ನೋಡಿ ರಕ್ಷಕರೇ ಭಕ್ಷಕರಾಗುತ್ತಿದ್ದಾರೆಂದು ಲೇಖಕರು ಹೇಳಿದ್ದಾರೆ.

**3. "ಸಹ್ಯ ಪರ್ವತವು ಈಗ ಅಸಹ್ಯ ಪರ್ವತವಾಗುತ್ತಿದೆ"**

ಈ ವಾಕ್ಯವನ್ನು ನಾಗೇಶ ಹೆಗಡೆ ಬರೆದಿರುವ 'ಇರುವುದೊಂದೇ ಭೂಮಿ' ಕೃತಿಯಿಂದ ಆಯ್ದ "ಪಶ್ಚಿಮ ಘಟ್ಟಗಳ ಪತನ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಪಶ್ಚಿಮ ಘಟ್ಟಗಳನ್ನು ನಿರಂತರವಾಗಿ ಬಳಸಿದ್ದರ ಪರಿಣಾಮವನ್ನು ಕುರಿತು ಹೇಳುವಾಗ ಈ ಮಾತು ಬಂದಿದೆ.ಸಹಸ್ರಾರು ವರ್ಷಗಳಿಂದ ವಿವಿಧ ಬಗೆಯ ಜೀವಕೋಟಿಗಳಿಗೆ ಆಶ್ರಯ ನೀಡಿದ್ದ ಈ ಸಹ್ಯ ಪರ್ವತವು ಈಗ ಅಸಹ್ಯ ಪರ್ವತವಾಗುತ್ತಿದೆ ಎಂದು ಲೇಖಕರು ಈ ಮಾತು ಹೇಳಿದ್ದಾರೆ.

**4. "ನೀರಿನ ನಿಕ್ಷೇಪ ಖಾಲಿಯಾಗುತ್ತಿದೆ"**

ಈ ವಾಕ್ಯವನ್ನು ನಾಗೇಶ ಹೆಗಡೆ ಬರೆದಿರುವ 'ಇರುವುದೊಂದೇ ಭೂಮಿ' ಕೃತಿಯಿಂದ ಆಯ್ದ "ಪಶ್ಚಿಮ ಘಟ್ಟಗಳ ಪತನ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಪಶ್ಚಿಮ ಘಟ್ಟಗಳನ್ನು ನಿರಂತರವಾಗಿ ದೋಚಿದ್ದರಿಂದ ಪರಿಸರದ ಮೇಲೆ ಆಗಿರುವ ಪರಿಣಾಮವನ್ನು ಕುರಿತು ಹೇಳುವಾಗ ಈ ಮಾತು ಬಂದಿದೆ.ಅರಣ್ಯಗಳ ಎಡೆಬಡದೆ ಬಳಕೆಯಿಂದ ಭೂಮಿಯ ಮೇಲಿನ ಮಣ್ಣಿನ ಕವಚ ತೊಳೆದುಹೋಗುತ್ತಿದೆ ಕೆರೆ, ಸರೋವರ, ನದಿ, ಒಡ್ಡು ಅಣೆಕಟ್ಟುಗಳಲ್ಲಿ ಶೀಘ್ರಗತಿಯಲ್ಲಿ ಹೂಳು ತುಂಬಿ ನೀರಿನ ನಿಕ್ಷೇಪ ಖಾಲಿಯಾಗುತ್ತಿದೆ ಎಂದು ಲೇಖಕರು ಈ ಮಾತು ಹೇಳಿದ್ದಾರೆ.

## ಗದ್ಯ– 5 ಎಲ್ಲಿ ಹೋಗ್ಯಾವೋ ಆಕಾಲ

**1. "ನನಗೂ ಅದನ್ನೇ ಮಾಡು ಅಂದ"**

ಈ ವಾಕ್ಯವನ್ನು ಡಾ.ಗುರುರಾಜ ಕರಜಗಿ ಅವರು ಬರೆದಿರುವ 'ಕರುಣಾಳು ಬಾ ಬೆಳಕೆ' ಕೃತಿಯಿಂದ ಆಯ್ದ 'ಎಲ್ಲಿ ಹೋಗ್ಯಾವೋ ಆ ಕಾಲ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಪೋಲಿಸ್ ಅಧಿಕಾರಿಯು ಬಾಲಕನಾಗಿದ್ದಾಗ ತನ್ನ ತಂದೆಯು ಹೇಳಿದ ಮಾತನ್ನು ಹೇಳಿದರು.ಲೇಖಕರ ಅಜ್ಜನು ಹಿಂದೆ ಶಿಕ್ಷಕರಾಗಿದ್ದಾಗ ಮಾಡಿದ್ದ ಸಹಾಯವನ್ನು ನೆನಪಿಸುತ್ತಾ ಪೋಲಿಸ್ ಅಧಿಕಾರಿಯು ಅವರಿಗೆ ಈ ಮೇಲಿನ ಮಾತನ್ನು ಅವನ ತಂದೆ ಹೇಳಿ ತಾನು ಕಸ ಗುಡಿಸುವವ ಮಗನಿಗೂ ಅದನ್ನೇ ಮಾಡಲು ಹೇಳಿದ್ದನ್ನು ನೆನಪಿಸಿಕೊಂಡರು.

**2. "ಅಷ್ಟು ದೊಡ್ಡ ಮನೆಯನ್ನು ನಾನು ಕಂಡಿರಲೇ ಇಲ್ಲ"**

ಈ ವಾಕ್ಯವನ್ನು ಡಾ.ಗುರುರಾಜ ಕರಜಗಿ ಅವರು ಬರೆದಿರುವ 'ಕರುಣಾಳು ಬಾ ಬೆಳಕೆ' ಕೃತಿಯಿಂದ ಆಯ್ದ 'ಎಲ್ಲಿ ಹೋಗ್ಯಾವೋ ಆ ಕಾಲ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ.ಅಜ್ಜನೊಂದಿಗೆ ಜೀಪಿನಲ್ಲಿ ಹೋದ ಅವರು ಪೋಲಿಸ್ ಸಾಹೇಬರ ದೊಡ್ಡ ಬಂಗಲೆಯ ಮುಂದೆ ಇಳಿದು ಒಳಗೆ ಹೋದರು.ಅದು ಜಿಲ್ಲಾ ಪೋಲಿಸ್ ಅಧಿಕಾರಿಯ ಬಂಗಲೆ ಅದನ್ನು ನೋಡಿ ಈ ಮೇಲಿನಂತೆ ಲೇಖಕರು ಹೇಳಿದ್ದಾರೆ.

**3. "ಅವತ್ತು ನೀವು ಹಾಂಗ ಮಾಡದಿದ್ರೆ ನಾನು ಕಸ ಗುಡಿಸ್ತಾನೆ ಇರತಿದ್ದೆ"**

ಈ ವಾಕ್ಯವನ್ನು ಡಾ.ಗುರುರಾಜ ಕರಜಗಿ ಅವರು ಬರೆದಿರುವ 'ಕರುಣಾಳು ಬಾ ಬೆಳಕೆ' ಕೃತಿಯಿಂದ ಆಯ್ದ 'ಎಲ್ಲಿ ಹೋಗ್ಯಾವೋ ಆ ಕಾಲ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಪೋಲಿಸ್ ಅಧಿಕಾರಿಯು ಅಜ್ಜನಿಗೆ ಹೇಳಿದರು.ಅಜ್ಜ ಶಿಕ್ಷಕರಾಗಿದ್ದಾಗ ಅಧಿಕಾರಿಯು ಚಿಕ್ಕಂದಿನಲ್ಲಿರುವಾಗ ಅವನನ್ನು ಕಸ ಗುಡಿಸುವುದರಿಂದ ಬಿಡಿಸಿ ಶಿಷ್ಯನಾಗಿ ಸ್ವೀಕರಿಸಿ ಓದಿಸಿ ಹಾಸ್ಟೆಲ್‌ಗೆ ಸೇರಿಸಿದ್ದರು.ಆದ್ದರಿಂದ ಆತ ಓದಿ ಪೋಲಿಸ್ ಅಧಿಕಾರಿಯಾಗಿದ್ದನು.ಅದನು ನೆನೆದು ಹೀಗೆ ಹೇಳಿದರು.ಇದು ಅವರ ಕೃತಜ್ಞತೆಯನ್ನು ತಿಳಿಸುತ್ತದೆ.

**4. "ಸಾರ್ಥಕ ಶಿಷ್ಯಕತ್ವದ ಹೆಗುರುತು ಇದು"**

ಈ ವಾಕ್ಯವನ್ನು ಡಾ.ಗುರುರಾಜ ಕರಜಗಿ ಅವರು ಬರೆದಿರುವ 'ಕರುಣಾಳು ಬಾ ಬೆಳಕೆ' ಕೃತಿಯಿಂದ ಆಯ್ದ 'ಎಲ್ಲಿ ಹೋಗ್ಯಾವೋ ಆ ಕಾಲ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ.ಕಸಗುಡಿಸುವ ಹುಡುಗನಿಗೆ ಶಿಕ್ಷಣ ಕೊಡಿಸಿ ಹಾಸ್ಟೆಲ್‌ಗೆ ಸೇರಿಸಿದರು.ಆದ್ದರಿಂದ ಆತ ಪೋಲಿಸ್ ಅಧಿಕಾರಿಯಾದರು.ಆ ಕೃತಜ್ಞತೆಯ ಭಾವದಿಂದ ಕೈಮುಗಿದು ಕಾಲಿಗೆ ಬಿದ್ದು ಕಣ್ಣೀರು ಸುರಿಸಿದರು.ಅಜ್ಜ ಮತ್ತು ಪೋಲಿಸ್ ಅಧಿಕಾರಿ ಪರಸ್ಪರ ಅಪ್ಪಿಕೊಂಡಿದ್ದ ಸಂದರ್ಭವನ್ನು ನೆನೆಯುತ್ತಾ ಇದು ಸಾರ್ಥಕ ಶಿಷ್ಯಕತ್ವದ ಹೆಗ್ಗುರುತು ಎಂದು ಲೇಖಕರು ಹೇಳಿದ್ದಾರೆ.

## ಗದ್ಯ– 6. ಶಿಷ್ಯವತ್ಸಲ ರಾಮನ್

**1. "ಇತರರನ್ನು ಸುಮ್ಮನೆ ಅನುಕರಿಸುವುದು ಸರ್ವಥಾ ಕೂಡದು"**

ಈ ವಾಕ್ಯವನ್ನು ಪುಟ್ಟಯ್ಯ ರಾಧಾಕೃಷ್ಣರವರು ಬರೆದಿರುವ 'ಸಿ.ವಿ. ರಾಮನ್' ಕೃತಿಯಿಂದ ಆಯ್ದ 'ಶಿಷ್ಯ ವತ್ಸಲ ರಾಮನ್' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ರಾಮನ್‌ರವರು ಹೇಳಿದ್ದಾರೆ.ಸಿ.ವಿ. ರಾಮನ್‌ರವರು ತಮ್ಮ ಶಿಷ್ಯರಿಂದ ಉತ್ತಮ ಮಟ್ಟದ ಸಂಶೊಧನೆ ನಡೆಯಬೇಕೆಂದು ಬಯಸುತ್ತಿದ್ದರು. ವಿಜ್ಞಾನದ ಅನ್ವೇಷಣಾ ಕಾರ್ಯದಲ್ಲಿ ನಾವೆಲ್ಲಾ ಸರಿಸಮಾನರಾದ ಕೆಲಸಗಾರರು ಸಂಶೋಧನೆಯಲ್ಲಿ ಸ್ವಂತಿಕೆ ಇರಬೇಕು. ಇತರರನ್ನು ಸುಮ್ಮನೆ ಅನುಕರಿಸುವುದು ಸರ್ವದಾ ಕೂಡದು ಎಂಬುದು ರಾಮನ್ ಅಭಿಪ್ರಾಯವಾಗಿತ್ತು.

**2. “ವಾದೇ ವಾದೇ ಜಯತೇ ತತ್ತ್ವ ಬೋಧಃ”**

ಈ ವಾಕ್ಯವನ್ನು ಪುಟ್ಟಯ್ಯ ರಾಧಾಕೃಷ್ಣರವರು ಬರೆದಿರುವ ‘ಸಿ.ವಿ. ರಾಮನ್’ ಕೃತಿಯಿಂದ ಆಯ್ದ ‘ಶಿಷ್ಯ ವತ್ಸಲ ರಾಮನ್’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತು ರಾಮನ್‌ರವರ ಚರ್ಚಾಕೂಟಗಳ ಹಿಂದಿನ ಮುಖ್ಯ ಸೂತ್ರವಾಗಿತ್ತು.ಚರ್ಚಾಕೂಟಗಳಲ್ಲಿ ನಡೆಯುವ ವಾದಗಳ ಮುಖ್ಯ ಸೂತ್ರ ವಾದ ಮಾಡುತ್ತಾ ತತ್ತ್ವ ಬೋಧನೆಯೊಂದಿಗೆ ಹೊಸಹೊಸ ವಿಚಾರಗಳು ಹೊಳೆಯುತ್ತವೆ.ಎಂಬುದಾಗಿತ್ತು ಎಂದು ತಿಳಿಸುವಾಗ ಈ ಮಾತು ಬಂದಿದೆ.

**3. “ಅವರು ಹೇಳಿದಂತೆ ಮಾಡುವವರೇ ಸೈ”**

ಈ ವಾಕ್ಯವನ್ನು ಪುಟ್ಟಯ್ಯ ರಾಧಾಕೃಷ್ಣರವರು ಬರೆದಿರುವ ‘ಸಿ.ವಿ. ರಾಮನ್’ ಕೃತಿಯಿಂದ ಆಯ್ದ ‘ಶಿಷ್ಯ ವತ್ಸಲ ರಾಮನ್’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ.ರಾಮನ್‌ರ ಶಿಷ್ಯ ಪಿಷಾರೋದಿಯವರು ನನ್ನ ಸಂಶೋಧನೆಯನ್ನು ಕೇಂಬ್ರಿಡ್ಜ್‌ನಲ್ಲಿ ವಿಜ್ಞಾನಿಯೊಬ್ಬ ಮಾಡುತ್ತಿದ್ದಾನೆ.ಅವನಲ್ಲಿ ಐದು ಕಿಲೋ ವ್ಯಾಟ್ ಶಕ್ತಿಯ ಎಕ್ಸ್ ರೇ ಟ್ಯೂಬ್ ಇದೆ ಎಂದು ಗೋಳಾಡಿದಾಗ ಅವನಿಗಿಂತ ಹೆಚ್ಚು ಬುದ್ಧಿ ಶಕ್ತಿ ನಿನ್ನಲ್ಲಿದೆ ಎಂದು ವಿಶ್ವಾಸ ತುಂಬಿದರು.ಆಗ ಈ ಮಾತು ಬಂದಿದೆ.ಎಲ್ಲರಲ್ಲೂ ಆತ್ಮವಿಶ್ವಾಸ ತುಂಬಿ ಹುರಿದುಂಬಿಸುತ್ತಿದ್ದರು.

**4. “ಅವು ಮನಸ್ಸಿನಲ್ಲಿ ಗಸ್ತು ತಿರುಗುತ್ತಿರಬೇಕು”**

ಈ ವಾಕ್ಯವನ್ನು ಪುಟ್ಟಯ್ಯ ರಾಧಾಕೃಷ್ಣರವರು ಬರೆದಿರುವ ‘ಸಿ.ವಿ. ರಾಮನ್’ ಕೃತಿಯಿಂದ ಆಯ್ದ ‘ಶಿಷ್ಯ ವತ್ಸಲ ರಾಮನ್’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ರಾಮನ್‌ರು ಶಿಷ್ಯರಿಗೆ ಹೇಳುತ್ತಿದ್ದರು.ರಾಮನ್‌ರು ಶಿಷ್ಯರ ಅಭಿವೃದ್ಧಿಗಾಗಿ ನಿರ್ವಂಚನೆಯಿಂದ ದುಡಿದ ಗುರುಗಳು ಅತಿವಿರಳ ವಾಸ್ತವವಾಗಿ ವಿಜ್ಞಾನ ಎಂದರೆ ಭಾವನೆಗಳು ಅವು ಮನಸ್ಸಿನಲ್ಲಿ ಗಸ್ತು ತಿರುಗುತ್ತಿರಬೇಕು ಎಂದು ಅವರು ಹೇಳುತ್ತಿದ್ದರು.ಪಠ್ಯ ಪುಸ್ತಕಗಳಲ್ಲಾಗಲಿ, ಯಂತ್ರೋಪಕರಣಗಳಲ್ಲಾಗಲಿ ಜ್ಞಾನ ಅಡಗಿರುವುದಿಲ್ಲ. ಅದು ಉದ್ಭವಿಸಬೇಕು ಎಂಬುದು ಈ ಮಾತಿನ ಅರ್ಥ.

**5. “ನನ್ನಲ್ಲಿ 10 ಕಿಲೊ ವ್ಯಾಟ್ ಶಕ್ತಿಯ ಬುದ್ಧಿ ಇದೆ.”**

ಈ ವಾಕ್ಯವನ್ನು ಪುಟ್ಟಯ್ಯ ರಾಧಾಕೃಷ್ಣರವರು ಬರೆದಿರುವ ‘ಸಿ.ವಿ. ರಾಮನ್’ ಕೃತಿಯಿಂದ ಆಯ್ದ ‘ಶಿಷ್ಯ ವತ್ಸಲ ರಾಮನ್’ ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ರಾಮನ್‌ರು ತಮ್ಮ ಶಿಷ್ಯ ಪಿಷಾರೋದಿಗೆ ಹೇಳಿದರು.ಆತನು ತಾನು ಮಾಡುತ್ತಿರುವ ಸಂಶೋಧನೆಯನ್ನೆ ಕೇಂಬ್ರೆಡ್ಜ್‌ನಲ್ಲಿರುವ ವ್ಯಕ್ತಿ 5 ಕಿಲೋವ್ಯಾಟ್ ಶಕ್ತಿಯುಳ್ಳ ಎಕ್ಸ್ ರೇ ಟ್ಯೂಬ್‌ನಿಂದ ಮಾಡುತ್ತಿದ್ದಾನೆ ಎಂದಾಗ ರಾಮನ್‌ರು ಈ ಮಾತನ್ನು ಹೇಳಿ ಅವನಲ್ಲಿ ವಿಶ್ವಾಸವನ್ನು ತುಂಬಿದರು.

ಆತ್ಮವಿಶ್ವಾಸವಿದ್ದರೆ ಏನನ್ನಾದರೂ ಸಾಧಿಸಬಹುದೆಂಬುದನ್ನು ರಾಮನ್‌ರವರು ತಮ್ಮ ಶಿಷ್ಯರಿಗೆ ಮನದಟ್ಟು ಮಾಡಿಸುತ್ತಿದ್ದರು.

## ಗದ್ಯ– 7 ನನ್ನ ಗೋಪಾಲ

**1. “ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು”**

ಈ ವಾಕ್ಯವನ್ನು ಕುವೆಂಪುರವರ ‘ನನ್ನ ಗೋಪಾಲ’ ಎಂಬ ನಾಟಕದಿಂದ ಆರಿಸಲಾಗಿದೆ.

ಈ ಮಾತನ್ನು ಗೋಪಾಲನು ತನ್ನ ಅಮ್ಮನಿಗೆ ಹೇಳಿದನು.ಬನದಲ್ಲಿ ಕಂಡುಬರುವ ಪ್ರಕೃತಿಯನ್ನು ವರ್ಣಿಸುತ್ತಾ ಮಲ್ಲಿಗೆ ಹೂ, ಕೇದಿಗೆ ಹೂ, ಸಂಪಿಗೆ ಹೂ, ಪರ್ವತಬಾಳೆಯ ಹೂ ಗೋರಂಟಿಯ ಹೂ ಅರಳಿ ಸಾವಿರಾರು ಮಳೆಬಿಲ್ಲುಗಳು ಕುಣಿದಂತೆ ತೋರುತ್ತಿತ್ತು ಎಂದು ವರ್ಣಿಸುತ್ತಾ ಈ ಮಾತನ್ನು ಹೇಳಿದನು.

**2. “ಆಗೋಪಾಲ ಕೊಡಬೇಕು ನಾವು ಉಣಬೇಕು”**

ಈ ವಾಕ್ಯವನ್ನು ಕುವೆಂಪುರವರ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ.

ಈ ಮಾತನ್ನು ಗೋಪಾಲನ ತಾಯಿ ಮಗನಿಗೆ ಹೇಳಿದಳು.ಗೋಪಾಲನು ನನಗೆ ಒಂಟಿಯಾಗಿ ಕಾಡು ದಾಟಿ ಬರುವಾಗ ಭಯವಾಗುತ್ತದೆ ನನ್ನ ಗೆಳೆಯರ ಜೊತೆ ಆಳು ಇರುತ್ತಾರೆ. ನನ್ನ ಜೊತೆ ಮಾತ್ರ ಯಾರೂ ಇಲ್ಲ ಎಂದಾಗ ತಾಯಿ ಅವರೆಲ್ಲ ಶ್ರಿಮಂತರು ಎಂದು ಹೇಳುತ್ತಾ ಹೀಗೆ ಹೇಳಿದಳು.

**3. “ಆಮಗುವಿಗೆ ಬಡತನದ ಬವಣೆಯೇಕೆ?”**

ಈ ವಾಕ್ಯವನ್ನು ಕುವೆಂಪುರವರ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ.

ಈ ಮಾತನ್ನು ಗೋಪಾಲನ ತಾಯಿ ತನ್ನ ಮನಸ್ಸಿನಲ್ಲೇ ಹೇಳಿಕೊಂಡಳು ಇಲ್ಲಿಯವರೆಗೆ ತಾನು ತನ್ನ ಮಗನಿಗೆ ಬಡತನದ ಬಗ್ಗೆ ತಿಳಿಯದಂತೆ ಬೆಳೆಸಿದೆ ಆದರೆ ಈಗ ನನಗೆ ಇನ್ನು ಮುಂದೆ ತಮ್ಮ ಬಡತನವನ್ನು ತಿಳಿಸದೇ ಬೇರೆ ದಾರಿ ಇಲ್ಲವಲ್ಲ ಎಂದು ದುಃಖಿಸುತ್ತಾ ದೇವರಿಗೆ ಹೀಗೆ ಬೇಡುತ್ತಾ ಹೇಳುತ್ತಾಳೆ.

4. **"ಒಲುಮೆಗೆ ಸೆರೆಯಾಗುವೆನು"**

ಈ ವಾಕ್ಯವನ್ನು ಕುವೆಂಪುರವರ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ.
ಈ ಮಾತನ್ನು ಶ್ರೀಕೃಷ್ಣನು ಹೇಳಿದ್ದಾನೆ. ಬೃಂದಾವನದ ಗೋಪಿಯರ ಮಾತಿನಲ್ಲಿ ವೇದಗಳ ಜ್ಞಾನವಿದೆ ಹಾಲನ್ನು ಮಾರುವ ಹೆಣ್ಣುಗಳ ಒಲುಮೆಯು ಯೋಗಿಗಳ ಸಾಧನೆಯನ್ನು ಮೀರಿದ್ದು, ಎಂದು ಹಾಡುವಾಗ ಈ ಮಾತು ಬಂದಿದೆ.

5. **"ಅಮ್ಮನ ಮಾತು ಸುಳ್ಳಾಗಲಾರದು"**

ಈ ವಾಕ್ಯವನ್ನು ಕುವೆಂಪುರವರ ನನ್ನ ಗೋಪಾಲ ಎಂಬ ನಾಟಕದಿಂದ ಆರಿಸಲಾಗಿದೆ.
ಈ ಮಾತನ್ನು ಗೋಪಾಲನು ತನ್ನಲ್ಲೆ ಹೇಳಿಕೊಂಡನು.ಕಾಡಿನಲ್ಲಿ ಗೋಪಾಲನು ಭಯಗೊಂಡು ತಾಯಿ ಹೇಳಿದಂತೆ ಅಣ್ಣನನ್ನು ಕರೆದಾಗ ಬರಲಿಲ್ಲ, ಆಗ ಅವನು ಅನುಮಾನದಿಂದ ಹೀಗೆ ಹೇಳಿದ್ದಾನೆ.

## ಪದ್ಯ– 1 ಅರಿವು

1. **"ಹಾಗಾದರೆ ನಾನಿಲ್ಲವೇ?"**

ಈ ವಾಕ್ಯವನ್ನು ಸುಕನ್ಯಮಾರುತಿಯವರ 'ನಾನೆಂಬ ಮಾಯೆ' ಎಂಬ ಸಂಕಲನದಿಂದ ಆಯ್ದ 'ಅರಿವು' ಎಂಬ ಪದ್ಯದಿಂದ ಆರಿಸಲಾಗಿದೆ
ಈ ಮಾತನ್ನು ಕವಯಿತ್ರಿಯು ಹೇಳಿದ್ದಾರೆ.ಕವಯಿತ್ರಿ ಮಹಾಮನೆಯ ದಾಸೋಹಕ್ಕೆ ಬೇಯಿಸಿ ಬಡಿಸಿ ಸುಸ್ತಾಗಿ ಮೈಮುಟ್ಟಿನೋಡಿಕೊಂಡಾಗ ತನ್ನ ಇರುವಿಕೆಯ ಅರಿವಾಗದೆ ಹಾಗಾದರೆ ನಾನಿಲ್ಲವೇ ಎಂದು ಕಿರುಚಿಕೊಂಡಳು.ಆಕೆಯ ಈ ಉದ್ಗಾರದಲ್ಲಿ ಅಸಹಾಯಕತೆಯು ವ್ಯಕ್ತವಾಗುತ್ತದೆ.

2. **"ಇದೀ ನೀನು ಇದ್ದೀ, ನೀನು ಇರಬೇಕು"**

ಈ ವಾಕ್ಯವನ್ನು ಸುಕನ್ಯಮಾರುತಿಯವರ 'ನಾನೆಂಬ ಮಾಯೆ' ಎಂಬ ಸಂಕಲನದಿಂದ ಆಯ್ದ 'ಅರಿವು' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ಮಾತನ್ನು ಕವಯಿತ್ರಿಯು ಹೇಳಿದ್ದಾರೆ.ಕವಯಿತ್ರಿಯ ಅಂತರಾತ್ಮ ಈ ಮೇಲಿನಂತೆ ಉತ್ತರಿಸಿತು ಎನ್ನುವಾಗ ಈ ಮೇಲಿನ ಮಾತು ಬಂದಿದೆ.ಈ ಮಾತಿನಿಂದ ಅವಳಲ್ಲಿ ಹೊಸ ಭರವಸೆಯು ಮೂಡುವುದನ್ನು ವ್ಯಕ್ತಪಡಿಸಿದೆ.

3. **"ನನ್ನ ಇರುವಿಕೆಯ ಅರಿವಾಗುತ್ತದೆ"**

ಈ ವಾಕ್ಯವನ್ನು ಸುಕನ್ಯಮಾರುತಿಯವರ 'ನಾನೆಂಬ ಮಾಯೆ' ಎಂಬ ಸಂಕಲನದಿಂದ ಆಯ್ದ 'ಅರಿವು' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ಮಾತನ್ನು ಕವಯಿತ್ರಿಯು ಹೇಳಿದ್ದಾರೆ.ಕವಯಿತ್ರಿ ಮಹಾಮನೆಯ ಕೋಣೆಯಿಂದ ಹೊರಬಂದು ವಿಶಾಲ ಪ್ರಪಂಚ ನೋಡಿದಾಗ ಅನ್ಯಾಯಗಳನ್ನು ಪ್ರತಿಭಟಿಸಿ ಇರುವಿಕೆಯ ಹಂತವನ್ನು ಸಾಧಿಸಿ ತೋರಿಸಿದ್ದಾಳೆ ಎನ್ನುವಾಗ ಈ ಮಾತ ಬಂದಿದೆ.ತನ್ನ ಅಸಹಾಯಕತೆಯ ಸಂಪ್ರದಾಯಗಳ ಬಂಧನದಿಂದ ಹೊಬರುವ ಧೈರ್ಯವನ್ನು ತಿಳಿಸುತ್ತದೆ.

## ಪದ್ಯ – 2 ನನ್ನ ಹಾಗೆಯೆ

1. **"ಇವನೇ ಬಾಹುಬಲಿಯು ಮಗು ಧೀರತನದ ಮೂರ್ತಿಯು"**

ಈ ವಾಕ್ಯವನ್ನು ಸು.ರಂ.ಎಕ್ಕುಂಡಿಯವರ 'ಕಥನಕವನಗಳು' ಎಂಬ ಕವನಸಂಗ್ರಹದಿಂದ ಆಯ್ದ 'ನನ್ನ ಹಾಗೆಯೆ' ಎಂಬ ಪದ್ಯದಿಂದ ಆರಿಸಲಾಗಿದೆ.
ಮಗು ಅಜ್ಜನನ್ನು "ಈತನಾರು ತಾತ, ಇಲ್ಲಿ ನಿಂತು ಏನು ಮಾಡುತ್ತಿರುವನು" ಎಂದು ಕೇಳಿದಾಗ ಅಜ್ಜ ಈ ಮೇಲಿನ ಮಾತನ್ನು ಹೇಳಿದನು.ಬಾಹುಬಲಿಯ ಧೀರತನವನ್ನು ವಿವರಿಸುತ್ತಾ ಮಗುವಿಗೆ ಹೀಗೆ ಪರಿಚಯ ಮಾಡಿಕೊಟ್ಟನು.

2. **"ಹಮ್ಮಿನಲ್ಲಿ ಬಂದು ಸೆಣಸಿ ತಮ್ಮನಲ್ಲಿ ಸೋತನು"**

ಈ ವಾಕ್ಯವನ್ನು ಸು.ರಂ.ಎಕ್ಕುಂಡಿಯವರ 'ಕಥನಕವನಗಳು' ಎಂಬ ಕವನಸಂಗ್ರಹದಿಂದ ಆಯ್ದ 'ನನ್ನ ಹಾಗೆಯೆ' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ಮಾತನ್ನು ಅಜ್ಜನು ಮಗುವಿಗೆ ಬಾಹುಬಲಿಯ ಧೈರ್ಯದ ಬಗ್ಗೆ ತಿಳಿಸುತ್ತಾ ಹೇಳಿದನು.ಭರತನು ತನ್ನ ತಮ್ಮನಾದ ಬಾಹಕುಬಲಿಯೊಂದಿಗೆ ಜಂಭದಿಂದ ಹೋರಾಡಿ ಸೋತದ್ದನ್ನು ಅಜ್ಜನು ಹೀಗೆ ಹೇಳಿದನು.

3. **"ನೀನು ಸೋತು ಗೆದ್ದೆ ಅಣ್ಣ ನಾನು ಗೆದ್ದು ಸೋತೆನು"**

ಈ ವಾಕ್ಯವನ್ನು ಸು.ರಂ.ಎಕ್ಕುಂಡಿಯವರ 'ಕಥನಕವನಗಳು' ಎಂಬ ಕವನಸಂಗ್ರಹದಿಂದ ಆಯ್ದ 'ನನ್ನ ಹಾಗೆಯೆ' ಎಂಬ ಪದ್ಯದಿಂದ ಆರಿಸಲಾಗಿದೆ.
ಈ ಮಾತನ್ನು ಬಾಹುಬಲಿಯು ಗೆದ್ದ ರಾಜ್ಯವನ್ನು ಅಣ್ಣನಿಗೆ ಮರಳಿಸುತ್ತಾ ಹೀಗೆ ಹೇಳಿದನು.ಬಾಹುಬಲಿಗೆ ತನ್ನ ಕಾರ್ಯದ ಬಗ್ಗೆ ಪಶ್ಚಾತ್ತಾಪ ಉಂಟಾಗಿ ಈ ರಾಜ್ಯ ಸ್ಥಿರವಲ್ಲವೆಂದು ಭಾವಿಸಿ ತಪಸ್ಸಿಗೆ ಹೊರಟಾಗ ಹೇಳಿದನು.

4. **"ಗೊಮ್ಮಟೇಶ ನಕ್ಕುಬಿಟ್ಟ ಕಂಡು ಮುಗ್ಧ ನಂಬುಗೆ"**

ಈ ವಾಕ್ಯವನ್ನು ಸು.ರಂ.ಎಕ್ಕುಂಡಿಯವರ 'ಕಥನಕವನಗಳು' ಎಂಬ ಕವನಸಂಗ್ರಹದಿಂದ ಆಯ್ದ 'ನನ್ನ ಹಾಗೆಯೆ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ.ಮಗು ಇಂದು ಬಾಹುಬಲಿಗೆ ಹಾಲಿನ ಮಜ್ಜನ ಮಾಡಿಸುತ್ತಾರೆ ಎಂದು ತಾತನು ಹೇಳಿದಾಗ ಮಗು ನನಗೂ ಸಹ ಅಮ್ಮ ಸ್ನಾನ ಮಾಡಿಸುವ ಮುಂಚೆ ಈ ರೀತಿ ನಿಲ್ಲಿಸುತ್ತಾಳೆ ಎಂದಾಗ ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟೇಶ ನಕ್ಕುಬಿಟ್ಟ ಎಂದು ಹೇಳಿದ್ದಾರೆ. ಕವಿಯು ಬಾಹುಬಲಿಯ ಮೂರ್ತಿಯನ್ನು ಮಗುವಿನೊಂದಿಗೆ ಹೋಲಿಸಿದಾಗ ಈ ಮೇಲಿನ ಮಾತು ಬಂದಿದೆ.

5. **"ಬಳಲಿದವರಿಗೆಲ್ಲ ಕೈಯ ನೀಡುತ್ತಿರುವನು"**

ಈ ವಾಕ್ಯವನ್ನು ಸು.ರಂ.ಎಕ್ಕುಂಡಿಯವರ 'ಕಥನಕವನಗಳು' ಎಂಬ ಕವನಸಂಗ್ರಹದಿಂದ ಆಯ್ದ 'ನನ್ನ ಹಾಗೆಯೆ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಅಜ್ಜ ಮಗುವಿಗೆ ಹೇಳುತ್ತಾನೆ. ಮಗುವು ತಾತನಿಗೆ ಬಾಹುಬಲಿಯು ಈ ಬೆಟ್ಟದಲ್ಲಿ ಇಷ್ಟು ಎತ್ತರದಲ್ಲಿ ಒಂಟಿಯಾಗಿ ನಿಂತು ಏನು ಮಾಡುತ್ತಿರುವನು ಎಂದು ಕೇಳಿದಾಗ ಆತನು ಬಾಹುಬಲಿ ಅಭಯಮೂರ್ತಿಯಾಗಿರುವನು ಬೆಟ್ಟವನ್ನು ಹತ್ತುವ ಭಕ್ತರಿಗೆ ಆಯಾಸಗೊಂಡಾಗ ಅವರಿಗೆ ಸಹಾಯಹಸ್ತವನ್ನು ನೀಡುತ್ತಾನೆಂದು ಉತ್ತರಿಸುವಾಗ ಈ ಮಾತು ಬಂದಿದೆ.

## ಪದ್ಯ – 4 ಸದ್ದು ಮಾಡದಿರು

1. **"ಕೂಗಾಡಿ ಹೋರಾಡಿ ಫಲವೇನು?"**

ಈ ವಾಕ್ಯವನ್ನು ಸಿ.ಪಿ.ಕೃಷ್ಣಕುಮಾರ್ ಅವರು ಬರೆದಿರುವ'ಬೊಗಸೆ' ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿಯು ಹೇಳಿದ್ದಾರೆ.ನಾವು ಪ್ರಕೃತಿಯನ್ನು ಆದರ್ಶವಾಗಿಟ್ಟುಕೊಂಡು ಬಾಳಬೇಕು. ಹಾಗೆ ಮೌನವಾಗಿ ನಮ್ಮ ಕಾರ್ಯವನ್ನು ಮಾಡಿ ಮುಗಿಸಬೇಕು. ಹೀಗೆ ದೀಪದ ಎದುರಿಗೆ ಕತ್ತಲೆ ಹರಿಯುವಂತೆ, ತಟ್ಟೆಯಲ್ಲಿ ಕರ್ಪೂರವು ಸದ್ದಿಲ್ಲದೆ ಉರಿದು ಹೋಗುವಂತೆ ಶಾಂತಿಯಲ್ಲಿ ಬದುಕಬೇಕು ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

2. **"ಸಿಡುಕು ಮಿಡುಕನ್ನು ತೊರೆದು ಮೌನಿಯಾಗು"**

ಈ ವಾಕ್ಯವನ್ನು ಸಿ.ಪಿ.ಕೃಷ್ಣಕುಮಾರ್ ಅವರು ಬರೆದಿರುವ 'ಬೊಗಸೆ' ಕವನ ಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿಯು ಹೇಳಿದ್ದಾರೆ.ಮನುಷ್ಯನ ಜೀವನದಲ್ಲಿ ಹಸಿ ಸೌದೆಯಂತೆ ಬುಸುಗುಡದೆ ಸಿಡಿಮದ್ದು ಬರೇ ಸದ್ದು ಮಾಡುವಂತೆ ಬದುಕದೆ ರವಿಕಿರಣಕ್ಕೆ ಮೌನವಾಗಿ ಇಬ್ಬನಿಯು ಕರಗುವಂತೆ ಸಿಡುಕು ಮಿಡುಕನ್ನು ತೊರೆದು, ಮೌನವಾಗಿ ಬಾಳುವುದನ್ನು ಕಲಿಯಬೇಕೆಂದು ಕವಿಗಳು ಹೇಳಿದ್ದಾರೆ.

## ಪದ್ಯ – 5 ಗುರಿ

1. **"ದಾಳಿ ಬಂದೊಡನೆ ಶರಣೆಂಬ ಹೆಣ್ತನವು"**

ಈ ವಾಕ್ಯವನ್ನು ಎಂ.ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಕವನಸಂಕಲನದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿಯು ಹೇಳಿದ್ದಾರೆ.ಮನುಷ್ಯನು ಜೀವನದಲ್ಲಿ ಒಂದೇ ಗುರಿ ಹೊಂದಿರಬೇಕು ಗಾಳಿ ಬಂದ ಕಡೆ ತಿರುಗುವಂತ ಹೇಡಿತನವು ಬೇಡವೆಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.ದಾಳಿ ಬಂದೊಡನೆ ಶರಣೆಂಬ ಹೆಣ್ತನವು ಬೇಡ ಎಂದು ತಿಳಿಸಿದ್ದಾರೆ. ಹೇಡಿತನವಿದ್ದರೆ ಏನನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸುವಾಗ ಈ ಮಾತು ಬಂದಿದೆ.

2. **"ದೂಡು ಬಾಳ್ವೆಯನು ಪೌರುಷದ ಹೊನಲೊಳಗೆ"**

ಈ ವಾಕ್ಯವನ್ನು ಎಂ.ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಕವನಸಂಕಲನದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿಯು ಹೇಳಿದ್ದಾರೆ.ಮನುಷ್ಯನು ಜೀವನದಲ್ಲಿ ಖಚಿತವಾದ ಗುರಿಯನ್ನು ಹೊಂದಿರಬೇಕು.ಅದನ್ನು ಸಾಧಿಸುವಾಗ ಅಡ್ಡಿ ಆತಂಕಗಳು ಎದುರಾದರೆ ಹೆದರದೆ ಅದನ್ನು ನಿವಾರಿಸಿಕೊಂಡು ಅಡ್ಡ ದಾರಿ ಹಿಡಿಯದೆ ಸರಿಯಾದ ಒಳ್ಳೆಯ ಮಾರ್ಗದಲ್ಲಿ ನಡೆಯಬೇಕು ಹೇಡಿತನವು ಬೇಡ, ಪೌರುಷದಿಂದ ಬಾಳು ಎಂದು ಹೇಳಿದ್ದಾರೆ.

3. **"ಒಂದು ಜೀವನಕೇಕೆ ಹಲವು ಸಾಧ್ಯಗಳು"**

ಈ ವಾಕ್ಯವನ್ನು ಎಂ.ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಕವನಸಂಕಲನದಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿಯು ಹೇಳಿದ್ದಾರೆ.ಒಂದು ಬಾಣಕ್ಕೆ ಒಂದೇ ಗುರಿ ಇರುವಂತೆ ಒಂದು ದೇಹದೊಳಗೆ ಒಂದೇ ಆತ್ಮವು ಇರುವ ಹಾಗೆ ಈ ಜೀವನದಲ್ಲಿ ಅವಕಾಶವು ಒಂದೇ ಬಾರಿ ಸಿಗುತ್ತದೆ.ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು.ಎಂದು ತಿಳಿಸುತ್ತಾ, ಈ ಮಾತನ್ನು ಹೇಳಿದ್ದಾರೆ.ಒಂದೇ ಹೆಗ್ಗುರಿಯ ಸಾಧನೆಗಾಗಿ ಹಗಲಿರುಳು ಹೋರಾಡಬೇಕೆಂದು ಕವಿಗಳು ತಿಳಿಸಿದ್ದಾರೆ.

## ಪದ್ಯ – 6 ಮಗು

1. **"ಹಸಿವ ಬಲ್ಲಮ್ಮ ಒಳಗಿಲ್ಲ"**

ಈ ವಾಕ್ಯವನ್ನು'ಮಗು' ಎಂಬ ಜಾನಪದ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ.ಹಸಿವಾದ ಮಕ್ಕಳಿಗೆ ಹಾಲು ಕೊಡಲು ಹೊಟ್ಟೆಯನ್ನು ತುಂಬಿಸಲು ಹತ್ತಿರ ಎಲ್ಲೂ ಮನೆಯೇ ಇರಲಿಲ್ಲವೆಂದು ತಿಳಿಸುತ್ತಾ ತೊಟ್ಟಿಲಲ್ಲಿ ಮಲಗಿರುವ ಮಗುವಿನ ಹಸಿವನ್ನು ತಿಳಿಯಲು ಅಲ್ಲಿ ಅದರ ತಾಯಿ ಇರಲಿಲ್ಲವೆಂದು ಮಗುವನ್ನು ಕಂಡರೆ ಅಲ್ಲಿ ಆಟವಾಡುತ್ತಿದ್ದ ಮಕ್ಕಳು ತೊಟ್ಟಿಲಲ್ಲಿ ಇದ್ದ ಮಗುವನ್ನು ನೋಡಿ ಹಸಿವನ್ನು ಮರೆಯುತ್ತೇವೆಂದು ಜನಪದರು ಹೇಳಿದ್ದಾರೆ.

2. **"ಕಲಕೇರಿ ತೇರಿನ ಮಾಟ ಬಲುಮಾಟ"**

ಈ ವಾಕ್ಯವನ್ನು 'ಮಗು' ಎಂಬ ಜಾನಪದ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ.ಜನಪದರಿಗೆ ಮಗುವಿನ ಸೌಂದರ್ಯನವನ್ನು ಎಷ್ಟು ವರ್ಣಿಸಿದರೂ ತೃಪ್ತಿಯಿಲ್ಲ, ಮಗುವಿನ ಸೌಂದರ್ಯವನ್ನು ಕಲಕೇರಿಯ ತೇರಿನ ಸೌಂದರ್ಯಕ್ಕೆ ಹೋಲಿಸಿದ್ದಾರೆ. ಏಕೆಂದರೆ ತೇರನ್ನು ಬಗೆಗೆಯ ಹೂಗಳಿಂದ ಅಲಂಕಾರ ಮಾಡಿರುತ್ತಾರೆ.ಆ ಸೌಂದರ್ಯದಂತೆ ಮಗು ಸುಂದರವಾಗಿ ಕಾಣುತ್ತದೆ ಎಂದು ಜನಪದರು ಮಗುವನ್ನು ವರ್ಣಿಸಿದ್ದಾರೆ.

3. **"ಎಲ್ಲಾದರೂ ನಿನ್ನ ಹೆಸರಕ್ಕು"**

ಈ ವಾಕ್ಯವನ್ನು 'ಮಗು' ಎಂಬ ಜಾನಪದ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ.ಹೆಣ್ಣು ಮಕ್ಕಳು ಹುಟ್ಟಿದರೆ ಬೇರೆಯವರ ಮನೆಯ ಸೊಸೆಯಾಗಿ ತವರು ಮನೆ, ಅತ್ತೆಯಮನೆ ಎರಡರ ಕೀರ್ತಿಯನ್ನು ಬೆಳಗುತ್ತಾಳೆ ಗಂಡು ಮಗು ಹುಟ್ಟಿದರೆ ತನ್ನ ತಂದೆಯ ಜವಾಬ್ದಾರಿಯನ್ನು ಹೊತ್ತು ಆ ಮನೆಯ ಕೀರ್ತಿಯನ್ನು ಬೆಳಗುತ್ತಾನೆ ಎಂದು ಮಕ್ಕಳ ಮಹತ್ವವನ್ನು ವರ್ಣಿಸುವಾಗ ಈ ಮಾತು ಬಂದಿದೆ.

## ಪದ್ಯ – 7 ವಚನಗಳು

1. **"ನೀರ ಕಂಡಲ್ಲಿ ಮುಳುಗುವರಯ್ಯಾ"**

ಈ ವಾಕ್ಯವನ್ನು'ವಚನಗಳು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಬಸವಣ್ಣನವರು ಹೇಳಿದ್ದಾರೆ.ಜನರು ನಿಜವಾಗಿ ಹೊಂದಿರಬೇಕದ ಭಕ್ತಿಯನ್ನು ವಿವರಿಸುತ್ತಾ ಜನರು ನೀರನ್ನು ಕಂಡಲ್ಲಿ ಮುಳುಗುವರು ಮರ ಕಂಡಲ್ಲಿ ಸುತ್ತುವರು ಬತ್ತುವ ಜಲವ ಒಣಗುವ ಮರವ ಮೆಚ್ಚಿದವರು ದೇವರ ಜ್ಞಾನವನ್ನು ತಿಳಿಯುವರೇ? ಎಂದು ಪ್ರಶ್ನಿಸುತ್ತ ಮೂಢನಂಬಿಕೆಯನ್ನು ಖಂಡಿಸುತ್ತ ಅರ್ಥವಿಲ್ಲದ ಆಚರಣೆ ಬಿಡಬೇಕೆಂದು ತಿಳಿಸುವಾಗ ಈ ಮಾತು ಬಂದಿದೆ.

2. **"ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ"**

ಈ ವಾಕ್ಯವನ್ನು 'ವಚನಗಳು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಅಕ್ಕಮಹಾದೇವಿ ಹೇಳಿದ್ದಾರೆ.ನಿಜವಾದ ಜ್ಞಾನವಿರಬೇಕು ಎಂದು ವಿವರಿಸುತ್ತಾ, ನೆರಳು ನೀಡದ ಮರ, ಹಾಲು ಕೊಡದ ಹಸು, ಗುಣವಿಲ್ಲದ ರೂಪದಿಂದ ಯಾವ ಫಲವಿಲ್ಲವೋ ಹಾಗೆ ಅನ್ನವಿಲ್ಲದ ತಟ್ಟೆಯಿಂದ ಏನು ಪ್ರಯೋಜನವಿಲ್ಲ ಎಂದು ತಿಳಿಸುವಾಗ ಅಕ್ಕ ಈ ಮಾತನ್ನು ಹೇಳಿದ್ದಾರೆ.

3. **"ಬತ್ತುವ ಜಲವ, ಒಣಗುವ ಮರನ ಮೆಚ್ಚಿದವರು"**

ಈ ವಾಕ್ಯವನ್ನು 'ವಚನಗಳು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಬಸವಣ್ಣನವರು ಹೇಳಿದ್ದಾರೆ.ಜನರು ನಿಜವಾಗಿ ಹೊಂದಿರಬೇಕದ ಭಕ್ತಿಯನ್ನು ವಿವರಿಸುತ್ತಾ ಜನರು ನೀರನ್ನು ಕಂಡಲ್ಲಿ ಮುಳುಗುವರು ಮರ ಕಂಡಲ್ಲಿ ಸುತ್ತುವರು ಬತ್ತುವ ಜಲವ ಒಣಗುವ ಮರವ ಮೆಚ್ಚಿದವರು ದೇವರ ಜ್ಞಾನವನ್ನು ಹೇಗೆ ತಿಳಿಯುವರು ಎಂದು ಪ್ರಶ್ನಿಸುವಾಗ ಈ ಮಾತು ಬಂದಿದೆ.

1. **"ಶಿವಶಿವ ಕಾದಿಗೆಲಿದವು"**

ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ವಿರಾಟರಾಜನ ಮಗನಾದ ಉತ್ತರಕುಮಾರನು ಬೃಹನ್ನಳೆ ವೇಷಧಾರಿ ಅರ್ಜುನನಿಗೆ ಹೇಳಿದನು.ಕೌರವರ ಭಯಂಕರ ಸೇನೆಯನ್ನು ಕಂಡು ಹೆದರಿ ರಣರಂಗದಿಂದ ಓಡಲು ತೊಡಗಿದಾಗ ಬೃಹನ್ನಳೆ ವೇಷ ಧರಿಸಿದ್ದ ಅರ್ಜುನನು ತಡೆದು, ಯುದ್ಧ ಭೂಮಿಯಿಂದ ಓಡುವುದು ಪಾಪವೆಂದು ಹೇಳಿದಾಗ ಈ ಮೇಲಿನ ಮಾತನ್ನು ಹೇಳಿ ತನ್ನ ಅಂಜುಬುರುಕತನವನ್ನು ವ್ಯಕ್ತಪಡಿಸಿದ್ದಾನೆ.ಜಂಭ ಕೊಚ್ಚಿದ ಉತ್ತರಕುಮಾರನ ಪೌರುಷದ ಬಗ್ಗೆ ಇದರಿಂದ ತಿಳಿಯುತ್ತದೆ.

2. **"ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ"**

ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಕೌರವ ಸೇನೆಯನ್ನು ಕಂಡು ಹೆದರಿದ ಉತ್ತರನು ಕೌರವ ಸೇನೆಯೊಡನೆ ಯುದ್ಧ ಮಾಡಲು ತನ್ನಿಂದ ಸಾಧ್ಯವಿಲ್ಲವೆಂದು ನಿಧಾನವಾಗಿ ರಥದ ಹಿಂದಿನಿಂದ ಧುಮುಕಿ ಬದುಕಿದೆ ಎಂದು ಕೆದರಿದ ತಲೆಯಲ್ಲಿಯೇ ಒಂದೇ ಸಮನೆ ಓಡಲು ಪ್ರಾರಂಭಿಸಿದನು.ಇದನ್ನುಕಂಡು ಅರ್ಜುನನು ಒಡಲು ಒಡೆಯುವಂತೆ ನಗಲು ಪ್ರಾರಂಭಿಸಿದನು.

3. **"ನಾಡನರಿಯೊಲ್ ಹಲುಗಿರಿಯೆ ಬಿಡುವೆನೆ"**

ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಅರ್ಜುನ ಉತ್ತರನಿಗೆ ಹೇಳಿದನು.ಉತ್ತರನು ಹೆಂಗಳೆಯರ ಮುಂದೆ ಕೌರವ ಸೇನೆಯನ್ನು ಸುಲಭವಾಗಿ ಎದುರಿಸಬಹುದೆಂದು ಬಾಯ್ಗೆ ಬಂದಂತೆ ಮಾತನಾಡಿದನು.ಆದರೆ ಯುದ್ಧರಂಗದಲ್ಲಿ ಕೌರವಸೇನೆಯನ್ನು ಕಂಡು ಹೆದರಿ ಓಡಲು ಪ್ರಾರಂಭಿಸಿದನು ಆಗ ಅರ್ಜುನನು ಹೆಂಗೆಳೆಯರ ಮುಂದೆ ಜಂಭದಿಂದ ಮಾತನಾಡುತ್ತಿದ್ದೆ, ಈಗ ಹಲ್ಲು ಕಿರಿದು ಅಂಜುಬುರುಕ ನರಿಯಂತೆ ಓಡಿಹೋಗಲು ಬಿಡುವುದಿಲ್ಲ **'ಕಾದು ನಡೆ'** ಎಂದು ಅರ್ಜುನನು ಉತ್ತರನಿಗೆ ಹೇಳಿದನು.

4. **"ಎಮ್ಮರಮನೆಯ ನಾರಿಯರೆ ಸಾಕು"**

ಈ ವಾಕ್ಯವನ್ನು ಗದುಗಿನ ನಾರಾಯಣಪ್ಪನವರು ಬರೆದಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಉತ್ತರನು ಅರ್ಜುನನಿಗೆ ಹೇಳಿದನು.ಕೌರವಸೇನೆಗೆ ಹೆದರಿ ಓಡಿ ಹೋಗುತ್ತಿದ್ದ ಉತ್ತರನಿಗೆ ಅರ್ಜುನನು ಈ ರೀತಿ ಯುದ್ಧರಂಗದಿಂದ ಓಡಿಹೋದರೆ ಪಾಪ ಸುತ್ತಿಕೊಳ್ಳುವುದೆಂದು ಹೇಳಿದಾಗ ಉತ್ತರನು ಯುದ್ಧರಂಗದಿಂದ ಓಡಿಹೋದ ಪಾಪವನ್ನು ಬ್ರಾಹ್ಮಣರು ಹೋಗಲಾಡಿಸುತ್ತಾರೆ.ನನಗೆ ಯುದ್ಧದಲ್ಲಿ ಸೋತು ವೀರ ಸ್ವರ್ಗ ಸೇರುವುದು ಬೇಡ ಇಂದ್ರ ಪದವಿಯೂ ಬೇಡ ಸುರರ ಸತಿಯರೂ ಬೇಡ ನನಗೆ ನಮ್ಮ ಅರಮನೆಯ ನಾರಿಯರೇ ಸಾಕು ಎಂದು ಹೇಳುವಾಗ ಈ ಮಾತು ಬಂದಿದೆ.

## ಸುಮಾರು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

**ಗದ್ಯ –1** **ಒಣಮರದ ಗಿಳಿ**

**1. ಗಿಳಿಯು ಪರಹಿತಾಕಾಂಕ್ಷಿ ಎನಿಸಿಕೊಂಡದ್ದು ಹೇಗೆ ವಿವರಿಸಿ?**

ಗಿಳಿಯು ಮರವು ಒಣಗಿದರೂ ಆಶ್ರಯವನ್ನು ತೊರೆದು ಹೋಗಲಿಲ್ಲ.ಜೊತೆಯಲ್ಲಿ ಇದ್ದು ಒಳ್ಳೆಯ ದಿನ ಬರಲಿ ಎಂದು ಹಾರೈಸತೊಡಗಿತು. ಅದರ ತತ್ವನಿಷ್ಠೆಯನ್ನು ಮೆಚ್ಚಿಕೊಂಡ ಇಂದ್ರನು "ಏನಾದರೂ ವರವನ್ನು ಕೇಳು" ಎಂದಾಗ ಮರವು ಮೊದಲಿನಂತೆ ಫಲಪುಷ್ಪದಿಂದ ಹಸಿರಿನಿಂದ ಕೂಡಿ ನೆರಳು ಕೊಡುವಂತೆ ದಯಪಾಲಿಸು ಎಂದು ಕೇಳಿತು.ನನಗೆ ಮರದ ಈಗಿನ ಸ್ಥಿತಿಯನ್ನು ನೋಡಲು ಆಗುವುದಿಲ್ಲ ಎಂದಿತು.ಗಿಳಿಯು ಎಂಥ ಜನ್ಮವನ್ನು ಬಯಸಿದ್ದರೂ ಎಂಥ ಭೋಗವನ್ನು ಬಯಸಿದ್ದರೂ ಇಂದ್ರನು ಕೊಡಲು ಸಿದ್ಧನಾಗಿದ್ದ.ಆದರೆ ಗಿಳಿ ಕೇಳಿದ ವರವು ಸ್ವಾರ್ಥರಹಿತವಾಗಿತ್ತು.ಅದರ ನಡತೆ ಲೋಕವರ್ತನೆಗೆ ವಿರುದ್ಧವಾಗಿರುವುದರಿಂದ ಗಿಳಿ ಪರಹಿತಾಕಾಂಕ್ಷಿ ಎನಿಸಿಕೊಂಡಿದೆ.

**2. ಗಿಳಿಯ ವರ್ತನೆಯಿಂದ ಮಾನವನು ಕಲಿಯ ಬೇಕಾದ ಗುಣಗಳೇನು?**

ಗಿಳಿಯ ವರ್ತನೆಯು ನಮಗೆ ಕೃತಜ್ಞತೆಯನ್ನು ಕಲಿಸುತ್ತದೆ.ಕಷ್ಟದಲ್ಲಿರುವವರಿಗೆ ಜೊತೆಯಾಗಿದ್ದು ಅದನ್ನು ಪರಿಹರಿಸಬೇಕು.ಸ್ವಾರ್ಥವನ್ನು ಬಿಡಬೇಕು ಬೇರೆಯವರ ಒಳಿತನ್ನು ಬಯಸುವುದು ಮಾನವನ ಕರ್ತವ್ಯ ಅದರಿಂದ ನಮ್ಮ ಜೀವನದಲ್ಲಿ ಸುಖ ಸಂತೋಷಗಳು ಬರುತ್ತವೆ ಎಂಬುದನ್ನು ತಿಳಿಯಬಹುದು.ಸುಖಸಂಪತ್ತಿನ ಕಾಲದಲ್ಲಿ ಜೊತೆಯಲ್ಲಿದ್ದವರು ಕಷ್ಟಕಾಲದಲ್ಲೂ ಕೂಡ ಅವರ ಜೊತೆಗೇ ಇದ್ದು ಉಪಕಾರ ಸ್ಮರಣೆಯನ್ನು ಮಾಡಬೇಕು ಎಂಬ ಗುಣಗಳನ್ನು ಗಿಳಿಯ ವರ್ತನೆಯಿಂದ ಮಾನವನು ಕಲಿಯಬೇಕು.

**ಗದ್ಯ– 2** **ರಾಹುಲ್ ದ್ರಾವಿಡ್**

**1. ರಾಹುಲ್ ದ್ರಾವಿಡರು ಇತರ ಆಟಗಾರರಿಗಿಂತ ಭಿನ್ನರೆನಿಸಿದ್ದು ಹೇಗೆ?**

ಬೌಂಡರಿ ಬಾರಿಸಿ ದಾಖಲೆ ಮಾಡುವ ಆಟಗಾರರ ಗುಂಪಿಗೆ ದ್ರಾವಿಡರು ಸೇರುವುದಿಲ್ಲ. ಸಂಯಮದ ಹೊಡೆತ, ಉತ್ತಮ ಎಸೆತವನ್ನು ಗೌರವಿಸಿ ಕೆಟ್ಟ ಎಸೆತವನ್ನು ವಿರೋಧಿಸುವುದು, ಆಟದಲ್ಲಿ ಶಿಸ್ತು, ಕಲಾತ್ಮಕತೆ ಇವರ ಆಟದ ವೈಶಿಷ್ಟ್ಯ.ದ್ರಾವಿಡರು ಎಂದೂ ಸ್ವಂತ ದಾಖಲೆಗಾಗಿ ಆಡಿದವರಲ್ಲ; ತಂಡಕ್ಕಾಗಿ ತಪಸ್ಸು ಅವರದು. "ದೇಶ ಮೊದಲು, ದೇಶಕ್ಕಾಗಿ ಆಡು" ಎಂಬುದೇ ಅವರ ಧ್ಯೇಯ ಆದ್ದರಿಂದ ರಾಹುಲ್ ದ್ರಾವಿಡರು ಇತರ ಆಟಗಾರರಿಗಿಂತ ಭಿನ್ನರೆನಿಸಿಕೊಂಡರು.ಅವರ ಹಿರಿಯರು ಅವರಿಗೆ ಈ ಮೇಲಿನ ಅಂಶಗಳನ್ನೇ ಬೋಧಿಸಿದ್ದರು.ಯಶಸ್ಸಿನ ಶಿಖರದಲ್ಲಿರುವಾಗಲೇ ಕಿರಿಯರಿಗೆ ಅವಕಾಶ ಮಾಡಿಕೊಡಲೆಂದು 2012 ಮಾರ್ಚ್‌ನಲ್ಲಿ ಟೆಸ್ಟ್ ಮತ್ತು ಏಕದಿನ ಪಂದ್ಯಗಳಿಗೆ ವಿದಾಯ ಹೇಳಿದರು.ದ್ರಾವಿಡ್ ಒಬ್ಬ ಅಪ್ರತಿಮ ಆಟಗಾರರಾಗಿದ್ದರು.

**ಗದ್ಯ –3** **ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ**

**1. ಸಾಧನೆಗೆ ಅಂಗಹೀನತೆಯು ಅಡ್ಡಿಯಾಗದು ಎಂಬುದು ಪುಟ್ಟರಾಜರ ವಿಷಯದಲ್ಲಿ ನಿಜವಾಗಿದೆ ಇದನ್ನು ಸಮರ್ಥಿಸಿ.**

ಪುಟ್ಟರಾಜರು ಸಂಗೀತದೊಂದಿಗೆ ಶ್ರದ್ಧೆ, ಪರಿಶ್ರಮದಿಂದ ಸ್ವರಮಂಡಲ, ಸಾರಂಗಿ, ಸರೋದ, ಪಿಟೀಲು, ಹಾರ್ಮೋನಿಯಂ ಮತ್ತು ತಬಲಾ ವಾದನದಲ್ಲಿ ಪ್ರಾವೀಣ್ಯವನ್ನು ಪಡೆದರು.ಹಿಂದೂಸ್ತಾನಿ, ಕರ್ನಾಟಕ ಸಂಗೀತವನ್ನು ಸಿದ್ಧಿಗಳಿಸಿಕೊಂಡರು.ಅಂಧರ ಓದಿನ ಬ್ರೈಲ್ ಲಿಪಿಯನ್ನು ಕಲಿತರು.ಕನ್ನಡದಲ್ಲಿ ಅರವತ್ತಕ್ಕೂ ಹೆಚ್ಚಿನ ಸಂಖ್ಯೆಯ ಕೃತಿರಚನೆ ಮಾಡಿದರು.ಬಸವೇಶ್ವರ, ಶ್ರೀ ಶಿವಲಿಂಗೇಶ್ವರ, ಅಡವಿ ಸಿದ್ದೇಶ್ವರ, ಗುಡ್ಡಾಪುರದ ದಾನಮ್ಮ ಮೊದಲಾದ ಹದಿನೆಂಟು ನಾಟಕಗಳನ್ನು ರಚಿಸಿದ್ದಾರೆ. 'ಪಂಚಾಕ್ಷರಿ ವಾಣಿ' ಎಂಬ ದಾರ್ಶನಿಕ ಪತ್ರಿಕೆಗೆ ಮಾರ್ಗದರ್ಶಕರೂ ಆಗಿದ್ದರು.ಗದುಗಿನ ವೀರೇಶ್ವರ ಪುಣ್ಯಾಶ್ರಮದ ಜವಾಬ್ದಾರಿಯನ್ನು ಹೊತ್ತು ಶಿಕ್ಷಣ ಸಂಸ್ಥೆಗಳನ್ನು ವಿಸ್ತರಿಸುತ್ತಾ ಬಡಮಕ್ಕಳ ಜ್ಞಾನದಾಹವನ್ನು ಹಿಂಗಿಸಿದ್ದರು.ಈ ಎಲ್ಲಾ ಸಾಧನೆಗಳನ್ನು ನೋಡಿದರೆ ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬುದು ಪುಟ್ಟರಾಜರ ವಿಷಯದಲ್ಲಿ ನಿಜವಾಗಿದೆ.

**ಗದ್ಯ– 4** **ಪಶ್ಚಿಮ ಘಟ್ಟಗಳ ಪತನ**

**1. ಪಶ್ಚಿಮ ಘಟ್ಟಗಳ ನಿಜವಾತ ಪತನ ಹೇಗಾಗುತ್ತಿದೆ?**
ಪಶ್ಚಿಮ ಘಟ್ಟಗಳ ನಿಜವಾದ ಪತನವು ಪ್ರಾರಂಭವಾದದ್ದು ಸ್ವಾತಂತ್ರ್ಯ ಬಂದ ಮೇಲೆ.ಒಂದು ಕಡೆ ಏರುತ್ತಿರುವ ಜನಸಂಖ್ಯೆಯಿಂದ ಕೃಷಿಭೂಮಿಗಾಗಿ ಅರಣ್ಯನಾಶ, ಸಾಂಬಾರ ಪದಾರ್ಥಗಳಿಗಾಗಿ ಕಾಡಿನ ಉತ್ಪನ್ನಗಳಿಗಾಗಿ ಕಾಡು ದೋಚುವವರ ಸಂಖ್ಯೆ ಹೆಚ್ಚಾಗಿದೆ.ಖನಿಜ, ವಿದ್ಯುತ್‌ಗೆಂದು ಸರಕಾರವೇ ಪಶ್ಚಿಮ ಘಟ್ಟಗಳಿಗೆ ಲಗ್ಗೆ ಹಾಕಿದೆ.ಉದ್ದಿಮೆದಾರರು ಕೊಡಲಿಸಿಡಿಮದ್ದುಗಳಿಂದ ಸಾವಿರಾರು ಬುಲ್‌ಡೋಜರ್‌ಗಳು, ಲಕ್ಷಾಂತರ ಲಾರಿಗಳು ಲಗ್ಗೆ ಹಾಕಿದ್ದು ಪಶ್ಚಿಮ ಘಟ್ಟಗಳ ಪತನವಾಗಲಾರಂಭಿಸಿವೆ.

**2. ಸಹ್ಯಾದ್ರಿ ಸಹನೆ ಕಳೆದುಕೊಳ್ಳಲು ಕಾರಣವೇನು? ಅದರ ಪರಿಣಾಮವೇನು?**
ಅರಣ್ಯಗಳ ಎಡೆಬಿಡದ ಬಳಕೆಯಿಂದಾಗಿ ಭೂಮಿಯ ಮೇಲಿನ ಮಣ್ಣಿನ ಕವಚ ತೊಳೆದುಹೋಗುತ್ತಿದೆ.ನೀರಿನ ಮೂಲವಾದ ಕೆರೆ, ಸರೋವರ, ನದಿ ಒಡ್ಡುಗಳಲ್ಲಿ ಹೂಳು ತುಂಬಿ ನೀರಿನ ನಿಕ್ಷೇಪ ಖಾಲಿಯಾಗುತ್ತಿದೆ.ಕೊಡಲಿ, ಸಿಡಿಮದ್ದುಗಳಿಂದ ಪಶ್ಚಿಮ ಘಟ್ಟಗಳು ತತ್ತರಿಸುತ್ತಿವೆ.ಪ್ರವಾಹದ ಹಾವಳಿ ಹೆಚ್ಚುತ್ತಿದೆ.ಕ್ಯಾಸನೂರು ರೋಗಾಣುಗಳು, ಕಾಡುಪ್ರಾಣಿಗಳು, ಸಾಂಕ್ರಾಮಿಕ ರೋಗಗಳು ನಾಡಿಗೆ ಲಗ್ಗೆ ಹಾಕಿವೆ. ಹವಾಮಾನದ ಏರುಪೇರು, ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತಗಳಿಗೆಲ್ಲ ಪಶ್ಚಿಮ ಘಟ್ಟಗಳ ವಿನಾಶವೇ ಕಾರಣವಾಗಿದೆ. ಅದರ ಪರಿಣಾಮವನ್ನು ನಾವು ಅನುಭವಿಸಬೇಕಾಗಿದೆ.

**ಗದ್ಯ – 5** **ಎಲ್ಲಿ ಹೋಗ್ಯಾವೊ ಆ ಕಾಲ**

**1. ಅಜ್ಜನು ಸಾಹೇಬರ ಮನೆಗೆ ಹೋಗಬೇಕಾಗಿ ಬಂದ ಘಟನೆಯನ್ನು ವಿವರಿಸಿ.**
ಲೇಖಕರ ಅಜ್ಜನು ಸ್ವಾಭಿಮಾನಿ ಶಿಕ್ಷಕರಾಗಿ ನಿವೃತ್ತರಾದವರು.ಸಂಬಂಧಿಕರ ಪ್ರೀತಿಗೆ ಕರಗಿ, ನಿಷೇಧಿಸಲಾಗಿದ್ದರೂ ಅಕ್ಕಿಯನ್ನು ಧಾರವಾಡದಿಂದ ವಿಜಾಪುರಕ್ಕೆ ರೈಲಿನಲ್ಲಿ ಹಾಸಿಗೆಯಲ್ಲಿ ಸುತ್ತಿ ತೆಗೆದುಕೊಂಡು ಹೊರಟಿದ್ದರು.ಆಗ ಅವರನ್ನು ಒಬ್ಬ ಪೊಲೀಸ್ ಬಂದು ಸಾಹೇಬರ ಮನೆಗೆ ಬರುವಂತೆ ತಿಳಿಸಿ ಜೀಪಿನಲ್ಲಿ ಕರೆದುಕೊಂಡು ಹೋದನು.ವಿಧಿ ಇಲ್ಲದೆ ಹೆದರಿ, ನಾಚಿಕೆಯಿಂದ ಸಾಹೇಬರ ಮನೆಗೆ ಹೋಗಬೇಕಾಗಿ ಬಂದಿತು.ಇದರಿಂದ ಅಜ್ಜನು ಕುಸಿದು ಹೋಗಿದ್ದರು.ಆಗಿನ ಕಾಲದಲ್ಲಿ ಪೊಲೀಸ್ ಜೀಪಿನಲ್ಲಿ ಹೋಗುವಷ್ಟು ಅಪಮಾನಕರವಾದ ಸಂಗತಿ ಮತ್ತೊಂದಿರಲಿಲ್ಲ.

**2. ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ಗೌರವವು ನೊಬೆಲಿಗೆ ಸಮಾನ ಎನಿಸಿದ್ದು ಹೇಗೆ? ವಿವರಿಸಿ.**
ಅಜ್ಜನು ಪೊಲೀಸ್ ಅಧಿಕಾರಿ ಮುಂದೆ ಕೈ ಮುಗಿದು ನಿಂತಿದ್ದನು.ಅದರೆ ಆ ಅಧಿಕಾರಿ ಅಜ್ಜನು ಶಿಕ್ಷಕರಾಗಿದ್ದಾಗ ಅವರ ಸಹಾಯದಿಂದ ಕಸಗುಡಿಸುವುದನ್ನು ಬಿಟ್ಟು, ಹಾಸ್ಟೆಲಿಗೆ ಸೇರಿ, ಓದಿ ಪೊಲೀಸ್ ಅಧಿಕಾರಿಯಾಗಿದ್ದನು.ಅವನು ಕೃತಜ್ಞತೆಯಿಂದ ಕಣ್ಣಲ್ಲಿ ನೀರು ಸುರಿಸುತ್ತಾ ದೀರ್ಘದಂಡ ಪ್ರಣಾಮ ಮಾಡಿ, "ಗುರುಗಳೇ ನಾನು ಮುರುಗೋಡದ ಭೀಮ್ಯಾ, ಮುಳವಾಡದಾಗ ನಿಮ್ಮ ಮನ್ಯಾಗಿದ್ದು ಕಲಿತ್ತಿದ್ದೆನಲ್ಲ" ಎಂದನು.ಇದನ್ನು ಕೇಳಿ ಅಜ್ಜ ಸಾಹೇಬನ ಕಪಾಳಕ್ಕೆ ಹೊಡೆದು "ಎಲಾ ಮಗನ ಭೀಮ್ಯಾ, ಪೊಲೀಸ್ ಆಗ್ಯೇನೋ" ಎಂದರು ಆತ ಮತ್ತೊಮ್ಮೆ ಅಜ್ಜನ ಕಾಲಿಗೆ ಬಿದ್ದು, ಹೆಂಡತಿಯಿಂದ ನಮಸ್ಕಾರ ಮಾಡಿಸಿದ. "ತನ್ನ ಮೈಮೇಲಿನ ಚರ್ಮ ಸುಲಿದು ಕಾಲಿಗೆ ಚಪ್ಪಲಿ ಮಾಡಿದ್ರು ಶಿಕ್ಷಕರ ಋಣ ತೀರೋದಿಲ್ಲ" ಎಂದ ಪೋಲಿಸ್ ಅಧಿಕಾರಿಯ ಮಾತು. ಇಬ್ಬರೂ ಪರಸ್ಪರ ಅಳುತ್ತ ಅಪ್ಪಿಕೊಂಡ ರೀತಿ ಇದು ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ನೊಬೆಲ್ ಪ್ರಶಸ್ತಿಗೆ ಸಮಾನ ಎನಿಸಿತು.

**ಗದ್ಯ– 6** **ಶಿಷ್ಯವತ್ಸಲ ರಾಮನ್**

**1. ರಾಮನ್ ಶಿಷ್ಯವತ್ಸಲರೆನಿಸಿದುದು ಹೇಗೆ?**
ರಾಮನ್‌ರು ಶಿಷ್ಯರನ್ನು ಅಂಕಗಳನ್ನು ಪರಿಗಣಿಸಿ ಅಯ್ಕೆ ಮಾಡುತ್ತಿರಲಿಲ್ಲ ಅವರ ಜ್ಞಾನ, ದೃಢ–ನಿಶ್ಚಯ ಎಲ್ಲವನ್ನು ಪರೀಕ್ಷಿಸಿ ಯೋಗ್ಯರನ್ನು ಯಾವುದೇ ಸ್ವಾರ್ಥವಿಲ್ಲದೆ ಆಯ್ಕೆ ಮಾಡಿಕೊಳ್ಳುತ್ತಿದ್ದರು.ಯಾರೊಬ್ಬರ ಶಿಫಾರಸ್ಸನ್ನು ಪರಿಗಣಿಸುತ್ತಿರಲಿಲ್ಲ ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು.ಅವರ ಪ್ರಗತಿ ವಿಚಾರಿಸಿಕೊಂಡು ಅವರನ್ನುನೇಮಕ ಮಾಡಿಕೊಳ್ಳುವ ಅಧಿಕಾರಿಗಳಿಗೆ ಪತ್ರ ಬರೆದು ತಕ್ಕಸ್ಥಾನವು ಸಿಗುವಂತೆ ಮಾಡುತ್ತಿದ್ದರು.ಉತ್ತಮವಾದ ಪ್ರತಿಭೆಯನ್ನು ಗುರುತಿಸಿ ಬೆನ್ನುತಟ್ಟಿ ಪ್ರೋತ್ಸಾಹ ಕೊಡುತ್ತಿದ್ದರು.

**2. ಶಿಷ್ಯರ ಸರ್ವತೋಮುಖ ಬೆಳವಣಿಗೆಗಾಗಿ ರಾಮನ್‌ರು ಮಾಡುತ್ತಿದ್ದು ಏನು?**
ಶಿಷ್ಯರನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತಿದ್ದರು. ಮಗನಿಗಿಂತ ಹೆಚ್ಚಾಗಿ ಎಚ್ಚರಿಕೆಯಿಂದ ಅವರಲ್ಲಿ ಮೇಲುಕೀಳು ಭಾವನೆ ಬರದಂತೆ ನೋಡಿಕೊಳ್ಳತ್ತಿದ್ದರು. ಶಿಷ್ಯರನ್ನು ಪುನಃಪುನಃ ಪ್ರಶ್ನಿಸಿ ಅವರಲ್ಲಿ ಹುದುಗಿದ್ದ ಶಕ್ತಿ ಹೊರಬರುವಂತೆ ನಿರ್ವಂಚನೆಯಿಂದ ದುಡಿವ ಗುರುಗಳಾಗಿದ್ದರು.ಶಿಷ್ಯರ ಉತ್ತಮ ಪ್ರಬಂಧವನ್ನು ಐದಾರು ಸಲ ತಿದ್ದಿ ಪ್ರಕಟಣೆಗೆ ಯೋಗ್ಯವೆಂದು ಒಪ್ಪಿ ಅವನ ಹೆಸರಿನಲ್ಲಿ ಪ್ರಕಟಣೆಗೆ ಕಳುಹಿಸುತ್ತಿದ್ದರು.ಶಿಷ್ಯರ ಸೆಮಿನಾರ್‌ಗಳಿಗೆ ತಪ್ಪದೇ ಹೋಗಿ ಎಲ್ಲವನ್ನೂ ಗ್ರಹಿಸಿ ಸಲಹೆ ಕೊಡುತ್ತಿದ್ದರು.ಮೈಯೆಲ್ಲ ಕಿವಿಯಾಗಿ ಶಿಷ್ಯರು ಕೊಟ್ಟ ಪ್ರತಿ ವಿವರವನ್ನು ಗ್ರಹಿಸುತ್ತಿದ್ದರು.ಸಂದೇಹ ಪರಿಹಾರ ಮಾಡಲು ತಮ್ಮದೇ ಸಲಹೆಗಳನ್ನು ಕೊಡುತ್ತಿದ್ದರು.

**3. 'ರಾಮನ್ – ನಾಥ್' ಸಿದ್ಧಾಂತ ಪ್ರಸಿದ್ಧಿಗೊಳ್ಳಲು ಮುಖ್ಯ ಕಾರಣ ಏನು?**
ರಾಮನ್ – ನಾಥ್ ಸಿದ್ಧಾಂತ ಪ್ರಸಿದ್ಧಿಗೊಳ್ಳಲು ಮುಖ್ಯ ಕಾರಣ ಏನೆಂದರೆ ರಾಮನ್‌ರು ಸೆಮಿನಾರುಗಳಲ್ಲಿ ಗುರುಶಿಷ್ಯರ ನಡುವೆ ನಡೆದ ವಾದ ವಿವಾದಗಳು ಹೊಸ ತತ್ತ್ವವೊಂದನ್ನು ಹೊರಗೆಡಹುವಲ್ಲಿ ಯಶಸ್ವಿಯಾಗುತ್ತಿದ್ದವು.ಗಣಿತದಲ್ಲಿ ಗಣ್ಯರಾದ ನರೇಂದ್ರನಾಥರಿಗೆ **"ನನ್ನ ಮನಸ್ಸಿಗೆ ಹಾಗೆ ತೋರುತ್ತದೆ ಗುಣಿಸಿನೋಡು"** ಎಂದರು.ಮಾರನೇ ದಿನ ಅದೇ ರೀತಿ ಆತ ಗುಣಾಕಾರ ಮಾಡಿ ಗಣಿತದ ಸಾಕ್ಷ್ಯವನ್ನು ಒದಗಿಸಿದಾಗ ಅವರ ಆನಂದಕ್ಕೆ ಪಾರವೇ ಇರಲಿಲ್ಲವಂತೆ.ನರೇಂದ್ರನಾಥರೊಡನೆ ಅಂದು ನಡೆಸಿದ ಚರ್ಚೆ ಮುಂದೆ **'ರಾಮನ್ – ನಾಥ್'** ಸಿದ್ಧಾಂತವೆಂದು ಪ್ರಸಿದ್ಧಿಗಳಿಸಿತು ಎನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

**4. ರಾಮನ್‌ರನ್ನು ಮ್ಯಾಕ್ಸ್ ಬಾರ್ನ್‌ರವರು ಏಕೆ ಮೆಚ್ಚಿಕೊಂಡಿದ್ದರು?**
ಶಿಷ್ಯರಾದವರು, ತಾವು ಮಾಡುತ್ತಿರುವ ಸಂಶೋಧನೆಗಳ ವಿವರಗಳನ್ನು ಸೆಮಿನಾರ್‌ಗಳಲ್ಲಿ ಪ್ರಸ್ತಾಪಿಸಬೇಕಾಗಿತ್ತು.ರಾಮನ್‌ರು ತಪ್ಪದೇ ಆ ಸೆಮಿನಾರ್‌ಗಳಲ್ಲಿ ಮೈಯೆಲ್ಲ ಕಿವಿಯಾಗಿ ಶಿಷ್ಯರು ಕೊಟ್ಟ ಪ್ರತಿ ವಿವರವನ್ನು ಗ್ರಹಿಸುತ್ತಿದ್ದರು.ಸಂದೇಹ ಪರಿಹಾರ ಮಾಡಲು ತಮ್ಮದೇ ಸಲಹೆಗಳನ್ನು ಕೊಡುತ್ತಿದ್ದರು.ಅವರ ಪ್ರಖರವಾದ ಬುದ್ಧಿ ಅನೇಕ ಹಂತಗಳನ್ನು ದಾಟಿ ಒಂದು ಬಗೆಯ ಒಳ ಅರಿವಿನ ಬಲದಿಂದ ಹೊಸ ಗುರಿಯೊಂದರತ್ತ ಹಾರುತ್ತಿತ್ತು.ಆ ಅದ್ಭುತ ಶಕ್ತಿಯನ್ನು ಕಂಡು ಮ್ಯಾಕ್ಸ್ ಬಾರ್ನ್‌ರವರು ಮೆಚ್ಚಿಕೊಂಡಿದ್ದರು.

## ಗದ್ಯ– 7 <u>ನನ್ನ ಗೋಪಾಲ</u>

**1. ಗೋಪಾಲನಲ್ಲಿ ತಾಯಿಗಿರುವ ಪ್ರೀತಿಯನ್ನು ಕುರಿತು ಬರೆಯಿರಿ.**
ಗೋಪಾಲನನ್ನು ಹೆತ್ತ ತಾಯಿಯು ಕಡುಬಡವಳಾಗಿದ್ದರೂ ಜೀವನ ನಿರ್ವಹಣೆ ಭಾರವನ್ನು ಅವಳು ಹೊತ್ತುಕೊಂಡು ಒಂದು ಸಣ್ಣ ಗುಡಿಸಲಲ್ಲಿ ವಾಸವಾಗಿದ್ದಳು.ಮಗನನ್ನು ಬಹಳವಾಗಿ ಪ್ರೀತಿಸುತ್ತಿದ್ದ ಅವಳು ಚರಕದಿಂದ ನೂಲು ತೆಗೆದು ಮಗನ ಓದಿಗೆ ಸಂಸಾರದ ಖರ್ಚನ್ನು ಬಹಳ ಕಷ್ಟದಿಂದಲೇ ನಿಭಾಯಿಸುತ್ತಿದ್ದಳು.ಮಗನು ಹೊಸಪಂಚೆ ಕೇಳಿದಾಗ ಹಗಲಿರುಳೂ ನೂತು ಸಂಪಾದಿಸಿ ಅದನ್ನು ಕೊಡಿಸಿದಳು.ಸಂಜೆಯ ವೇಳೆ ಶಾಲೆಯಿಂದ ಬರುವಾಗ ಕಾಡು ದಾಟುವ ಸಮಯ ಭಯವೆಂದಾಗ ಶ್ರೀಕೃಷ್ಣನನ್ನು ಪ್ರಾರ್ಥಿಸಿದಳು.ದೇವರು (ಗೋಪಾಲ) ನಿನ್ನ ರಕ್ಷಣೆಯನ್ನು ಮಾಡುವನೆಂದು ಹೇಳಿ ಅವನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ ಕಳುಹಿಸಿದಳು.ನಿನ್ನ ಅಣ್ಣ ಗೋಪಾಲನು ನಿನ್ನನ್ನು ಕಾಡು ದಾಟಿಸುವನು ಎಂದು ಹೇಳಿ ಶಾಲೆಗೆ ಕಳುಹಿಸಿ, ಅವನಲ್ಲಿ ಧೈರ್ಯ ತುಂಬುತ್ತಿದ್ದಳು.

**2. ಈ ಪಾಠದಲ್ಲಿ ಬಂದ ಪ್ರಕೃತಿಯ ವರ್ಣನೆಯ ಕುರಿತು ಬರೆಯಿರಿ.**
ಬೆಳಗಿನಲ್ಲಿ ಸೂರ್ಯನು ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದಲ್ಲಿ ಮಿರುಗುತ್ತಿದ್ದಾನೆ.ಕಾಡಿನಲ್ಲಿ ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತಬಾಳೆಯ ಹೂವು, ಗೋರಂಟಿಯ ಹೂವುಗಳು ಅರಳಿ ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣುತ್ತಿದ್ದವು.ಅದರ ಸುಗಂಧವೂ ಸುತ್ತಲೂ ಹರಡಿ ಹೊಸ ಸಂತೋಷವನ್ನು ಕೊಡುತ್ತಿತ್ತು.ಹಕ್ಕಿಗಳ ಇಂಪಾದ ಗಾನ, ತಂಗಾಳಿ, ಸೂರ್ಯ ದೇವನ ಹೊಂಬೆಳಕು ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಂತರ ಹಿಮಮಣಿಗಳು ಮಿರುಗುವ ಲೀಲೆ ಬಹಳ ಸೊಗಸಾಗಿತ್ತು.ಹೀಗೆ ಪ್ರಕೃತಿಯು ನಯನ ಮನೋಹರವಾಗಿ ಕಾಣುತ್ತಿತ್ತು.

**3. ಬನದ ಗೋಪಾಲನ ಹಾಡಿನ ಸಾರವನ್ನು ಬರೆಯಿರಿ.**
ಗೋಪಾಲನು ತಪಸ್ಸನ್ನು ಮಾಡಿದ ಮನುಷ್ಯರ ಒಲುಮೆಗೆ ಸೆರೆಯಾಗುವನು.ತಪಸ್ವಿಗಳು ಯುಗಯುಗಗಳು ತಪಸ್ಸನ್ನು ಮಾಡಿ ಯೋಗಿಗಳಾಗಲು ಸಾಧನೆಯನ್ನು ಮಾಡುವರು. ವಿಶಾಲವಾದ ಕಡಲಿಗಿಂತ ಭಕ್ತರ ಕಣ್ಣೀರು ಅವನ ಇರುವಿಕೆಯ ಸ್ಥಾನವಾಗಿದೆ.ಪರ್ವತದ ಎತ್ತರಕ್ಕಿಂತ ಭಕ್ತರ ಹೃದಯಮಂದಿರವನ್ನು ಆತನು ಬಯಸುತ್ತಾನೆ. ಬೃಂದಾವನದಲ್ಲಿ ಗೋಪಿಕೆಯರು ಆಡುವ ಮಾತಿನಲ್ಲಿ ವೇದಗಳಲ್ಲಿ ಇರುವ ಸಾರವು ಸತ್ಯವು ಅಡಗಿದೆ. ಹಾಲನು ಮಾರುವ ಹೆಣ್ಣುಗಳ ಪ್ರೀತಿಯು ಯೋಗಿಯ ಸಾಧನೆಯನ್ನು ಕೂಡಾ ಮೀರಿದ್ದು ಎಂದು ಗೋಪಾಲನು ಕೊಳಲನ್ನೂದುತ್ತಾ ಹಾಡುತ್ತಾನೆ.

## ಪದ್ಯಭಾಗ

**ಪದ್ಯ–1** **ಅರಿವು**

**1. ಮೈದಾನದವೈಶಾಲ್ಯವು ಕವಿತೆಯ ನಾಯಕಿಗೆ ಆತ್ಮಸ್ಥೈರ್ಯವನ್ನು ಹೇಗೆ ತಂದುಕೊಟ್ಟಿತು?**

ಮೈದಾನದ ವೈಶಾಲ್ಯವು ಕವಿತೆಯ ನಾಯಕಿಗೆ ತಿಳುವಳಿಕೆಯನ್ನು ತಂದುಕೊಟ್ಟಿತು.ತನ್ನ ಅಡಿಗೆ ಮನೆಯ ಸಣ್ಣತನವು ಗೊತ್ತಾಗಿ ಹೋಯಿತು. ಅದರಿಂದ ಹೊರಬರುವ ಧೈರ್ಯವು ಮೂಡಿತು.ತನಗೆ ಆಗುತ್ತಿರುವ ಅನ್ಯಾಯಗಳನ್ನು ವಿರೋಧಿಸಿದಳು. ಸಂಪ್ರದಾಯ, ಧರ್ಮ ಕಟ್ಟುಪಾಡುಗಳ ಹೆಸರಲ್ಲಿ 'ಅಬಲೆ' ಎಂಬ ತಾತ್ಸಾರವನ್ನು ಮೀರಿದಳು.ತಾನು ತನ್ನ ಇರುವಿಕೆಯನ್ನು ಸಾಧಿಸಿ ತೋರಿಸುವ ಹಂತಕ್ಕೆ ಬಂದಳು. 'ಶಿಕ್ಷಣ' ಎಂಬ ಅರಿವಿನಿಂದ ನಾಯಕಿಗೆ ಪ್ರೋತ್ಸಾಹವು ದೊರಯಿತು.ಹೀಗೆ ಅಡಿಗೆ ಮನೆಯಿಂದ ಎಲ್ಲವನ್ನೂ ಝಾಡಿಸಿ ಹೊರಬಂದಾಗ ಆತ್ಮಸ್ಥೈರ್ಯವು ಉಂಟಾಗಿ ತನ್ನಲ್ಲಿ ಭರವಸೆಯು ಮೂಡುತ್ತದೆ.

**2. ನಿತ್ಯದುಡಿಮೆಯ ಹೆಣ್ಣಿನ ನೋವು–ನಲಿವು 'ಅರಿವು' ಕವಿತೆಯಲ್ಲಿ ಹೇಗೆ ವರ್ಣಿತವಾಗಿದೆ?**

ಮಹಾಮನೆಯಲ್ಲಿ ಹೆಣ್ಣು ಅಡಿಗೆ ಬೇಯಿಸಿ, ಬಡಿಸಿ ಸೋತು ಬಳಲುತ್ತಾಳೆ.ಆಕೆ ಧರ್ಮ ಸಂಪ್ರದಾಯಗಳ ಬಂಧನದಲ್ಲಿ ಸಿಲುಕಿದ್ದಳು.ಅವಳುಅಸಹಾಯಕಳಾಗಿ ದಿನವೂ ಬೇರೆಯವರಿಗಾಗಿ ದುಡಿದೂ ದುಡಿದೂ ಬಳಲಿ ತನ್ನ ಇರುವಿಕೆಯನ್ನೇ ಮರೆತಿರುತ್ತಾಳೆ.ನಂತರ ಆಕೆಗೆ ಅರಿವು ಮೂಡಿದಾಗ ತನ್ನ ಮೇಲೆ ಆಗುತ್ತಿರುವ ದಬ್ಬಾಳಿಕೆಯನ್ನೂ ಅನ್ಯಾಯವನ್ನು ಪ್ರತಿಭಟಿಸುತ್ತಾಳೆ.ಅಡಿಗೆ ಮನೆಯಿಂದ ಹೊರಬಂದು ವಿಶಾಲವಾದ ಬಯಲಿಗೆ ಬಂದಾಗ ತನ್ನ ಮಹಾಮನೆಯ ಸಣ್ಣತನ ಗೊತ್ತಾಗಿ ಹೋಗುತ್ತದೆ.ಆನಂದವು ಹೆಚ್ಚಾಗಿ ತಾನು ಕಣ್ಮುಚ್ಚಿದಾಗ ಆಕೆಗೆ ತನ್ನ ಇರುವಿಕೆಯ ಅರಿವು ಉಂಟಾಗುತ್ತದೆ.

**ಪದ್ಯ – 2** **ನನ್ನ ಹಾಗೆಯೇ**

**1. "ನೀನು ಸೋತು ಗೆದ್ದೆ ಅಣ್ಣ ನಾನು ಗೆದ್ದು ಸೋತೆನು" ಎಂದು ಬಾಹುಬಲಿಯು ಹೇಳಿದ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿ.**

ಭರತನು ತನ್ನ ಶಸ್ತ್ರಾಗಾರದಲ್ಲಿ ಹುಟ್ಟಿದ ಚಕ್ರರತ್ನವು ದಿಗ್ವಿಜಯದ ನಂತರ ಅಯೋಧ್ಯೆಯನ್ನು ಪ್ರವೇಶಿಸದ ಕಾರಣ ಪೌದನಪುರದ ರಾಜ ಭರತನ ತಮ್ಮ ಬಾಹುಬಲಿಗೆ ಶರಣಾಗಬೇಕೆಂದು ಸಂದೇಶ ಕಳುಹಿಸುತ್ತಾನೆ.ಇದಕ್ಕೆ ಒಪ್ಪದ ಬಾಹುಬಲಿಯು ಅಣ್ಣನೊಂದಿಗೆ ದ್ವಂದ್ವ ಯುದ್ಧದಲ್ಲಿ ಜಯಗಳಿಸಿದನು.ಆದರೆ ಅವನಿಗೆ ಇದರಿಂದ ಸಮಾಧಾನವಾಗದೆ ತಾನು ಅಣ್ಣನಿಗೆ ಅಪಮಾನ ಮಾಡಿದ್ದು ಸರಿಯಲ್ಲವೆಂದು ತಿಳಿದು, ಗೆದ್ದ ರಾಜ್ಯವನ್ನು ಅಣ್ಣನಿಗೆ ಒಪ್ಪಿಸಿ, ತಾನು ವೈರಾಗ್ಯಪರನಾಗಿ ತಪಸ್ಸಿಗೆ ತೆರಳುತ್ತಾನೆ. "ಗೊಮ್ಮಟೇಶ"ನೆನಿಸುತ್ತಾನೆ. ಹುಟ್ಟು ಸಾವಿನ ಪ್ರಶ್ನೆಗೆ ಉತ್ತರವು ತಪಸ್ಸಿನಿಂದ ಮಾತ್ರ ದೊರೆಯುತ್ತದೆಂದು ಘೋರವಾದ ತಪಸ್ಸಿನಲ್ಲಿ ತೊಡಗುತ್ತಾನೆ.

**2. ನನ್ನ ಹಾಗೆಯೇ ಕವನದ ಅರ್ಥವನ್ನು ಗದ್ಯ ರೂಪದಲ್ಲಿ ಬರೆಯಿರಿ.**

ಇತ್ತೀಚೆಗೆ ಬಾಹುಬಲಿಗೆ ಇಂದ್ರಗಿರಿ ಬೆಟ್ಟದಲ್ಲಿ ಹಾಲಿನ ಅಭಿಷೇಕವು ನಡೆದಾಗ ಒಂದು ಪುಟ್ಟ ಮಗು ತಾತನನ್ನು ಆತನ ಬಗ್ಗೆ ವಿಚಾರಿಸಿತು.ಆಗ ಆತನು ಇವನು ಬಾಹುಬಲಿ ಧೀರತನದ ಮೂರ್ತಿಯು ಇವನನ್ನುಇವನ ಕೀರ್ತಿಯನ್ನು ಜನರು ಹಾಡುವರು ಎಂದು ಉತ್ತರಿಸಿದನು.ಮಗುವು ಇಷ್ಟು ಎತ್ತರದಲ್ಲಿ ಬಾಹುಬಲಿಗೆ ಭಯವಾಗುವುದಿಲ್ಲವೆ ಎಂದು ಕೇಳಿತು.ಅದಕ್ಕೆ ತಾತನು ಈತ ಅಭಯಮೂರ್ತಿಯು ಅಣ್ಣ ಭರತನು ಅಹಂಕಾರದಲ್ಲಿ ತಮ್ಮನೊಂದಿಗೆ ಹೋರಾಡಿ ಸೋತನು.ಆದರೆ ಗೆದ್ದ ಬಾಹುಬಲಿಯು ಅಣ್ಣನಿಗೆ ರಾಜ್ಯವನ್ನು ಒಪ್ಪಿಸಿ,"ನಾನುಗೆದ್ದು ಸೋತೆ, ನೀನು ಸೋತು ಗೆದ್ದೆ ಅಣ್ಣ" ಎಂದುಕ್ಷಮೆಯಾಚಿಸಿ ಹುಟ್ಟು ಸಾವಿನ ಉತ್ತರ ತಿಳಿಯಲು ಘೋರ ತಪಸ್ಸಿಗೆ ನಿಂತನು. ಸೂರ್ಯ ಚಂದ್ರರೇ ಈತನಿಗೆ ಪ್ರದಕ್ಷಿಣೆ ಹಾಕಿದರು. ದೀಪದಂತೆ ನಿಂತ ಇವನಿಗೆ ಜನರು "ನಮೋ ಎಂದು ನುಡಿವರು" ಎಂದನು.ಆಗ ಮಗುವು ತಾತ "ಅಮ್ಮ ನನಗೆ ಎರೆವ ಮುಂಚೆ ಎಣ್ಣೆ ಹಚ್ಚಿ ಹೀಗೆಯೇ ನಿಲ್ಲಿಸುವಳು, ಬಾಹುಬಲಿಯೂ ಕೂಡ ನನ್ನ ಹಾಗೆಯೇ ಕಣ್ಣು ತೆರೆದು ಮೊದಲ ಚೆಂಬಿಗಾಗಿ ಕಾಯುತ್ತಿರುವನು" ಎಂದಿತು.ಮಗುವಿನ ಈ ಮುಗ್ಧನಂಬಿಕೆಯನ್ನು ಕಂಡು **ಗೊಮ್ಮಟೇಶ** ನಕ್ಕು ಬಿಟ್ಟನು.

**ಪದ್ಯ – 3** **ಸವಿಚೈತ್ರ**

**1. ಚೈತ್ರವು 'ಸವಿ' ಆದದ್ದು ಹೇಗೆ?**

ಚೈತ್ರಮಾಸವು ಯುಗದ ಆದಿಯಕಾಲ, ಸುಗ್ಗಿಯ ಕಾಲ, ಜಗತ್ತು ಹೊಸ ಕಳೆಯಿಂದ ತುಂಬಿರುತ್ತದೆ.ಚೈತ್ರವೆಂದರೆ ವಸಂತಕಾಲ ಅದು ಋತುಗಳ ರಾಜ.ಈ ಋತುವಿನಲ್ಲಿ ಫಲಪುಷ್ಪಗಳಿಂದ ಸಮೃದ್ಧವಾಗಿರುವುದು. ಬಗೆಬಗೆಯ ಬಣ್ಣಗಳಿಂದ ಬರೆದ ಚಿತ್ರದ ಹಾಗೆ ಈ ಭೂಮಿತಾಯಿ ನವವಧುವೆ ಆಗಿ ಕಂಗೊಳಿಸುತ್ತಾಳೆ. ಒಣಗಿರುವ ರೆಂಬೆ ಕೊಂಬೆಗಳು ಚಿಗುರು ಎಲೆಗಳಿಂದ ತುಂಬಿ ಕಳಕಳಿಸುತ್ತವೆ. ಕೋಗಿಲೆಯ ಮಧುರಗಾನವು ಹಕ್ಕಿಗಳ ಚಿಪಿಪಿಲಿ ಕಲರವ ಮತ್ತನ್ನು ತುಂಬಿದೆ, ಎಲ್ಲಾ ಕಡೆ ಹೊಸ ಉಲ್ಲಾಸದಿಂದ ತುಂಬುತ್ತದೆ. ಹಿಂದಿನ ಹಳೆಯ ಎಲ್ಲಾ ಕೊಳೆಯು ಹೋಗಿ ಹೊಸ ಹೊಸ ಭಾನೆಗಳಿಂದ ಬೇವು ಬೆಲ್ಲದಿಂದ ಕಹಿ ಕಳೆದು ಸುಖದುಃಖಗಳನ್ನು ಸಮಾನವಾಗಿ ಸ್ವೀಕರಿಸಿದ್ದರಿಂದ ಸಿಹಿಯು ಹೆಚ್ಚಿ ಎಲ್ಲರ ಮನಸ್ಸಿನ ಸಂತೋಷವು ತುಂಬಿ ಸವಿಯು ಮೂಡುತ್ತದೆ.

**2. ಚೈತ್ರವೇ ಯುಗದ ಆದಿ ಎಂಬುದನ್ನು ಕವಿಯು ಹೇಗೆ ಸಮರ್ಥಿಸಿದ್ದಾರೆ?**

ಚೈತ್ರವೆಂದರೆ ವಸಂತ ಋತುವಿನ ಕಾಲ ಈ ಋತುವಿನಲ್ಲಿ 'ಯುಗಾದಿ' ಹಬ್ಬವು ಬರುತ್ತದೆ ಅಂದರೆ ಹೊಸ ವರುಷದ ಪ್ರಾರಂಭದ ಕಾಲ, ವಸಂತನೆಂದರೆ ಋತುಗಳ ರಾಜ.ಈ ಋತುವಿನಲ್ಲಿ ಮರಗಿಡಗಳೆಲ್ಲಾ ಚಿಗಿತು, ಫಲಪುಷ್ಪಗಳಿಂದ ಸಮೃದ್ಧವಾಗಿರುವುದು.ಚೈತ್ರಮಾಸದಲ್ಲಿ ಬಗೆಬಗೆಯ ಬಣ್ಣಗಳ ಹೂಗಳು ಅರಳುತ್ತವೆ.ಎಲ್ಲಾ ಕಡೆ ಹೊಸಕಳೆಯಿಂದ ಬರೆದ ಚಿತ್ರದ ಹಾಗೆ ಈ ಭೂಮಿ ತಾಯಿಯು ನವವಧುವಿನಂತೆ ಕಂಗೊಳಿಸುತ್ತಾಳೆ. ಚೈತ್ರಮಾಸ ಎಂದರೆ ಕವಿಗಳ ಮೆಚ್ಚಿನ ಕಾಲವೂ ಹೌದು ಚೈತ್ರದ ಸೊಬಗನ್ನು ಬಣ್ಣಿಸದ ಕವಿಯೇ ಇಲ್ಲ. ಹೀಗೆ ಚೈತ್ರವೇ ಯುಗದ ಆದಿಯ ಕಾಲ ಎಂಬುದನ್ನು ವರ್ಣಿಸಿದ್ದಾರೆ.ಸ್ವರ್ಗದ ಸಂತೋಷವನ್ನು ಸುಗ್ಗಿಯನ್ನು ಈ ಕಾಲವು ತರುತ್ತದೆ ಎಂಬುದು ಕವಿಯ ಆಶಯವಾಗಿದೆ.

**3. ನೆಲದಮ್ಮ ನವವಧುವೆ ಆದಳು – ಈ ಮಾತಿನ ಅರ್ಥ ವಿಶೇಷವನ್ನು ಬರೆಯಿರಿ.**

ವಸಂತ ಋತುವಿನಲ್ಲಿ ಮರಗಿಡಗಳು ಹೊಸ ಚಿಗುರೆಲೆಗಳಿಂದ ತುಂಬುತ್ತವೆ. ಬಗೆಬಗೆಯ ಬಣ್ಣದ ಹೂಗಳು ಅರಳಿ ಕಂಪನ್ನು ಬೀರುತ್ತವೆ. ಮಾವು ಬೇವು ಮುಂತಾದ ಮರಗಳಲ್ಲಿ ಫಲಪುಷ್ಪಗಳು ತುಂಬುತ್ತವೆ.ಮಾವಿನ ಚಿಗುರನ್ನು ಸವಿದು ಕೋಗಿಲೆಯು ಇಂಪಾಗಿ ಹಾಡುವ ಗಾನವು ಭೂಮಿಯ ಎಲ್ಲಾ ಕಡೆ ಮೊಳಗುತ್ತದೆ.ಜೊತೆಗೆ ಪಕ್ಷಿಗಳ ಕಲರವವು ಸೊಬಗನ್ನು ಹೆಚ್ಚಿಸಿ ಈ ಭೂಮಿತಾಯಿಯು ಬಣ್ಣಬಣ್ಣದ ಚಿತ್ರದಂತೆ ಕೂಡಿ ನಳನಳಿಸುತ್ತಾಳೆ. ಎಲ್ಲಾ ಕಡೆ ಹಸಿರಿನಿಂದ ಭೂಮಿ ನವವಧುವಿನಂತೆ ಕಂಗೊಳಿಸುತ್ತಾಳೆಂದು ಕವಿ ವರ್ಣಿಸಿದ್ದಾರೆ.

**ಪದ್ಯ – 4** **ಸದ್ದು ಮಾಡದಿರು**

**1. "ಸದ್ದು ಮಾಡದಿರು" ಕವನದ ಸಾರವನ್ನು ತಿಳಿಸಿರಿ.**

ಜೀವನದಲ್ಲಿ ಆಡಂಬರ ಕೀರ್ತಿ ಇವುಗಳಿಗೆ ಜನ ಮನಸೋಲುವುದು ಸಾಮಾನ್ಯ ಇವುಗಳನ್ನು ಪಡೆಯುವುದೇ ಜೀವನದ ಸಾರ್ಥಕ್ಯವೆಂದು ಬಹಳಷ್ಟು ಮಂದಿ ತಿಳಿದಿದ್ದಾರೆ.ಆದರೆ ನಮ್ಮ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ಮಾತ್ರ ಯಾವುದೇ ಸದ್ದುಗದ್ದಲವಿಲ್ಲದೆ ತನ್ನೆಲ್ಲಾ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇರುತ್ತದೆ.ನಾವು ಕೂಡ ನಮ್ಮ ಜೀವನದ ತೀರವನ್ನು ಸದ್ದು ಮಾಡದೆ ಸೇರಬೇಕು.ಕರ್ಪೂರ, ದೀಪದಂತೆ ಬೆಳಗಬೇಕು. ಹಸಿಸೌದೆ ಸಿಡಿಮದ್ದು ಗದ್ದಲ ಮಾಡುವಂತೆ ಮಾಡದೆ ಇಬ್ಬನಿಯಂತೆ ಮೌನಿಯಾಗಿ ಕೋಪವನ್ನು ಬಿಟ್ಟು ಬಾಳಬೇಕು. ಶಾಂತಿಯಿಂದ ಜೀವನವನ್ನು ನಡೆಸಬೇಕು ಎಂಬುದೇ ಈ ಪದ್ಯದ ಸಾರವಾಗಿದೆ.

**2. ಕರ್ತವ್ಯದ ಬಗ್ಗೆ ಸಿ.ಪಿ.ಕೆ. ಯವರ ಧೋರಣೆ ಏನು?**

ಮನುಷ್ಯನು ಬದುಕಿನಲ್ಲಿ ತನ್ನ ಕರ್ತವ್ಯವನ್ನು ಮೌನವಾಗಿ ನಡೆಸಬೇಕು. ಹೇಗೆ ತಟ್ಟೆಯಲ್ಲಿ ಕರ್ಪೂರವು ಮೌನವಾಗಿ ಉರಿದು ಕರಗುವುದೋ ಹಾಗೆ ದೀಪದ ಎದುರಿಗೆ ಕತ್ತಲೆಯು ಸರಿಯುವ ಹಾಗೆ ಬಾಳಬೇಕು. ಕೂಗಾಡಿ ಹಾರಾಡಿ ಫಲವೇನು ಹಸಿಸೌದೆಯು ಬುಸುಗುಡುತ್ತದೆ ಸಿಡಿಮದ್ದು ಬರೆ ಸದ್ದು ಮಾಡುತ್ತದೆ. ಹಾಗೆ ಬಾಳದೆ ಸೂರ್ಯನ ಕಿರಣಕೆ ಇಬ್ಬನಿಯು ಮೌನವಾಗಿ ಕರಗುವಂತೆ ಕೋಪ ತಾಪಗಳನ್ನು ತೊರೆದು ಮೌನಿಯಾಗಿ ಕರ್ತವ್ಯವನ್ನು ಮುಗಿಸು ಎಂದು ಸಿ.ಪಿ.ಕೆ ಯವರು "ಸದ್ದು ಮಾಡದಿರು" ಪದ್ಯದಲ್ಲಿ ತಮ್ಮ ಧೋರಣೆಯನ್ನು ತಿಳಿಸಿದ್ದಾರೆ.

**ಪದ್ಯ – 5** **ಗುರಿ**

**1. ಗುರಿ ಪದ್ಯದ ಸಾರಾಂಶವನ್ನು ಬರೆಯಿರಿ.**

ಬದುಕಿಗೊಂದು ಗುರಿ ಇಲ್ಲದಿದ್ದರೆ ಅದು ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆ ಇಲ್ಲದೆ ಅಪಾರವಾದ ಕಡಲಿನಲ್ಲಿ ಚುಕಾಣಿ ಇಲ್ಲದೆ ನೌಕೆಯನ್ನು ನಡೆಸಿದಂತಾಗುತ್ತದೆ.ಜೀವನವು ಸಾರ್ಥಕವಾಗಬೇಕಾದರೆ, ನಮ್ಮ ದುಡಿಮೆಗೆ ಫಲವು ಸಿಗಬೇಕಾದರೆ ಒಂದು ನಿಯಮವು ಇರಬೇಕು.ಕೆಸರಿನಲ್ಲಿದ್ದರೂ ಕಮಲದ ಹೂ ಸೂರ್ಯನ ಕಿರಣಕೆ ಅರಳುವಂತೆ ಕೆಟ್ಟಗುಣಗಳನ್ನು ಅಂಟಿಸಿ ಕೊಳ್ಳದೆ ಬಾಳಬೇಕು.ಗಾಳಿ ಬಂದಡೆ ತಿರುಗುವಾ ಹೇಡಿತನ ಬೇಡ ಹೆಣ್ತನವು ಬೇಡ, ಪೌರುಷದಿಂದ ಸರಿದಾರಿಯಲ್ಲಿ ಸಾಗುಬೇಕು.ಒಂದು ಬಾಣಕೆ ಒಂದೇ ಗುರಿ, ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ಜೀವನದಲ್ಲಿ ಅವಕಾಶವು ಒಂದೆ ಸಾರಿ ಸಿಗುತ್ತದೆ.ಅದಕ್ಕೆ ಒಂದೇ ಗುರಿಗಾಗಿ ಹೋರಾಡಬೇಕು.ಪರಹಿತಕ್ಕಾಗಿ ಬಾಳಬೇಕು.ನರನಲ್ಲಿ ನಾರಾಯಣನನ್ನು ಕಾಣಬೇಕು.ಸ್ವಾರ್ಥವನ್ನು ಮರೆತು ಪರಹಿತಕ್ಕಾಗಿ ದುಡಿಯಬೇಕು ಎಂದು ಕವಿ ತಿಳಿಸಿದ್ದಾರೆ.

**ಪದ್ಯ – 6** **ಮಗು**

**ಮಗು ಪದ್ಯದಲ್ಲಿ ಮಕ್ಕಳ ಬಗೆಗೆ ಜನಪದರ ಅಭಿಪ್ರಾಯ ಹೇಗೆ ಚಿತ್ರಣಗೊಂಡಿದೆ?**

ತಾಯಿಗೆ ತನ್ನ ಮಗುವನ್ನು ಎಷ್ಟು ವರ್ಣಿಸಿದರೂ ಸಾಲದು, ಮಗು ಅತ್ತರೆ ಕಣಗೀಲೆ ಹೂವಿನ ಗಿಡವು ಒಣಗಿದ್ದ ಬಾಳೆಗಿಡವು ಚಿಗುರುತ್ತವೆ. ಗೊಡ್ಡು ಹಸು ಹಾಲು ಕೊಡುತ್ತದೆ ಎಂಬುದಾಗಿ ಜನಪದರು ಹೇಳುತ್ತಾರೆ. ಹಸಿದ ಮಕ್ಕಳಿಗೆ ಹತ್ತಿರ ಮನೆ ಇಲ್ಲ ತಾಯಿಗೆ ತೊಟ್ಟಿಲಲ್ಲಿನ ಮಗುವನ್ನು ಕಂಡಾಗ ಅವಳ ಹಸಿವು ಮಾಯವಾಗಿ ಸಂತಸ ತುಂಬುತ್ತದೆ. ತಾಯಿಯು ಮಗುವಿನ ಚೆಲುವನ್ನು ಬಾದಾಮಿ ಎಲೆತೋಟದ ಸೌಂದರ್ಯಕ್ಕೆ ಹಾಗೂ ಕಲಕೇರಿ ತೇರಿನ ಸುಂದರತೆಗೆ ಹೋಲಿಸಿ ಆನಂದ ಪಡುತ್ತಾಳೆ. ಹೆಣ್ಣು ಮಕ್ಕಳು ಹುಟ್ಟಿದ ಮತ್ತು ಮೆಟ್ಟಿದ ಮನೆ ಬೆಳಗಿದರೆ, ಗಂಡು ಮಕ್ಕಳು ಹುಟ್ಟಿದ ಮನೆಯ ಹೆಸರನ್ನು ಬೆಳಗುತ್ತಾರೆ ಎಂದು ಜನಪದರು ತಮ್ಮ ಹಾಡಿನ ಮೂಲಕ ತಮ್ಮ ಭಾವನೆಗಳನ್ನು ಹಂಚಿಕೊಂಡಿದ್ದಾರೆ.

**ಪದ್ಯ – 7** **ವಚನಗಳು**

**1. ಶರಣರ ವಚನಗಳಲ್ಲಿಯ ಸ್ವಾರಸ್ಯವನ್ನು ವಿವರಿಸಿ.**

ನೀರನ್ನು ಕಂಡರೆ ಜನರು ಮುಳುಗೇಳುತ್ತಾರೆ, ಮರವನ್ನು ಸುತ್ತುತ್ತಾರೆ, ಬತ್ತುವ ಜಲ, ಮತ್ತು ಒಣಗುವ ಮರವನ್ನು ಮೆಚ್ಚಿದವರು ದೇವರನ್ನು ಅರಿಯಲಾರರು ಎಂದು ಬಸವಣ್ಣನವರು ಹೇಳಿದ್ದಾರೆ.ಕಾವಿ ತೊಟ್ಟು ಅವರಲ್ಲಿ ಒಳ್ಳೆಯ ಜ್ಞಾನ ಇಲ್ಲದಿದ್ದರೆ ವೇದವನ್ನು ಓದಿಯೂ ಫಲವಿಲ್ಲ.ಕೆರೆಗಳನ್ನು ತೋಡಿದರೆ ನೀರು ಬರಬೇಕು, ಇಲ್ಲದಿದ್ದರೆ ಅವು ವ್ಯರ್ಥ ಎಂದು ಸಿದ್ಧರಾಮರು ಹೇಳುತ್ತಾರೆ.ಹೀಗೆ ಶರಣರು ತಮ್ಮ ವಚನಗಳಲ್ಲಿ ನಿಜವಾದ ಭಕ್ತಿಯ ಬಗ್ಗೆ ವಿವರಿಸುತ್ತಾರೆ. ಹಾಗೂ ತೋರಿಕೆಯ ಪೂಜೆ, ಆಡಂಬರವನ್ನು ವಿರೋಧಿಸುತ್ತಾರೆ.

**2. ಅಕ್ಕಮಹಾದೇವಿಯ ವಚನದಲ್ಲಿಯ ವಿಚಾರಗಳು ಇಂದೂ ಪ್ರಸ್ತುತವೇ ವಿವರಿಸಿ.**

ಅಕ್ಕಮಹಾದೇವಿಯು ಶಿವಶರಣೆ ಆಕೆಯು ನಿಜವಾದ ಭಕ್ತಿಯನ್ನು ಜ್ಞಾನವನ್ನು ವಿವರಿಸುತ್ತಾರೆ. ನೆರಳು ನೀಡದ ಮರವಿದ್ದು ಫಲವಿಲ್ಲ, ದಯವಿರದ ಮನುಷ್ಯನಲ್ಲಿ ಹಣವಿದ್ದರೂ ಯಾವ ಉಪಯೋಗವೂ ಇಲ್ಲ, ಹಾಲು ಕೊಡದ ಹಸುವಿದ್ದು ಫಲವಿಲ್ಲ, ಗುಣವಿಲ್ಲದ ರೂಪಿನಿಂದ ಯಾವ ಉಪಯೋಗವಿಲ್ಲ, ಊಟವೇ (ಅನ್ನ) ಇರದೆ ಬರೇ ತಟ್ಟೆ ಇದ್ದರೆ ಯಾವ ಫಲವೂ ಇಲ್ಲ. ಚೆನ್ನಮಲ್ಲಿಕಾರ್ಜುನನ ಜ್ಞಾನವಿಲ್ಲದಿದ್ದರೆ ತಾನಿದ್ದು ಫಲವಿಲ್ಲ ಅಂತಹ ಜೀವನವು ವ್ಯರ್ಥವೆಂದು ವೈರಾಗ್ಯ ಜ್ಞಾನ ಸಂಪನ್ನವಾಗಿರುವ ಅಕ್ಕನ ವಚನಗಳಿಗೆ ಸಾಹಿತ್ಯದಲ್ಲಿ ವಿಶಿಷ್ಠವಾದ ಸ್ಥಾನವಿದೆ.ಈ ಕಾರಣದಿಂದಾಗಿ ಅಕ್ಕನ ವಿಚಾರಗಳು ಇಂದಿಗೂ ಬಹಳ ಪ್ರಸ್ತುತವಾಗಿವೆ.

**ಪದ್ಯ – 8** **ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ**

**1. ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.**

ಕೌರವರು ವಿರಾಟರಾಜನ ಗೋವುಗಳನ್ನು ಅಪಹರಿಸುತ್ತಾರೆ.ಪಾಂಡವರನ್ನು ಹುಡುಕುವ ಉದ್ದೇಶ ಅವರದಾಗಿರುತ್ತದೆ.ಉತ್ತರಕುಮಾರನ ಸಾರಥಿಯಾಗಿ ಅರ್ಜುನನು ಬೃಹನ್ನಳೆಯ ವೇಷದಲ್ಲಿ ರಣರಂಗಕ್ಕೆ ಬಂದಾಗ ಕೌರವರ ಭಯಂಕರ ಸೈನ್ಯವನ್ನು ಕಂಡು, ಶಿವನಿಂದ ಮಾತ್ರ ಈ ಸೇನೆಯನ್ನು ಗೆಲ್ಲುವುದಕ್ಕೆ ಸಾಧ್ಯ ತನ್ನಿಂದಾಗದು, ಎಂದು ಉತ್ತರನು ರಥದ ಹಿಂಬದಿಯಿಂದ ಧುಮುಕಿ, ಬೆನ್ನು ತಿರುಗಿಸಿ, ಬಿಟ್ಟಮಂಡೆಯಲ್ಲಿ ಓಡಲು ತೊಡಗುತ್ತಾನೆ.ಆಗ ಅರ್ಜುನ ಅವನನ್ನು ತಡೆದು ಅರಮನೆಯಲ್ಲಿ ಹೆಂಗಳೆಯರ ಮುಂದೆ ಜಂಭ ಕೊಚ್ಚಿದ ಪ್ರಸಂಗವನ್ನು ನೆನೆಪಿಸುತ್ತಾನೆ.ಆದರೆ ಉತ್ತರ ಕುಮಾರನು ತನಗೆ ತನ್ನ ಅರಮನೆಯ ಸೌಖ್ಯವೇ ಸಾಕು ಎಂದು ಉತ್ತರಿಸುತ್ತಾನೆ. ಇಂದ್ರಪದವಿಯು ತನಗೆ ಬೇಡ, ಅಪ್ಸರೆಯರು ಬೇಡ, ನನಗೆ ನಮ್ಮ ಅರಮನೆಯ ಸ್ತ್ರೀಯರೇ ಸಾಕು, ನನ್ನ ಜೀವ ಉಳಿದರೆ ಅಷ್ಟೇ ಸಾಕೆಂದು ಓಡತೊಡಗಿದನು.ಆಗ ಅರ್ಜುನನು

ಉತ್ತರನಿಗೆಅಂಜುಬುರಕ ನಾಡನರಿಯ ಹಾಗೆ ಓಡುವುದು ಸರಿಯಲ್ಲ **'ಕಾದು ನಡೆ'**ಎಂದನು.ಆತನ ಮಾತನ್ನು ಉತ್ತರನು ಕೇಳದೆ ಪ್ರಾಣಭಯದಿಂದ ಅಲ್ಲಿಂದ ಪಾರಾಗಲು ಬಯಸಿದನು.

**2. ಅರ್ಜುನ ಮತ್ತು ಉತ್ತರ ಇವರ ಗುಣ ಸ್ವಭಾವದಲ್ಲಿಯ ವ್ಯತ್ಯಾಗಳನ್ನು ಬರೆಯಿರಿ.**

ಅರ್ಜುನನು ಧೈರ್ಯ, ಪರಾಕ್ರಮ, ವೀರತನದ ಸಂಕೇತವಾದರೆ ಉತ್ತರನು ಹೇಡಿತನ ಜಂಭದ ಪ್ರತೀಕವಾಗಿದ್ದಾನೆ. ನಗೆಪಾಟಲಿಗೆ ಗುರಿಯಾಗುವ ಉತ್ತರನಂತಹ ಬದುಕು ಬೇಡ ಅರ್ಜುನನ ಹಾಗೆ ಧೀಮಂತರಾಗಬೇಕು ಎಂಬ ಸಂದೇಶವೂ ಇವರ ಗುಣಸ್ವಭಾವಗಳಲ್ಲಡಗಿದೆ.ಅರಮನೆಯಲ್ಲಿ ಹೆಂಗೆಳೆಯರ ಮುಂದೆ ಜಂಭ ಕೊಚ್ಚಿಕೊಂಡ ಉತ್ತರ ಕುಮಾರ ಕೌರವ ಸೈನ್ಯವನ್ನು ನೋಡಿ ಭಯದಿಂದ ಬಿಟ್ಟಮಂಡೆಯಲಿ ಓಡುತ್ತಾನೆ. ಇವನನ್ನು ನೋಡಿ ಎಲ್ಲರೂ ನಗುತ್ತಾರೆ.ನನಗೆ ಇಂದ್ರಪದವಿಯು ಬೇಡ, ಅಪ್ಸರೆಯರು ಬೇಡ, ನನ್ನ ಅರಮನೆಯ ಸ್ತ್ರೀಯರೇ ಸಾಕು, ನನ್ನ ಜೀವ ಉಳಿದರೆ ಅಷ್ಟೇ ಸಾಕೆಂದು ಓಡತೊಡಗಿದನು.ಅವನ ಈ ನಡೆವಳಿಕೆ ಎಲ್ಲರಿಗೂ ನಗುವನ್ನು ತರಿಸುತ್ತದೆ.ಆದರೆ ಅರ್ಜುನ ಶೌರ್ಯದ ಪ್ರತೀಕವಾಗಿದ್ದಾನೆ. ತನ್ನ ಪರಾಕ್ರಮದಿಂದ ಕೌರವ ಸೇನೆಯೊಡನೆ ಹೋರಾಡಿ, ವಿಕ್ರಮವನ್ನು ಪಡೆದು, ವಿಜಯಶಾಲಿಯಾದುದು ಅವನ ಭುಜಬಲ ಪರಾಕ್ರಮಕ್ಕೆ ಕನ್ನಡಿಯಾಗಿದೆ. ಇದಕ್ಕಾಗಿಯೇ ಎಲ್ಲರೂ ಬಯಸುವುದು ಅರ್ಜುನನಂತಹ ಮಗನನ್ನು ಉತ್ತರಕುಮಾರನಂತವನನಲ್ಲ!

## ಪ್ರಬಂಧ ಲೇಖನ

## ಪರಿಸರ ಸಂರಕ್ಷಣೆ

ನಮ್ಮ ಸುತ್ತಮುತ್ತಲಿನ ವಾತಾವರಣವನ್ನು 'ಪರಿಸರ' ಎನ್ನುತ್ತೇವೆ. ಇದರಲ್ಲಿ ನೆಲ, ಜಲ, ಕಾಡು, ಗಾಳಿ, ಪ್ರಾಣಿವರ್ಗ, ಪಕ್ಷಿಸಂಕುಲ ಎಲ್ಲವೂ ಸೇರುತ್ತದೆ.ಇಂತಹ ಸುಂದರ ಪರಿಸರ ಮಾನವನ ದುರಾಸೆಯಿಂದ ನಾಶವಾಗುತ್ತಿವೆ. ಹಲವು ಬಗೆಯ ಕಾರಣಗಳಿಂದಾಗಿ ಈ ಪರಿಸರ ಮಲಿನವಾಗುತ್ತಿದೆ.

ನೆಲ, ಜಲ, ಗಾಳಿ, ಎಲ್ಲವೂ ಮಲಿನವಾಗುತ್ತಿರುವುದನ್ನು ನೋಡಿದರೆ ಇದನ್ನು ಸಂರಕ್ಷಣೆ ಮಾಡಬೇಕು ಎಂಬ ಚಿಂತನೆ ನಮ್ಮಲ್ಲಿ ಮೂಡುತ್ತದೆ. ಹೆಚ್ಚುತ್ತಿರುವ ಜನಸಂಖ್ಯೆ, ಬೆಳೆಯುತ್ತಿರುವ ನಗರಗಳು, ದೊಡ್ಡ ದೊಡ್ಡ ಕೈಗಾರಿಕೆಗಳು, ಗಣಿಗಾರಿಕೆ ಸಂಪನ್ಮೂಲಗಳ ಅತಿಯಾದ ಬಳಕೆ ಹೆಚ್ಚು ವಾಹನಗಳ ಬಳಕೆಯಿಂದಾಗಿ ಪರಿಸರ ಮಲಿನತೆಯು ತನ್ನ ಪರಮಾವಧಿಯನ್ನ ಮುಟ್ಟಿದೆ.ಮಲಿನಮಯ ಪರಿಸರ ಬದುಕಿಗೆ ಮಾರಕವಾಗುತ್ತದೆ.ಇದರಿಂದ ಹಲವು ಬಗೆಯ ಕಂಡುಕೇಳರಿಯದ ಭಯಂಕರ ರೋಗಗಳು ಬಂದಿವೆ.ಮಾನವನ ಶಾಂತಿ ಕದಡಿ ಅವನ ಬದುಕು ಯಾತನಾಮಯವಾಗುತ್ತಿದೆ.

ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒಂದೇ ಅದು ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು.ಕಾರ್ಖಾನೆಗಳು ಕಲುಶಿತ ವಸ್ತುಗಳನ್ನು ನದಿಗೆ ಬಿಡಬಾರದು.ವ್ಯರ್ಥವಾದ ರಸಾಯನಿಕ ಪದಾರ್ಥಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕು.ಆಸ್ಪತ್ರೆಯ ತ್ಯಾಜ್ಯಗಳನ್ನು ಸರಿಯಾಗಿ ಸಂಸ್ಕರಣೆ ಮಾಡಬೇಕು.ಎಲೆಕ್ಟ್ರಾನಿಕ್ ತ್ಯಾಜ್ಯಗಳು, ಪ್ಲಾಸ್ಟಿಕ್ ಮೊದಲಾದ ಕೊಳೆಯದ ವಸ್ತುಗಳ ಸಂಸ್ಕರಣೆ ವ್ಯವಸ್ಥಿತವಾಗಿ ನಡೆಯಬೇಕು.

ಗಿಡಮರಗಳನ್ನು ಹೆಚ್ಚು ಹೆಚ್ಚು ಬೆಳೆಸಬೇಕು.ಕಾಡನ್ನು ನಾಶಮಾಡಬಾರದು.ನೀರಿನ ಮೂಲಗಳು ಬತ್ತದಂತೆ ನದಿಗಳಿಗೆ ವಿಷಯುಕ್ತ ಪದಾರ್ಥಗಳು ಸೇರದಂತೆ ಎಚ್ಚರಿಕೆ ವಹಿಸಬೇಕು.ನಾವು ಪರಿಸರವನ್ನು ರಕ್ಷಿಸಿದರೆ ನಮ್ಮನ್ನು ಪರಿಸರ ಸಂರಕ್ಷಣೆ ಮಾಡುತ್ತದೆ.ನಾವೆಲ್ಲರೂ ಈ ನಿಟ್ಟಿನಲ್ಲಿ ಪ್ರಯತ್ನಿಸೋಣ.

## ಮಹಿಳಾ ಜಾಗೃತಿ

ಮಾನವನು ಪ್ರಾಣಿ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠನೆಂದು ಪರಿಗಣಿಸಲ್ಪಟ್ಟಿದ್ದಾನೆ. ಮಾನವನು ಸಂಘಜೀವಿಯಾಗಿದ್ದಾನೆ ಇದರಿಂದ ಹಿಂದಿನಿಂದಲೂ ಗಂಡು ಹೆಣ್ಣು ಸಮಾನವಾಗಿ ಬದುಕು ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ.ಆದರೆ ನಮ್ಮ ಸಮಾಜದಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಗಂಡಸಿಗೆ ಪ್ರಾಧಾನ್ಯತೆ ದೊರೆತಿದೆ, ಹೆಣ್ಣು ಹಲವು ಹಕ್ಕುಗಳಿಂದ ವಂಚಿತಳಾಗಿದ್ದಾಳೆ.

ಬಾಲ್ಯದಲ್ಲಿ ಜೊತೆಗೆ ಬದುಕಬೇಕೆಂದು ಅಲಿಖಿತ ನಿಮಯವಿದೆ.ಆದರೆ ಇಂದು ಹೆಣ್ಣು, ಗಂಡು ನಿರ್ವಹಿಸಬಹುದಾದ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಾಳೆ.ಕೇವಲ ಗೃಹಿಣಿಯಾಗಿ ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿ ಉಳಿದಿಲ್ಲ.

ಇಂದು ಮಹಿಳೆ ಉನ್ನತ ಶಿಕ್ಷಣವನ್ನು ಗಳಿಸಿ ವಕೀಲೆ, ವಿಜ್ಞಾನಿ, ಇಂಜಿನಿಯರ್, ಮುಖ್ಯಮಂತ್ರಿ, ರಾಜ್ಯಪಾಲ, ಪ್ರಧಾನಿ, ರಾಷ್ಟ್ರಪತಿಯಂತಹ ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾಳೆ.ದೊಡ್ಡ ಸಂಸ್ಥೆಗಳ ಸಿ.ಇ.ಓ ಆಗಿ ಆ ಸಂಸ್ಥೆಯನ್ನು ಮುನ್ನಡೆಸಿದ್ದಾಳೆ.

ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಅಂದರೆ ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ, ರಾಜಕೀಯ, ಕ್ರೀಡೆಗಳು ಹೀಗೆ ಎಲ್ಲ ಕಡೆಯೂ ಮಹಿಳೆ ತನ್ನ ಶ್ರೇಷ್ಠತೆಯನ್ನು ಮೆರೆಯುತ್ತಿದ್ದಾಳೆ.ಇದಕ್ಕೆಲ್ಲ ಕಾರಣ ಬಹಳ ಮುಖ್ಯವಾಗಿ ಶೈಕ್ಷಣಿಕವಾಗಿ ಜಾಗೃತಿಯಾಗುತ್ತಿರುವುದು.

ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತಿರುವ ಮಹಿಳೆಯರಿಗೆ ಇಂದು ಹಲವು ಬಗೆಯ ತೊಂದರೆಗಳು ಎದುರಾಗುತ್ತಿವೆ.ಲೈಂಗಿಕ ಶೋಷಣೆ, ಅತ್ಯಾಚಾರ, ಅಸಮಾನತೆ ಇವೇ ಮೊದಲಾದ ಅಮಾನವೀಯ ಘಟನೆಗಳು ನಡೆಯುತ್ತಿವೆ.ಸಮಾಜದಲ್ಲಿನ ಶೋಷಣೆಗಳು ದೂರವಾಗಲೇಬೇಕಾದರೆ ಹೆಣ್ಣು ಮಕ್ಕಳು ಸಂಘಟಿತರಾಗಬೇಕು.ಆರ್ಥಿಕವಾಗಿ ಸದೃಢರಾಗಬೇಕು.ಹೀಗಾದಾಗ ಮಾತ್ರ ಸಮಾಜದಲ್ಲಿ ತಾಯಿಯಾಗಿ, ಸಹೋದರಿಯಾಗಿ, ಮಗಳಾಗಿ, ಹೆಂಡತಿಯಾಗಿ ಗಂಡಿಗೆ ಆಧಾರವಾಗಿ ಉನ್ನತ ಸ್ಥಾನವನ್ನು ಪಡೆದುಕೊಳ್ಳುವುದು ಸಾಧ್ಯವಾಗುತ್ತದೆ.ಈ ನಿಟ್ಟಿನಲ್ಲಿ ನಾವೆಲ್ಲ ಆಲೋಚಿಸೋಣ.

## ಉತ್ತಮ ಹವ್ಯಾಸಗಳು

ಪ್ರತಿಯೊಬ್ಬರೂ ಬದುಕಲು ಒಂದು ಉದ್ಯೋಗವನ್ನು ಮಾಡುತ್ತಾರೆ.ಇದನ್ನು ವೃತ್ತಿ ಎಂದು ಕರೆಯುತ್ತಾರೆ.ಈ ವೃತ್ತಿಯ ಜೊತೆಗೆ ಆತ್ಮ ಸಂತೋಷಕ್ಕೆ, ಶಾಂತಿಗಾಗಿ, ನೆಮ್ಮದಿಗಾಗಿ ಒಂದು ಪ್ರವೃತ್ತಿಯನ್ನು ರೂಢಿಸಿಕೊಂಡಿರುತ್ತೇವೆ.ಇದನ್ನು 'ಹವ್ಯಾಸ' ಎಂದು ಕರೆಯುತ್ತಾರೆ.ಒಳ್ಳೆಯ ಹವ್ಯಾಸಗಳು ನಮ್ಮನ್ನು ಸದಾ ಉತ್ಸಾಹದಿಂದ, ಸಂತೋಷದಿಂದ ಇರುವಂತೆ ಮಾಡುತ್ತವೆ.ಇಂತಹ ಒಳ್ಳೆಯ ಹವ್ಯಾಸಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸಬೇಕು.
ಉತ್ತಮ ಹವ್ಯಾಸಗಳಿಂದಾಗಿ ಸಮಯದ ಸದುಪಯೋಗವಾಗುತ್ತದೆ.ಸೋಮಾರಿತನ ದೂರವಾಗುತ್ತದೆ.ಸೃಜನಶೀಲ ಪ್ರವೃತ್ತಿ ಬೆಳೆಯುತ್ತದೆ.ಸಹಾಯ, ಸಹಕಾರದ ಮನೋಭಾವ ಬೆಳೆಯುತ್ತದೆ.ಜೊತೆಗೆ ಇದೆಲ್ಲವನ್ನು ಸಾಧಿಸಿದ ಸಂತೃಪ್ತಿ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತದೆ.

ಉತ್ತಮವಾದ ಹವ್ಯಾಸಗಳಿಂದ ದಿನನಿತ್ಯದ ಜೀವನ ಉಲ್ಲಸಿತವಾಗಿರುತ್ತದೆ.ಅದರಿಂದ ಕ್ರಿಯಾಶೀಲ ಬದುಕು ಸಾಧ್ಯವಾಗುತ್ತದೆ.ಹಾಗಾದರೆ ಉತ್ತಮ ಹವ್ಯಾಸಗಳೆಂದರೆ ಯಾವುವು? ಹೊಸಹೊಸ ಪುಸ್ತಕಗಳನ್ನು ಓದುವುದು, ಅಂಚೆ ಚೀಟಿಗಳನ್ನು ಸಂಗ್ರಹಿಸುವುದು, ಹಳೆಯ ನಾಣ್ಯ ನೋಟುಗಳನ್ನು ಸಂಗ್ರಹಿಸುವುದು, ಗೆಳೆಯರಿಗೆ ಸಂಬಂಧಿಕರಿಗೆ ಪತ್ರ ಬರೆಯುವುದು, ಪಕ್ಷಿಧಾಮಗಳಿಗೆ ಭೇಟಿ ನೀಡುವುದು, ಪ್ರವಾಸಗಳನ್ನು ಮಾಡುವುದು, ಒಗಟು ಗಾದೆಗಳನ್ನು ಸಂಗ್ರಹಿಸುವುದು, ಸುಭಾಷಿತಗಳನ್ನು ಸಂಗ್ರಹಿಸುವುದು, ಬೊಂಬೆಗಳ ಸಂಗ್ರಹ ಚಿತ್ರ ಬರೆಯುವುದು, ಕವನಗಳನ್ನು ರಚಿಸುವುದು, ಭಾಷಣ ಮಾಡುವುದು, ಮುದ್ದು ಪ್ರಾಣಿಗಳನ್ನು ಸಾಕುವುದು ಮೊದಲಾದವು ಒಳ್ಳೆಯ ಹವ್ಯಾಸಗಳಾಗಿವೆ.

ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳುವ ಮೂಲಕ ನಾವು ಉಲ್ಲಾಸವನ್ನು ಪಡೆಯಬಹುದು.ನಮ್ಮಲ್ಲಿರುವ ಸುಪ್ತ ಪ್ರತಿಭೆ ಅಭಿವ್ಯಕ್ತವಾಗಲು ಇವು ನಮಗೆ ಸಹಾಯಕವಾಗುತ್ತವೆ.ನಾವು ಸಹ ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಂಡು ನಮ್ಮ ಬದುಕನ್ನು ಹಸನು ಮಾಡಿಕೊಳ್ಳೋಣ.

## ಆದರ್ಶ ವಿದ್ಯಾರ್ಥಿ

ಯುವಕ ಯುವತಿಯರು ಒಂದು ರಾಷ್ಟ್ರದ ಸಂಪತ್ತು.ಒಂದು ರಾಷ್ಟ್ರ ನಿರ್ಮಾಣದಲ್ಲಿ ಯುವಜನರ ಪಾತ್ರ ಸಾಕಷ್ಟಿದೆ, ಅದರಲ್ಲೂ ಆದರ್ಶ ವಿದ್ಯಾರ್ಥಿಗಳು ಕಿರೀಟದಲ್ಲಿರುವ ರತ್ನವಿದ್ದಂತೆ.ಅವರು ನಮ್ಮ ದೇಶಕ್ಕೆ ಗೌರವವನ್ನು ತರಬಲ್ಲರು. ವಿದ್ಯಾರ್ಜನೆಯನ್ನೇ ಗುರಿಯನ್ನಾಗಿಟ್ಟುಕೊಂಡು ಕಷ್ಟಪಟ್ಟು ಅಭ್ಯಾಸಮಾಡಿ ಜ್ಞಾನ ಸಂಪಾದಿಸಲು ಉತ್ಸುಕರಾಗಿರುತ್ತಾರೆ. ಅವರು ವಿಧೇಯರು ಹಾಗೂ ಸಮಯ ಪಾಲಕರಾಗಿ ಏಕಾಗ್ರತೆಯಿಂದ ಪಾಠದ ಕಡೆ ಸಂಪೂರ್ಣ ಗಮನ ಕೊಡುತ್ತಾರೆ.ಕೇವಲ ಪಠ್ಯಪುಸ್ತಕ ಓದುವುದರಿಂದ ತೃಪ್ತರಾಗುವುದಿಲ್ಲ ಅವರು ಜ್ಞಾನಪಿಪಾಸುಗಳಾಗಿರುತ್ತಾರೆ.

ಒಬ್ಬ ಆದರ್ಶ ವಿದ್ಯಾರ್ಥಿ ಹೀರುವ ಕಾಗದವಿದ್ದಂತೆ ಎಲ್ಲರಿಂದಲೂ ಕಲಿಯಲು ಪ್ರಯತ್ನಿಸುತ್ತಾನೆ. "ಕೆಲವಂ ಬಲ್ಲವರಿಂದ ಕಲಿತು, ಕೆಲವಂ ಮಾಳ್ಪವರಿಂದ ಕಂಡು" ಎಂದು ಸೋಮೇಶ್ವರ ಶತಕ ತಿಳಿಸುತ್ತದೆ.ಆದರ್ಶ ವಿದ್ಯಾರ್ಥಿ ಯಾವಾಗಲೂ ಉನ್ನತವಾಗಿ ಚಿಂತಿಸುತ್ತಾನೆ, ಸರಳವಾಗಿ ಜೀವಿಸುತ್ತಾನೆ.ಆದರ್ಶ ವಿದ್ಯಾರ್ಥಿಯು ತಂದೆ, ತಾಯಿ, ಗುರು ಹಿರಿಯರಿಗೆ ನೆರವನ್ನು ನೀಡುತ್ತಾನೆ. ಸಮಾಜಮುಖಿಯಾಗಿ ಚಿಂತಿಸುತ್ತಾನೆ..ಅವನಲ್ಲಿರುವ ಒಳ್ಳೆಯ ಗುಣ ನಡತೆಯಿಂದಾಗಿ ಎಲ್ಲರ ಮೆಚ್ಚುಗೆಗೆ ಪಾತ್ರನಾಗುತ್ತಾನೆ.

ಆದರ್ಶ ವಿದ್ಯಾರ್ಥಿ ಯಾವಾಗಲೂ ಕೋಪಗೊಳ್ಳುವುದಿಲ್ಲ, ಸದಾ ಶಾಂತನಾಗಿರುತ್ತಾನೆ, ಪ್ರಾಮಾಣಿಕನಾಗಿರುತ್ತಾನೆ, ದಿನಾ ಒಳ್ಳೆಯ ಕೆಲಸಗಳನ್ನು ಮಾಡುತ್ತಾನೆ.ಒಬ್ಬ ಆದರ್ಶ ವಿದ್ಯಾರ್ಥಿ ಒಬ್ಬ ರಾಷ್ಟ್ರ ನಿರ್ಮಾಪಕನಾಗಿರುತ್ತಾನೆ. ಅವನು ಒಂದು ರಾಷ್ಟ್ರದ ಆಸ್ತಿ.ಜೀವನದಲ್ಲಿ ಒಂದು ಒಳ್ಳೆಯ ಗುರಿಯನ್ನು ಹೊಂದಿರುತ್ತಾನೆ.ತನ್ನ ಸದ್ಗುಣಗಳಿಂದ ತನ್ನ ತಾಯಿ ತಂದೆ ಬಳಗಕ್ಕೆ ಸಂತೋಷವನ್ನು ತರುತ್ತಾನೆ. ಈ ಎಲ್ಲಾ ಸುಗುಣಗಳನ್ನು ರೂಢಿಸಿಕೊಂಡು ನಾವೂ ಸಹ ಆದರ್ಶ ವಿದ್ಯಾರ್ಥಿಗಳಾಗೋಣ.ಭವ್ಯ ಭಾರತವನ್ನು ಕಟ್ಟೋಣ.

## ಬಾಲಕಾರ್ಮಿಕ ಪದ್ಧತಿ

**ಪ್ರಸ್ತಾವನೆ :–** 5 ರಿಂದ 16 ವರ್ಷವಯಸ್ಸಿನ ಒಳಗೆ ದುಡಿಯುವ ಮಕ್ಕಳನ್ನು 'ಬಾಲಕಾರ್ಮಿಕರು' ಎನ್ನುವರು.ಬಾಲಕರು ಅನೇಕ ಕಾರಣಗಳಿಂದಾಗಿ ನಾಲ್ಕು ಐದು ವರ್ಷವಾಗುತ್ತಿದ್ದ ಹಾಗೆ ಕೆಲಸಕ್ಕೆ ಹೋಗಬೇಕಾದ ಪರಿಸ್ಥಿತಿಗೆ ಒಳಗಾಗುತ್ತಾರೆ.ಬಡ ಕುಟುಂಬದಲ್ಲಿ ಜನಿಸಿದ ಬಾಲಕರು ಹಸಿವಿನ ತೊಂದರೆಗೆ ಸಿಲುಕುವ ಕಾರಣ ಬಾಲಕಾರ್ಮಿಕರಾಗುತ್ತಾರೆ.

**ವಿಷಯ ನಿರೂಪಣೆ :–**ಬಾಲಕಾರ್ಮಿಕರು ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲೂ ಇದ್ದಾರೆ. ಮಾಲೀಕರಿಗೆ ಅತ್ಯಂತ ಕಡಿಮೆ ಕೂಲಿಯಲ್ಲಿ ಪ್ರಾಮಾಣಿಕವಾಗಿ ದುಡಿಯುವ ಕೈಗಳು ಬೇಕಾಗಿರುವುದು, ಚಿಕ್ಕವಯಸ್ಸಿನ ಕೆಲವು ಮಕ್ಕಳು ಮನೆ ಬಿಟ್ಟು ಬಂದು ನಗರ ಸೇರಿಕೊಳ್ಳುವುದು ಬಾಲಕಾರ್ಮಿಕರ ಹೆಚ್ಚಳಕ್ಕೆ ಕಾರಣ.ಭಾರತ ಹಳ್ಳಿಗಳ ದೇಶ. ಹಳ್ಳಿಗಳಲ್ಲಿ ವ್ಯವಸಾಯದ ಬದುಕನ್ನು ಬಿಟ್ಟರೆ ಬೇರೆ ಉದ್ಯೋಗಗಳ ಬೆಳವಣಿಗೆಗೆ ಅವಕಾಶವಿಲ್ಲ. ವ್ಯವಸಾಯವೊಂದನ್ನೇ ನಂಬಿದ ಜನರಿಗೆ ಸಾಕಷ್ಟು ಉದ್ಯೋಗ ವರ್ಷಪೂರ್ತಿ ದೊರೆಯುವುದಿಲ್ಲ. ನಗರಕ್ಕೆ ವಲಸೆ ಬರತೊಡಗಿದ ಹಳ್ಳಿಯವರು ಕೆಲಕಾಲ ನಗರದಲ್ಲಿದ್ದು, ಪುನಃ ಹಳ್ಳಿಗೆ ಹಿಂತಿರುಗಲು ಬಯಸುವುದಿಲ್ಲ. ಹತ್ತು–ಹದಿನೈದು ವಯಸ್ಸಿನವರೆಗೆ ಅಲ್ಪ ಸ್ವಲ್ಪ ವಿದ್ಯೆ ಕಲಿತ ಮಕ್ಕಳು ತಂದೆ ತಾಯಿಯರಿಗೆ ನೆರವಾಗುವ ಆಸೆಯಿಂದ ಚಿಕ್ಕಪುಟ್ಟ ಕೆಲಸಗಳಿಗೆ ಸೇರಿಕೊಂಡು ಬಾಲಕಾರ್ಮಿಕರಾಗಿ ದುಡಿಯುವ ಸನ್ನಿವೇಶ ನಿರ್ಮಾಣವಾಗುತ್ತದೆ. ಇಂದು ಬಾಲಕಾರ್ಮಿಕ ಪದ್ಧತಿಯನ್ನು ಸರ್ಕಾರ ನಿಷೇಧಿಸಿದೆ.ಬಾಲಕಾರ್ಮಿಕರನ್ನು ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ.

**ಉಪಸಂಹಾರ :–**ಇಂದಿಗೂ ಕೆಲವು ಕಡೆ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವರನ್ನು ಸಂರಕ್ಷಿಸಿ, ಇಂತಹ ಮಕ್ಕಳಿಗೆ ವಿದ್ಯೆ ಕಲಿಯುವಂತೆ ಮಾಡಿ, ಸಮಾಜದ ಮುಖ್ಯವಾಹಿನಿಗೆ ಸೇರುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು.ಬಾಲಕಾರ್ಮಿಕರ ಬಗೆಗೆ ಸರಕಾರ, ತಂದೆ ತಾಯಿಯರು ಸಮಾಜ ಎಚ್ಚರ ವಹಿಸುವುದು ಅತ್ಯಗತ್ಯ ಎಂಬುದು ನನ್ನ ಅಭಿಪ್ರಾಯವಾಗಿದೆ.

## ಮಳೆ ನೀರು ಕೊಯ್ಲು

**ಪ್ರಸ್ತಾವನೆ :–** ನೀರು ಜೀವನಾವಶ್ಯಕ ವಸ್ತು. ಸಕಾಲಕ್ಕೆ ಮಳೆಯಾಗದೆ ನೀರಿನ ಕ್ಷಾಮ ಉಂಟಾಗುತ್ತಿದೆ.ಇಂದು ಅಂತರ್ಜಲದ ಮಟ್ಟ ಕುಸಿಯುತ್ತಿದೆ.ಆದ್ದರಿಂದ ನೀರಿನ ಮೂಲಗಳನ್ನು ಸಂರಕ್ಷಿಸುವುದು ಇಂದಿನ ಅತ್ಯಗತ್ಯವಾದ ಕಾರ್ಯವಾಗಿದೆ.ಇಂತಹ ಕಾರ್ಯಗಳಲ್ಲಿ ಮಳೆನೀರು ಕೊಯ್ಲು ವಿಧಾನ ಸಹ ಒಂದಾಗಿದೆ.

**ವಿಷಯ ನಿರೂಪಣೆ :–** ಮಳೆನೀರು ಕೊಯ್ಲು ಎಂಬುದು ಮಳೆನೀರನ್ನು ಒಟ್ಟುಗೂಡಿಸುವ, ಅಥವಾ ಸಂಚಯನ ಮಾಡುವ ಮತ್ತು ಶೇಖರಿಸಿಟ್ಟುಕೊಳ್ಳುವ ವಿಧಾನಕ್ಕಿರುವ ಹೆಸರು. ಕುಡಿಯುವ ನೀರನ್ನು ಒದಗಿಸಲು, ಜಾನುವಾರುಗಳಿಗೆ ನೀರುಣಿಸಲು, ನೀರಾವರಿಗಾಗಿ ನೀರಿನ ವ್ಯವಸ್ಥೆ ಮಾಡಲು ಅಥವಾ ಅಂತರ್ಜಲ ಪುನರ್ಭರ್ತಿಕಾರ್ಯ ಎಂದು ಕರೆಯಲಾಗುವ ಪ್ರಕ್ರಿಯೆಯೊಂದರಲ್ಲಿ ನೀರುಪೊಟರೆಯನ್ನು ಪುನಃ ತುಂಬಿಸಲು ಮಳೆನೀರು ಕೊಯ್ಲುಪದ್ಧತಿಯನ್ನು ಬಳಸಿಕೊಂಡು ಬರಲಾಗಿದೆ.ಮನೆಗಳು, ಗುಡಾರಗಳು ಮತ್ತು ಸ್ಥಳೀಯ ಸಾರ್ವಜನಿಕ ಕಟ್ಟಡಗಳ ಛಾವಣಿಗಳಿಂದ ಅಥವಾ ವಿಶೇಷವಾಗಿ ಸಿದ್ಧಗೊಳಿಸಲಾದ ನೆಲದ ಪ್ರದೇಶಗಳಿಂದ ಸಂಗ್ರಹಿಸಲಾದ ಮಳೆನೀರು, ಕುಡಿಯುವ ನೀರಿಗೆ ತನ್ನದೇ ಆದ ಪ್ರಮುಖ ಕೊಡುಗೆಯನ್ನು ನೀಡಬಲ್ಲದು. ಛಾವಣಿಯ ಮಳೆನೀರು ಸಾಮಾನ್ಯವಾಗಿ ಉತ್ತಮ ಗುಣಮಟ್ಟದ್ದಾಗಿ ಇರುತ್ತದೆ ಆದ್ದರಿಂದ, ಬಳಕೆಗೆ ಮೊದಲು ಅದನ್ನು ಸಂಸ್ಕರಿಸುವ ಅಗತ್ಯ ಕಂಡು ಬರುವುದಿಲ್ಲ. ಸರಳವಾದ ವಿಧಾನದಿಂದ ಮೊದಲ್ಗೊಂಡು ಸಂಕೀರ್ಣವಾದ ಕೈಗಾರಿಕಾ ವ್ಯವಸ್ಥೆಗಳವರೆಗೆ ಮಳೆ ನೀರನ್ನು ಕೊಯ್ಲು ಮಾಡಲು ಹಲವಾರು ವಿವಿಧ ವ್ಯವಸ್ಥೆಗಳಿವೆ. ಸಾಮಾನ್ಯವಾಗಿ ಮಳೆನೀರನ್ನು ನೆಲದಿಂದ ಇಲ್ಲವೇ ಛಾವಣಿಯೊಂದರಿಂದ ಕೊಯ್ಲು ಮಾಡಲಾಗುತ್ತದೆ. ಈ ಎರಡೂ ವ್ಯವಸ್ಥೆಗಳಿಂದ ನೀರನ್ನು ಸಂಗ್ರಹಿಸಬಹುದಾದ ವೇಗವು ಸದರಿ ವ್ಯವಸ್ಥೆಯ ಯೋಜನಾ ಪ್ರದೇಶ, ಅದರ ಸಾಮರ್ಥ್ಯ ಮತ್ತು ಮಳೆಸುರಿತದ ತೀವ್ರತೆಯನ್ನು ಅವಲಂಬಿಸಿರುತ್ತದೆ.ಮಳೆನೀರನ್ನು ಅಂತರ್ಜಲ ಪುನರ್ಭರ್ತಿ ಕಾರ್ಯಕ್ಕೂ ಬಳಸಬಹುದಾಗಿದ್ದು ಇದರಲ್ಲಿ ನೆಲದ ಮೇಲೆ ಹರಿಯುವ ಹೆಚ್ಚುವರಿ ಪ್ರಮಾಣದ ನೀರು ಸಂಗ್ರಹಿಸಲ್ಪಡುತ್ತದೆ ಹಾಗೂ ಹೀರಿಕೆಗೆ ಒಳಗಾಗುವುದರ ಮೂಲಕ ಅಂತರ್ಜಲದ ಪ್ರಮಾಣದಲ್ಲಿ ಹೆಚ್ಚಳವಾಗಲು ಕಾರಣ ವಾಗುತ್ತದೆ.

**ಉಪಸಂಹಾರ :–** ಸ್ಥಳೀಯವಾಗಿ ದೊರೆಯುವ ಹೆಚ್ಚು ದುಬಾರಿಯಲ್ಲದ ಸಾಮಗ್ರಿಗಳಿಂದ ಮಳೆನೀರು ಕೊಯ್ಲಿನ ವ್ಯವಸ್ಥೆಗಳನ್ನು ಸರಳವಾಗಿ ನಿರ್ಮಿಸಬಹುದು. ಬಹುತೇಕ ವಾಸಯೋಗ್ಯ ತಾಣಗಳಲ್ಲಿ ಇದು ಯಶಸ್ವಿಯಾಗಿದೆ.ಆದ್ದರಿಂದ ಜನರು ಈ ಬಗ್ಗೆ ಹೆಚ್ಚು ಗಮನಹರಿಸಿ, ತಮ್ಮತಮ್ಮ ಮನೆಗಳಲ್ಲಿ, ಹೊಲಗಳಲ್ಲಿ ಮಳೆನೀರು ಕೊಯ್ಲಿನ ವ್ಯವಸ್ಥೆ ಮಾಡಿಕೊಂಡರೆ ನೀರಿನ ಸಮಸ್ಯೆಯನ್ನು ಬಹುಮಟ್ಟಿಗೆ ನಿವಾರಿಸಿಕೊಳ್ಳಬಹುದಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

## ಸಾವಯವ ಬೇಸಾಯ

**ಪ್ರಸ್ತಾವನೆ :–** ಇಂದು ಕೃಷಿ ಕ್ಷೇತ್ರದಲ್ಲಿ ಅನೇಕ ರೀತಿಯ ಸಂಶೋಧನೆಗಳು ನಡೆಯುತ್ತಿವೆ. ಪಾರಂಪರಿಕ ಕೃಷಿ ಪದ್ಧತಿ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿಗಳ ಸಾಧಕ ಬಾಧಕಗಳ ಬಗ್ಗೆ ಕೃಷಿ ವಿಜ್ಞಾನಿಗಳು ಚರ್ಚೆ ನಡೆಸುತ್ತಿದ್ದರೆ. ಹೊಸಹೊಸ ಪ್ರಯೋಗಗಳು ನಡೆಯುತ್ತಿವೆ. ಇದರ ಫಲಸ್ವರೂಪವಾಗಿ ಬಂದಿರುವುದೇ ಸಾವಯವ ಬೇಸಾಯ ಪದ್ಧತಿ.

**ವಿಷಯ ವಿಸ್ತರಣೆ :–** ಬೆಳೆಯ ಆವರ್ತನೆ, ಹಸಿರು ಗೊಬ್ಬರ, ಮಿಶ್ರಗೊಬ್ಬರ, ಜೈವಿಕವಾಗಿ ಕೀಟಗಳ ನಿಯಂತ್ರಣಗಳನ್ನು ಅವಲಂಬಿತಗೊಂಡಿರುವುದೇ ಸಾವಯವ ಬೇಸಾಯ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ಧತಿಗಳನ್ನು ಅಂತಾರಾಷ್ಟ್ರೀಯವಾಗಿ ನಿಯಮಗಳಿಗೊಳಪಡಿಸಲಾಗಿದೆ ಅಂತಾರಾಷ್ಟ್ರೀಯ ಆಶ್ರಯ ಸಂಘಟನೆಯು ಸಾವಯವ ಸಮಷ್ಟಿಯನ್ನು ರಚಿಸುವುದಕ್ಕಾಗಿ 1972ರಲ್ಲಿ ಸ್ಥಾಪಿಸಲಾಗಿದೆ. ಸಾವಯವ ಚಳುವಳಿ 1930 – 1940 ರ ದಶಕದಲ್ಲಿ ಬೇಸಾಯ ಕ್ಷೇತ್ರವನ್ನು ಕೃತಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಬಿಸುವುದನ್ನು ಹಿಮ್ಮೆಟ್ಟಿಸುವ ಸಲುವಾಗಿ ಪ್ರಾರಂಭವಾಯಿತು.ಸರ್ ಆಲ್ಬರ್ಟ್ ಹೊವಾರ್ಡ್ ಅವರನ್ನು ಸಾವಯವ ಬೇಸಾಯದ ಪಿತಾಮಹನೆಂದು ವಿಶೇಷವಾಗಿ ಪರಿಗಣಿಸಲಾಗಿದೆ. ವಿಶ್ವದ ಒಟ್ಟು ಕೃಷಿ ಉತ್ಪನ್ನದ ಪ್ರಮಾಣವನ್ನು ಪರಿಗಣಿಸಿದಾಗ ಸಾವಯವ ಉತ್ಪನ್ನ ಸಣ್ಣ ಪ್ರಮಾಣವೆನಿಸುತ್ತದೆಯಾದರೂ ಅದು ಅನೇಕ ರಾಷ್ಟ್ರಗಳಲ್ಲಿ ವೇಗವಾಗಿ ಬೆಳೆಯುತ್ತಿದೆ.ಸಾವಯವ ವ್ಯವಸಾಯವು ಅರ್ಥಪೂರ್ಣವಾದ ಸಾಮಾಜಿಕ ಆರ್ಥಿಕ ಮತ್ತು ಪರಿಸರ ವಿಜ್ಞಾನದ ಸಮರ್ಥನೀಯ ಬೆಳವಣಿಗೆಗಾಗಿ, ವಿಶೇಷವಾಗಿ ಬಡ ರಾಷ್ಟ್ರಗಳ ಬೆಳವಣಿಗೆಗೆ ಮಹತ್ವಪೂರ್ಣ ಕೊಡುಗೆ ನೀಡುತ್ತದೆ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ಧತಿಗಳನ್ನು ಅಂತಾರಾಷ್ಟ್ರೀಯವಾಗಿ ನಿಯಮಗಳಿಗೆ ಒಳಪಡಿಸಲಾಗಿದೆ ಮತ್ತು ಕಾನೂನುಬದ್ಧವಾಗಿ ವಿಧಿಸಲಾಗಿದೆ. ಕರ್ನಾಟಕದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲೆಂದು 'ಸಾವಯವ ಕೃಷಿ ಮಿಷನ್' ರಚಿಸಲಾಗಿದೆ.

**ಉಪಸಂಹಾರ :–** ಸಾವಯವ ವ್ಯವಸಾಯವು ಒಂದು ಉತ್ತಮ ಜ್ಞಾನಯುಕ್ತ ಕೇಂದ್ರೀಕೃತ ಉತ್ಪಾದನೆಯ ವ್ಯವಸ್ಥೆಯಾಗಿದೆ. ಮತ್ತು ಹೆಚ್ಚು ಇಳುವರಿ ನೀಡುವ ಬೇಸಾಯ ವ್ಯವಸ್ಥೆಗಳಿಗಿಂತ ಹೆಚ್ಚು ಪರಿಸರ ಸ್ನೇಹಿಯಾಗಿದೆ.ಆದ್ದರಿಂದ ಇದನ್ನು ರೈತರು ಅಳವಡಿಸಿಕೊಳ್ಳುವ ಮೂಲಕ ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳಬಹುದೆಂಬುದು ನನ್ನ ಅಭಿಪ್ರಾಯವಾಗಿದೆ.

## ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ

**ಪ್ರಸ್ತಾವನೆ :** ಶಿಕ್ಷಣ ಮಾನವನ ಮೂಲಭೂತ ಅಗತ್ಯತೆಗಳಲ್ಲೊಂದಾಗಿದೆ. ಶಿಕ್ಷಣವಿಲ್ಲದೆ ಮಾನವ ಪರಿಪೂರ್ಣನಾಗಲಾರ.ಆದ್ದರಿಂದಲೇ ಸರ್ವರಿಗೂ ಶಿಕ್ಷಣ ಇಂದಿನ ಅಗತ್ಯವಾಗಿದೆ.ಈ ದಿಸೆಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಹೆಚ್ಚಿನದಾಗಿದೆ.

**ವಿಷಯ ನಿರೂಪಣೆ:** ಏಕಕಾಲದಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಜನರಿಗೆ ವಿಷಯಗಳನ್ನು ತಿಳಿಸುವ ಸಾಧನಗಳೇ ಸಮೂಹ ಮಾಧ್ಯಮಗಳು. ಪತ್ರಿಕೆಗಳು, ಸಿನಿಮಾ, ರೇಡಿಯೊ, ದೂರದರ್ಶನ, ಟೆಲಿಫೋನ್, ಕಂಪ್ಯೂಟರ್, ಮೊಬೈಲ್, ಅಂತರ್ಜಾಲ ಮೊದಲಾದವುಗಳು ಪ್ರಮುಖ ಸಮೂಹ ಮಾಧ್ಯಮಗಳಾಗಿವೆ. ದೈನಂದಿನ, ಸಾಪ್ತಾಹಿಕ, ಪಾಕ್ಷಿಕ ಹಾಗೂ ಮಾಸಿಕ ಮೊದಲಾದ ಪತ್ರಿಕೆಗಳು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಉಪಯುಕ್ತ ಮಾಹಿತಿ ನೀಡುವ ಮೂಲಕ ಪ್ರಮುಖ ಮಾಧ್ಯಮವಾಗಿದೆ. ಹಾಗೆಯೇ ರೇಡಿಯೋ ಸುಲಭವಾಗಿ ಎಲ್ಲರಲೂ ಖರೀದಿಸಬಹುದಾದ ಸಾಧನವಾಗಿದ್ದು ಎಲ್ಲ ಕಡೆಯಲ್ಲೂ ಸುಲಭವಾಗಿ ಬಳಸಬಹುದಾದ ಸಾಧನವಾಗಿದೆ. ಇದರಿಂದ ಶಿಕ್ಷಣ ಕ್ಷೇತ್ರಕ್ಕೆ ಅಲ್ಲದೆ ಜ್ಞಾನದ ದೃಷ್ಟಿಯಿಂದ ಮತ್ತಿತರ ಕ್ಷೇತ್ರಗಳ ಎಲ್ಲಾ ಮಾಹಿತಿಗಳೂ ಲಭ್ಯವಾಗುತ್ತವೆ. ದೂರದರ್ಶನವು ದೃಕ್ ಶ್ರವಣ ಮಾಧ್ಯಮವಾಗಿದ್ದು ಪರಿಣಾಮಕಾರಿಯಾದ ಮಾಧ್ಯಮವಾಗಿದೆ ಇದರಿಂದ ಶಿಕ್ಷಣ ಪ್ರಸಾರ ಸುಲಭ ಸಾಧ್ಯವಾಗಿದೆ.ಉಪಗ್ರಹ ಆಧಾರಿತ ತರಬೇತಿಗಳು, ಸಂದರ್ಶನಗಳು, ಮಾಹಿತಿಗಳು, ಪರೀಕ್ಷೆಗಳನ್ನು ಸುಲಭವಾಗಿ ನಾವು ಇದ್ದ ಕಡೆಯಿಂದಲೇ ನಡೆಸಬಹುದಾಗಿದೆ ಮತ್ತು ವಿವರಗಳನ್ನು ಪಡೆಯಬಹುದಾಗಿದೆ.ನಾವು ತಿಳಿಯದ ವಿಚಾರಗಳನ್ನು ಕುಳಿತಲ್ಲಿಯೇ ಕಂಪ್ಯೂಟರ್‌ನ ಅಂತರ್ಜಾಲದಿಂದ ಪಡೆಯಬಹುದಾಗಿದೆ.ಮೊಬೈಲ್ ಮತ್ತು ಟೆಲಿಫೋನ್‌ಗಳೂ ಸಹಾ ಶಿಕ್ಷಣ ಪ್ರಸಾರದಲ್ಲಿ ಪ್ರಮುಖ ಮಾಧ್ಯಮಗಳಾಗಿವೆ.

**ಉಪಸಂಹಾರ :** ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉತ್ತಮವಾದ ಅಭಿವೃದ್ಧಿ ಸಾಧಿಸಿದ್ದು ಶಿಕ್ಷಣ ಕ್ಷೇತ್ರದಲ್ಲಿ ಈ ಸಮೂಹ ಮಾಧ್ಯಮಗಳ ಬಳಕೆ ಪೂರಕವಾಗಿದ್ದು ಮಹತ್ವದ ಪಾತ್ರ ವಹಿಸಿದೆ.

## ಸ್ವಚ್ಛ ಭಾರತ ಅಭಿಯಾನ

**ಪ್ರಸ್ತಾವನೆ** :ನಮ್ಮ ಆರೋಗ್ಯದ ದೃಷ್ಟಿಯಿಂದ ನಾವು ವಾಸಿಸುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬರೂ ಸ್ವಯಂ ಪ್ರೇರಿತರಾಗಿ ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು.ಇದು ನಮ್ಮ ಮನೆ ಪರಿಸರದಿಂದಲೇ ಪ್ರಾರಂಭಿಸಬೇಕು.

**ವಿಷಯ ನಿರೂಪಣೆ :** 'ಆರೋಗ್ಯವೇ ಭಾಗ್ಯ' ಎಂಬ ನಾಣ್ನುಡಿ ನಮ್ಮಲ್ಲಿದೆ ಉತ್ತಮ ಆರೋಗ್ಯಕ್ಕೆ ಉತ್ತಮ ಹಾಗೂ ಸ್ವಚ್ಛವಾದ ಪರಿಸರ ಅಗತ್ಯ. ಇದಕ್ಕಾಗಿಯೇ ನಮ್ಮ ಇಂದಿನ ಪ್ರಧಾನ ಮಂತ್ರಿಗಳು ಗಾಂಧೀಜಿಯವರ ಜನ್ಮದಿನವಾದ 2.10.2014 ರಂದು ಸ್ವಚ್ಛ ಭಾರತ ಅಭಿಯಾನವನ್ನು ಪ್ರಾರಂಭಿಸಿದರು.ಗಾಂಧೀಜಿಯವರು ಹುಟ್ಟಿ 150 ವರ್ಷ ಪೂರ್ಣಗೊಳ್ಳುವ 2.10.2019ಕ್ಕೆ ಈ ಯೋಜನೆಯ ಗುರಿಯನ್ನು ಇಟ್ಟುಕೊಳ್ಳಲಾಗಿದೆ.ಈ ಅವಧಿಯಲ್ಲಿ ಸಂಪೂರ್ಣವಾಗಿ ಸ್ವಚ್ಛಭಾರತ ನಿರ್ಮಾಣವಾಗಬೇಕು ಈ ದಿಸೆಯಲ್ಲಿ ಈಗಾಗಲೇ ಹಳ್ಳಿಗಳಲ್ಲಿ ನಗರಗಳಲ್ಲಿ ತಾವು ವಾಸಿಸುವ ಪ್ರದೇಶಗಳಲ್ಲಿ ಕೆಲಸ ಮಾಡುವ ಸ್ಥಳಗಳಲ್ಲಿ ಸ್ವಚ್ಛತಾ ಆಂದೋಲನವನ್ನು ಕೈಗೆತ್ತಿಕೊಳ್ಳಲಾಗಿದೆ.ಇದರಿಂದ ಉತ್ತಮ ಪರಿಸರ ನಿರ್ಮಾಣವಾಗುತ್ತಿದೆ.ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿಯಾಗುತ್ತಿದ್ದು ಇನ್ನೂ ಉತ್ತಮಗೊಳ್ಳಬೇಕಿದೆ ಜನರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿದೆ. ಸಮೂಹ ಮಾಧ್ಯಮಗಳು ಇದನ್ನು ಯಶಸ್ವಿಗೊಳಿಸುವಲ್ಲಿ ಪೂರ್ಣ ಸಹಕಾರ ನೀಡುತ್ತಿವೆ. ದೇಶದಾದ್ಯಂತ ಈ ಅಭಿಯಾನವು ಉತ್ತಮವಾಗಿ ಅನುಷ್ಠಾನಗೊಳ್ಳುತ್ತಿರುವುದು ಸಂತೋಷದ ವಿಷಯ.

**ಉಪಸಂಹಾರ :** ಸ್ವಚ್ಛ ಭಾರತ ನಿರ್ಮಾಣದ ಕನಸನ್ನು ನನಸು ಮಾಡೋಣ ಈ ಯೋಜನೆಯನ್ನು ಸಾಕಾರಗೊಳಿಸುವಲ್ಲಿ ಪ್ರತಿವಾರ ಕೇವಲ ಎರಡು ಗಂಟೆಗಳ ಅವಧಿಯನ್ನು ಮೀಸಲಿಡೋಣ ಈ ಮೂಲಕ ಪ್ರಧಾನ ಮಂತ್ರಿಗಳ ಕನಸನ್ನು ನನಸಾಗಿಸುವುದರ ಮೂಲಕ ಅಭಿಯಾನವನ್ನು ಯಶಸ್ವಿಗೊಳಿಸೋಣ.

## ತ್ಯಾಜ್ಯವಸ್ತುಗಳ ನಿರ್ವಹಣೆ

**ಪ್ರಸ್ತಾವನೆ :** ಕಸದ ಸಂಗ್ರಹಣೆ, ಸಂಸ್ಕರಣೆ, ಪುನರ್ಬಳಕೆ ಇಂದು ಮಾನವನ ಭೌತಿಕ ಪರಿಸರ ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಕೈಗಾರಿಕೀಕರಣ, ನಗರೀಕರಣ, ಸಂಸ್ಕೃತೀಕರಣ, ಜಾಗತೀಕರಣದ ಅಬ್ಬರದಲ್ಲಿ ದಿನದಿಂದ ದಿನಕ್ಕೆ, ಕ್ಷಣದಿಂದ ಕ್ಷಣಕ್ಕೆ ತ್ಯಾಜ್ಯವಸ್ತುಗಳ ನಿರ್ವಹಣೆ ಒಂದು ಸಮಸ್ಯೆಯಾಗುತ್ತಿದೆ.

**ವಿಷಯ ನಿರೂಪಣೆ** :ಮಾನವನು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸಿ ಬಿಸಾಡುವ ನಿರುಪಯುಕ್ತ ವಸ್ತುಗಳೇ ತ್ಯಾಜ್ಯವಸ್ತುಗಳು. ಇವುಗಳಲ್ಲಿ ಮೂರು ವಿಧ.ಘನತ್ಯಾಜ್ಯವಸ್ತುಗಳು, ದ್ರವತ್ಯಾಜ್ಯವಸ್ತುಗಳು ಮತ್ತು ಅನಿಲತ್ಯಾಜ್ಯ ವಸ್ತುಗಳು.ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ ಪರಿಸರ ನಾಶವಾಗುತ್ತದೆ.ಮೊದಲ ಹಂತದಲ್ಲಿ ಮನೆ, ಕಚೇರಿ ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಲು, ವೈಜ್ಞಾನಿಕರೀತಿಯಲ್ಲಿ ವಿಂಗಡಿಸಲು ಸೂಕ್ತವಾದ ವ್ಯವಸ್ಥೆ ಮಾಡಿಕೊಳ್ಳಬೇಕು.ಮರುಬಳಕೆಗೆ ಯೋಗ್ಯವಾದ ತ್ಯಾಜ್ಯವಸ್ತುಗಳನ್ನು ಮರುಬಳಕೆಗೂ ಮರುಬಳಕೆ ಮಾಡಲಾಗದ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ದಹಿಸಿಬೇಕು ಅಥವಾ ಭೂಮಿಯಲ್ಲಿ ಹೂಳಬೇಕು.ಅಮೆರಿಕದಲ್ಲಿ ಪ್ರತಿವರ್ಷ ರಿಸೈಕಲಿಂಗ್ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ.ತ್ಯಾಜ್ಯವಸ್ತುಗಳಿಂದ ಸುಂದರ ಕಲಾಕೃತಿಗಳನ್ನು ತಯಾರಿಸುತ್ತಾರೆ.ನದಿಗಳನ್ನು ದತ್ತು ತೆಗೆದುಕೊಂಡು ತ್ಯಾಜ್ಯವಸ್ತುಗಳು ನದಿಗೆ ಸೇರದಂತೆ ನಿಗವಹಿಸುತ್ತಾರೆ.ವಿಯೆನ್ನಾದಲ್ಲಿ ದಹನಕ್ರಿಯಾ ಸ್ಥಾವರ ನಿರ್ಮಿಸಿರುತ್ತಾರೆ.

**ಉಪಸಂಹಾರ** :ತ್ಯಾಜ್ಯವಸ್ತುಗಳ ನಿರ್ವಹಣೆ ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕಾಂಪೋಸ್ಟ ತಯಾರಿಕೆ, ರಿಸೈಕಲಿಂಗ್ ಮಾಡುವುದನ್ನು ಹವ್ಯಾಸ ಮಾಡಿಕೊಂಡರೆ ಸ್ವಚ್ಛ ಭಾರತ ಅಭಿಯಾನಕ್ಕೆ ಚೊಚ್ಚಲು ಕಾಣಿಕೆ ನೀಡಿದಂತಾಗುತ್ತದೆ.ಈ ಬಗ್ಗೆ ಜನರಿಗೆ ಅರಿವನ್ನು ಉಂಟುಮಾಡುವ ಕಾರ್ಯಕ್ರಮವನ್ನು ಏರ್ಪಡಿಸಬೇಕು.ಇದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.